


ಕಮಲ ಮಂದಿರ, ಹಂಪಿ

# ಅಧ್ಯಾಯ 1 ಕರ್ನಾಟಕದ ವೈಭವ



ಅಧ್ಯಾಯ ೧



ಕರ್ನಾಟಕದ ಸೂರ್ಯಕಾಂತಿ ವಧನ

# ಕರ್ನಾಟಕದ ವೈಭವ

ಅತ್ಯದ್ಭುತ ವೈವಿಧ್ಯತೆಯುಳ್ಳ ಭೂಸ್ವರೂಪ, ಹಚ್ಚ ಹಸಿರು ಅರಣ್ಯಗಳು ಹಾಗೂ ವೈವಿಧ್ಯಪೂರ್ಣ ವನ್ಯಮೃಗಗಳಿಂದ ತುಂಬಿರುವ, ಕನ್ನಡ ಮಾತನಾಡುವ ಜನರ ನೆಲೆಬೀಡಾದ ಕರ್ನಾಟಕ ರಾಜ್ಯವು ರಮಣೀಯ. ನಿಸರ್ಗದ ಔದಾರ್ಯವು, ಅದರ ಸಾಮಾಜಿಕ ಸೌಹಾರ್ದತೆ, ಉದಾರತೆ ಹಾಗೂ ಸಹಿಷ್ಣುತೆಗಳ ಕುರುಹಾಗಿ ಜನರ ವರ್ಣಮಯ ಜೀವನಶೈಲಿ ಬಹುಸಂಸ್ಕೃತಿ ಪರಂಪರೆ ಹಾಗೂ ವರ್ಣರಂಜಿತ ಜೀವನಶೈಲಿಗಳಲ್ಲಿ ಅಭಿವ್ಯಕ್ತವಾಗಿದೆ. ಇದರೊಂದಿಗೆ, ವಾಸ್ತು ವಿನ್ಯಾಸ, ಶಿಲ್ಪಕಲೆ, ಸಾಹಿತ್ಯ, ಸಂಗೀತ, ನೃತ್ಯ ಹಾಗೂ ವರ್ಣರಂಜಿತ ಉತ್ಸವಗಳಲ್ಲಿ ಕಲಾತ್ಮಕವಾದ ಸೃಜನಶೀಲತೆಯು ವ್ಯಕ್ತವಾಗಿದೆ. ಪ್ರತಿಯೊಂದು ಗ್ರಾಮ, ಉಪಗ್ರಾಮ, ಪಟ್ಟಣ ಹಾಗೂ ನಗರಕ್ಕೂ, ಅದರದೇ ಆದ ಘಟನೆಗಳ ಪಂಚಾಂಗವಿದ್ದು, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸಾಮರಸ್ಯಕ್ಕೆ ಕೊಡುಗೆಯನ್ನು ನೀಡುತ್ತದೆ. ಹೀಗೆ ಕರ್ನಾಟಕವು ವೈವಿಧ್ಯಮಯ ಪರಂಪರೆ ಹಾಗೂ ಆಚರಣೆಗಳಿಂದ ಶ್ರೀಮಂತವಾಗಿದೆ.

ಪ್ರತ್ಯೇಕ ಪ್ರಾದೇಶಿಕ ಗುಣಲಕ್ಷಣಗಳಿದ್ದರೂ, ಅಖಂಡ ಭಾರತದ ಸಾಂಸ್ಕೃತಿಕ ಪರಿಸರದ ಭಾಗವೆಂದು ಕರ್ನಾಟಕವನ್ನು ಪರಿಗಣಿಸಲಾಗಿದೆ. ಹಲವಾರು ಧಾರ್ಮಿಕ ಸುಧಾರಕರು ಹಾಗೂ ಅವರ ಸಿದ್ಧಾಂತಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಹಾಗೂ ವೈಷ್ಣವ ತತ್ವಸಿದ್ಧಾಂತಗಳ ಬೋಧನೆಯ ಸಮನ್ವಯತೆಯನ್ನು ಸೃಷ್ಟಿಸುವ ಸಮ್ಮಿಲನಾ ತಾಣವಾಗಿದೆ. ಇವೆಲ್ಲವೂ ಕರ್ನಾಟಕದಲ್ಲಿ ಅಭ್ಯುದಯ ಹೊಂದಿದ್ದು, ಜಗತ್ತಿನಾದ್ಯಂತ ಇರುವ ಪಂಡಿತರು ಇದರ ಅಧ್ಯಯನವನ್ನು ಮಾಡುತ್ತಾರೆ.

ಕರ್ನಾಟಕದ ಸ್ವರೂಪ ಹಾಗೂ ಗುಣವಿಶೇಷಗಳು, ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆಯಲ್ಲಿ ಅದ್ಭುತ ರೀತಿಯಲ್ಲಿ ಅಭಿವ್ಯಕ್ತವಾಗಿದೆ

# ನಾಡಗೀತೆ

ಜೈ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ
ಜಯ ಸುಂದರ ನದಿ ವನಗಳ ನಾಡೆ ಜೈ ಹೇ ರಸ  ಋಷಿಗಳ ಬೀಡೆ
ಭೂದೇವಿಯ ಮುಕುಟದ ನವ ಮಣಿಯೇ ಗಂಧದ ಚಂದದ ಹೊನ್ನಿನ ಗಣಿಯೇ
ರಾಘವ ಮಧುಸೂಧನರವತರಿಸಿದ ಭಾರತ ಜನನಿಯ ತನುಜಾತೆ
ಜನನಿಯ ಜೋಗುಳ ವೇದದ ಘೋಷ, ಜನನಿಗೆ ಜೀವವು ನಿನ್ನಾವೇಶ
ಹಸುರಿನ ಗಿರಿಗಳ ಸಾಲೇ, ನಿನ್ನಯ ಕೊರಳಿನ ಮಾಲೆ
ಕಪಿಲ ಪತಂಜಲ ಗೌತಮ ಜನನುತ ಭಾರತ ಜನನಿಯ ತನುಜಾತೆ
ಶಂಕರ ರಾಮಾನುಜ ವಿದ್ಯಾರಣ್ಯ ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರ ಪೊನ್ನ ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸನ ಮಂಗಳ ಧಾಮ ಕವಿ ಕೋಗಿಲೆಗಳ ಪುಣ್ಯಾರಾಮ

ನಾನಕ ರಾಮಾನಂದ ಕಬೀರರ ಜಯಭಾರತ ಜನನಿಯ ತನುಜಾತೆ
ತೈಲಪ ಹೊಯ್ಸಳರಾಳಿದ ನಾಡೆ ಡಂಕಣ ಜಕಣರ ನೆಚ್ಚಿನ ಬೀಡೆ
ಕೃಷ್ಣ ಶರಾವತಿ ತುಂಗ ಕಾವೇರಿಯ ವರ ರಂಗ
ಚೈತನ್ಯ ಪರಮಹಂಸ ವಿವೇಕರ ಭಾರತ ಜನನಿಯ ತನುಜಾತೆ
ಸರ್ವ ಜನಾಂಗದ ಶಾಂತಿಯ ತೋಟ ರಸಿಕರ ಕಂಗಳ ಸೆಳೆಯುವ ನೋಟ
ಹಿಂದು ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ ಕನ್ನಡ ತಾಯಿಯ ಮಕ್ಕಳ ದೇಹ
ಜೈ ಭಾರತ ಜನನಿಯ ತನುಜಾತೇ ಜಯ ಹೇ ಕರ್ನಾಟಾಕ ಮಾತೆ
ಜೈ ಕರ್ನಾಟಕ ಮಾತೆ ॥

## ಅನುವಾದ

*ಭಾರತ ಮಾತೆಯ ಪುತ್ರಿಯೇ, ಕನ್ನಡ ಮಾತೆಯೇ ಜಯವು ನಿನಗೆ! ಸುಂದರ ನದಿಗಳು ಹಾಗೂ ವನಗಳ ತಾಣವಾದ, ಋಷಿ-ಸಂತರ ನೆಲೆ ಬೀಡಿಗೆ ಜೈ.ಭೂತಾಯಿಯ ಕಿರೀಟದ ಹೊಚ್ಚ-ಹೊಸ ಒಡವೆಯು ನೀನು, ನೀನು ಬಂಗಾರ ಹಾಗೂ ಶ್ರೀಗಂಧದ ಸುಂದರ ಖನಿ.ರಾಮ ಹಾಗೂ ಕೃಷ್ಣರು ಅವತಾರ ತಾಳಿದ ಭಾರತಾಂಬೆಯ ಮಗಳಾದ ಕರ್ನಾಟಕ ಮಾತೆಯೇ, ಜಯವು ನಿನಗೆ.*

*ವೇದದ ಘೋಷವೇ ನಿನ್ನ ತಾಯಿಯ ಜೋಗುಳವು ನಿನಗೆ, ಹಾಗೂ ನಿನ್ನ ಭಾವತೀವ್ರತೆಯೇ ಜೀವವು ಅವಳಿಗೆ.ಹಸಿರು ಗಿರಿಗಳ ಸಾಲೇ ನಿನ್ನ ಕಂಠಾಭರಣವು.ಕಪಿಲ, ಪತಂಜಲಿ, ಗೌತಮ ಹಾಗೂ ಜಿನರು ಹೊಗಳುವ ಭಾರತ ಮಾತೆಯ ಮಗಳಾದ, ಕರ್ನಾಟಕ ಮಾತೆಯೇ, ಜಯವು ನಿನಗೆ*

*ಶಂಕರ, ರಾಮಾನುಜ, ವಿದ್ಯಾರಣ್ಯ, ಬಸವೇಶ್ವರ ಹಾಗೂ ಮಧ್ವಾಚಾರ್ಯರು ನೆಲೆಸಿದ ಪವಿತ್ರ ವನ ನೀನು.ರನ್ನ, ಷಡಕ್ಷರಿ, ಪೊನ್ನ, ಪಂಪ, ಲಕ್ಷ್ಮೀಶ ಹಾಗೂ ಜನ್ನರ ಪವಿತ್ರ ತಾಣವೂ ನೀನು. ಕವಿ-ಕೋಗಿಲೆಗಳ ಶ್ಲಾಘನೆಯ ವನವು ನೀನು.ನಾನಕ, ರಾಮಾನಂದ ಹಾಗೂ ಕಬೀರರು ನೆಲೆಸಿರುವ ಭಾರತ ಮಾತೆಯ ಮಗಳಾದ ಕರ್ನಾಟಕ ಮಾತೆಗೆ ಜಯವಾಗಲಿ.*

*ತೈಲಪ ಹಾಗೂ ಹೊಯ್ಸಳರು ಆಳಿದ ನಾಡಿದು, ಹಾಗೂ ಡಂಕಣ ಹಾಗೂ ಜಕ್ಕಣರ ಅಚ್ಚುಮೆಚ್ಚಿನ ನೆಲೆ.ಕೃಷ್ಣ, ಶರಾವತಿ, ತುಂಗ ಹಾಗೂ ಕಾವೇರಿ ನದಿಗಳು ಹರಿಯುವ ಪುಣ್ಯದ ನಾಡಿದು.ಚೈತನ್ಯ, ಪರಮಹಂಸ ಹಾಗೂ ವಿವೇಕಾನಂದರ ನೆಲೆಯಾದ ಭಾರತ ಮಾತೆಯ ಮಗಳು, ಕರ್ನಾಟಕ ಮಾತೆಗೆ ಜಯವಾಗಲಿ.*

*ಎಲ್ಲ ಸಮುದಾಯಗಳು ಇಲ್ಲಿ ಶಾಂತಿಯುತವಾಗಿ ನೆಲೆಸಿವೆ; ಎಲ್ಲ ರಸಿಕರ  ಕಣ್ಮನಗಳನ್ನೂ ಸೆಳೆದಿವೆ.ಹಿಂದು, ಕ್ರೈಸ್ತ, ಮುಸಲ್ಮಾನ, ಪಾರ್ಸಿ ಹಾಗೂ ಜೈನರು ವಿರಮಿಸುವ ತೋಟದಂತೆ ಇದು; ಕನ್ನಡ ಮಾತೆಯ ಮಕ್ಕಳು ಮೈವೆತ್ತಂತೆ ಇರುವ, ಕನ್ನಡವು ನಾಲಗೆಯ ಮೇಲೆ ನಲಿದಾಡುವುದು ಇಲ್ಲೇ.ಭಾರತ ಮಾತೆಯ ಮಗಳಾದ ಕನ್ನಡ ಮಾತೆಗೆ ಜಯವಾಗಲಿ.*

ವೈವಿಧ್ಯಮಯ ಪ್ರಾದೇಶಿಕ ವೈಶಿಷ್ಟ್ಯಗಳ ಮೂಲಕ, ಕರ್ನಾಟಕದ ಸಂಸ್ಕೃತಿಯು ಅಭಿವ್ಯಕ್ತಗೊಂಡಿದೆ.ಭೂಮಿಯ ಆಳಕ್ಕೆ ತನ್ನ ಬೇರುಗಳನ್ನು ಊರಿದ ಬೃಹತ್ ಮರದಂತೆ ಇದು ದೃಢವಾಗಿ ನಿಂತಿದೆ.ರಾಜ್ಯ ಸಾಮ್ರಾಜ್ಯಗಳ ಹಲವಾರು ದಾಳಿಗಳು, ನೂರಾರು ಯುದ್ಧಗಳು, ಧಾರ್ಮಿಕ ಕ್ರಾಂತಿಗಳೂ ಇಲ್ಲಿ ನಡೆದಿವೆ.ಇಷ್ಟಾದರೂ, ಜೀವನದತ್ತ ಸ್ಥಳೀಯ ಜನರ ಧೋರಣೆ ಹಾಗೂ ದೃಷ್ಟಿಕೋನದ ಪರಿಯು ಬದಲಾವಣೆ ಆಗಿಲ್ಲ.ಮರದ ಎಲೆಗಳು ಉದುರಿ, ಹೊಸ ಚಿಗುರು ಬರುವಂತೆ, ತನ್ನ ಆಂತರ್ಯದ ಸ್ಫೂರ್ತಿಸೆಲೆಯಿಂದ ಮತ್ತೆ, ಮತ್ತೆ ಈ ಮಣ್ಣಿನ ಸಂಸ್ಕೃತಿಯು ಪುನಃಶ್ಚೇತನಗೊಂಡಿದೆ.

ಇತರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದ ಸಾಕ್ಷರತಾ ಪ್ರಮಾಣವು ಹೆಚ್ಚಾಗಿದೆ.ಅನೇಕ ಶೈಕ್ಷಣಿಕ ಸಂಸ್ಥೆ ಹಾಗೂ ಸಂಶೋಧನಾ ಕೇಂದ್ರಗಳಿರುವ ಕರ್ನಾಟಕವನ್ನು ಭಾರತದ ಜ್ಞಾನ ಕೇಂದ್ರವೆಂದು ಪರಿಗಣಿಸಲಾಗುತ್ತದೆ.ವಿಜ್ಞಾನ ಹಾಗೂ ತಂತ್ರಜ್ಞಾನಗಳಲ್ಲೂ ಕರ್ನಾಟಕವೇ ಮುಂದಿದೆ.ಮಾಹಿತಿ ತಂತ್ರಜ್ಞಾನದ ಅನೇಕ ಬಹುರಾಷ್ಟ್ರೀಯ ಸಂಸ್ಥೆಗಳಿರುವ ರಾಜಧಾನಿಯಾದ ಬೆಂಗಳೂರು, "ಭಾರತದ ಸಿಲಿಕಾನ್ ಕಣಿವೆ" ಎಂಬ ಬಿರುದನ್ನು ಪಡೆದಿದೆ.ಜೊತೆಗೆ, ರಾಜ್ಯ ಸರ್ಕಾರ ಹಾಗೂ ಖಾಸಗಿ ವಲಯವು ನಡೆಸುತ್ತಿರುವ ಅನೇಕ ವಿಶಿಷ್ಟ ಉದ್ಯಮಗಳೂ ಕರ್ನಾಟಕದಲ್ಲಿವೆ. ಕೃಷಿ, ಉದ್ಯಮ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿ ಸಾಧಿಸಲು, ಉತ್ತಮ ನೀರಾವರಿ ಸೌಲಭ್ಯಗಳು ನೆರವಾಗಿವೆ.

## ಭೂಮಿ – ಪ್ರಾಕೃತಿಕ ಸಂಪತ್ತು

೧೧° ೩೧' ಹಾಗೂ ೧೮° ೪೫' ಉತ್ತರ ಅಕ್ಷಾಂಶ ಹಾಗೂ ೭೪° ೧೨' ಹಾಗೂ ೭೮° ೪೦' ಪೂರ್ವ ರೇಖಾಂಶಗಳ ನಡುವೆ ಕರ್ನಾಟಕ ರಾಜ್ಯವು ಹರಡಿಕೊಂಡಿದ್ದು, ಭಾರತ ಉಪಖಂಡದ ಪಶ್ಚಿಮ–ಮಧ್ಯ ಭಾಗದಲ್ಲಿ ಇದೆ.ಉತ್ತರದಿಂದ ದಕ್ಷಿಣಕ್ಕೆ ಗರಿಷ್ಠ ಉದ್ದವು ಸುಮಾರು ೭೦೦ ಕಿ.ಮೀ.ಗಳಷ್ಟು ಇದ್ದು, ಪೂರ್ವದಿಂದ ಪಶ್ಚಿಮಕ್ಕೆ ೪೦೦ ಕಿ.ಮೀ.ಇದೆ.ವಾಯವ್ಯ ದಿಕ್ಕಿಗೆ (ಉತ್ತರ–ಪಶ್ಚಿಮ) ಗೋವಾ, ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರ ಪ್ರದೇಶ, ದಕ್ಷಿಣ ಹಾಗೂ ಆಗ್ನೇಯ ದಿಕ್ಕಿನಲ್ಲಿ (ದಕ್ಷಿಣ–ಪೂರ್ವ) ತಮಿಳುನಾಡು, ನೈಋತ್ಯ ದಿಕ್ಕಿಗೆ (ದಕ್ಷಿಣ–ಪಶ್ಚಿಮ) ಕೇರಳ ಹಾಗೂ ಪಶ್ಚಿಮದಲ್ಲಿ ಅರಬ್ಬಿ ಸಮುದ್ರವಿದೆ.

### ಭೂ ವಿಸ್ತೀರ್ಣ ಹಾಗೂ ಜನಸಂಖ್ಯೆ

೭೪,೧೨೨ ಚದರ ಮೈಲಿಗಳ (೧,೯೧,೭೯೧ ಚದರ ಕಿಲೋಮೀಟರ್‌ಗಳು) ಪ್ರದೇಶದಲ್ಲಿ ಅಥವಾ ಭಾರತದ ಒಟ್ಟಾರೆ ಭೌಗೋಳಿಕ ಪ್ರದೇಶದ ೫.೮೩ ಪ್ರತಿಶತದಲ್ಲಿ ರಾಜ್ಯವು ಹರಡಿದೆ.ಪ್ರದೇಶವಾರು ಎಣಿಕೆಯಲ್ಲಿ, ರಾಜ್ಯವು ಭಾರತದ ೮ನೆಯ ದೊಡ್ಡ ರಾಜ್ಯ, ಜನಸಂಖ್ಯೆಯ ಪ್ರಕಾರ ೯ನೆಯ ದೊಡ್ಡ ರಾಜ್ಯವಾಗಿದೆ. ಕರ್ನಾಟಕ ಎಂಬ ಹೆಸರಿಗೆ ಅನೇಕ ನಿಷ್ಪತ್ತಿಗಳನ್ನು ಸೂಚಿಸಲಾಗಿದ್ದರೂ, ಸಾಮಾನ್ಯವಾಗಿ ಅಂಗೀಕೃತವಾದುದು, ಕರು ಹಾಗೂ ನಾಡು, ಅಂದರೆ ಎತ್ತರದ ಭೂಮಿ ಎಂಬ ಅರ್ಥವನ್ನು ಕೊಡುವ ಕನ್ನಡ ಪದಗಳಿಂದ ರೂಪುಗೊಂಡಿರುವುದು. ಕರ್ನಾಟಕದ ಉತ್ತರ ಭಾಗದಲ್ಲಿ ಕಾಣುವ ಕಪ್ಪು ಹತ್ತಿಯ ಮಣ್ಣಿಗೆ ಉಲ್ಲೇಖ ನೀಡುವ ಕರು (ಕಪ್ಪು) ಹಾಗೂ ನಾಡು (ಪ್ರದೇಶ) ಎಂದೂ ಕರುನಾಡನ್ನು ಅರ್ಥೈಸಿಕೊಳ್ಳಬಹುದು.ಕೃಷ್ಣಾ ನದಿಯ ದಕ್ಷಿಣ ಭಾಗಕ್ಕೆ ಇರುವ ಪರ್ಯಾಯ ದ್ವೀಪವಾದ ಭಾರತವನ್ನು ಸೂಚಿಸಲು ಬ್ರಿಟಿಷರು 'ಕರ್ನಾಟಿಕ್' (ಕೆಲವೊಮ್ಮೆ 'ಕರ್ನಾಟಕ್') ಎಂಬ ಪದವನ್ನು ಬಳಸುತ್ತಿದ್ದರು.

**ಕರ್ನಾಟಕದಲ್ಲಿ ೩೦ ಜಿಲ್ಲೆಗಳಿವೆ**

- ಬಾಗಲಕೋಟೆ
- ಬೆಂಗಳೂರು ಗ್ರಾಮಾಂತರ
- ಬೆಂಗಳೂರು ನಗರ
- ಬೆಳಗಾವಿ
- ಬಳ್ಳಾರಿ
- ಬೀದರ್
- ಬಿಜಾಪುರ
- ಚಾಮರಾಜನಗರ
- ಚಿಕ್ಕಬಳ್ಳಾಪುರ
- ಚಿಕ್ಕಮಗಳೂರು
- ಚಿತ್ರದುರ್ಗ
- ದಕ್ಷಿಣ ಕನ್ನಡ
- ದಾವಣಗೆರೆ
- ಧಾರವಾಡ
- ಗದಗ
- ಗುಲ್ಬರ್ಗಾ
- ಹಾಸನ
- ಹಾವೇರಿ
- ಕೊಡಗು
- ಕೋಲಾರ
- ಕೊಪ್ಪಳ
- ಮಂಡ್ಯ
- ಮೈಸೂರು
- ರಾಯಚೂರು
- ರಾಮನಗರ



- ಶಿವಮೊಗ್ಗ
- ತುಮಕೂರು
- ಉಡುಪಿ
- ಉತ್ತರ ಕನ್ನಡ
- ಯಾದಗಿರಿ

## ಭೂ ವಿವರಣೆ

ಭೌಗೋಳಿಕವಾಗಿ, ಸಂಪೂರ್ಣ ರಾಜ್ಯವನ್ನು ಮೂರು ನಿರ್ದಿಷ್ಟ ಪರಿಸರ ಪ್ರದೇಶಗಳಾಗಿ ವಿಂಗಡಿಸಬಹುದು.ಅತ್ಯಂತ ಪಶ್ಚಿಮ ಭಾಗಕ್ಕೆ ಅರಬ್ಬಿ ಕಡಲತೀರ ಹಾಗೂ ಪಶ್ಚಿಮ ಘಟ್ಟಗಳ ನಡುವೆ ತಗ್ಗಾದ ಕರಾವಳಿ ಪ್ರದೇಶವಿದೆ.ಅದರ ಪೂರ್ವಕ್ಕೆ, ಎತ್ತರದ ಪಶ್ಚಿಮ ಘಟ್ಟಗಳು, ಕರ್ನಾಟಕದ ದಕ್ಷಿಣದ ತುದಿಯಿಂದ ಬೆಳಗಾವಿ ಜಿಲ್ಲೆಯ ಉತ್ತರದ ತುದಿಯವರೆಗೂ ವಿಸ್ತರಿಸಿವೆ.ಈ ಪ್ರದೇಶವು ೩೦ ರಿಂದ ೫೦ ಕಿ.ಮೀ.ಗಳಿಗಿಂತ ಹೆಚ್ಚಾಗಿ ಇಲ್ಲದಿದ್ದರೂ, ಎತ್ತರಕ್ಕೆ ಬೆಳೆದ ನಿತ್ಯಹರಿದ್ವರ್ಣ ಕಾಡುಗಳಿಂದ ಆವೃತವಾದ ಅನೇಕ ಶಿಖರಗಳು ಇದಕ್ಕೆ ವಿಶಿಷ್ಟ ಸ್ವರೂಪವನ್ನು ನೀಡುತ್ತದೆ. ಪಶ್ಚಿಮದ ಕಡಿಮೆ ತಗ್ಗಿನ ಕರಾವಳಿ ಪ್ರದೇಶದಿಂದ ಅನೇಕ ಶೃಂಗೀಯ ಕಡಿದಾದ ಇಳಿಜಾರುಗಳು ಏಕಾಏಕಿ ಮೇಲೆದ್ದರೂ, ಪೂರ್ವ ಭಾಗಕ್ಕೆ ಅವು ಕ್ರಮೇಣ ಇಳಿಜಾರು ಪಡೆಯುತ್ತವೆ.ಈ ಗುಡ್ಡ ಪ್ರದೇಶದ ಮತ್ತಷ್ಟು ಪೂರ್ವ ಭಾಗಕ್ಕೆ, ಪೂರ್ವ ಘಟ್ಟಗಳ ತಗ್ಗಿನ ಶ್ರೇಣಿಯ ಬೆಟ್ಟಗಳನ್ನು ಪೂರ್ವಕ್ಕೆ ಹೊಂದಿದ, ನೈಋತ್ಯ–ಈಶಾನ್ಯ ದಿಕ್ಕಿನಲ್ಲಿ, ರಾಜ್ಯದ ಪೂರ್ವ ಸೀಮೆಯಲ್ಲಿ ಕಾಣುವ ವಿಶಾಲವಾದ ಪ್ರಸ್ಥಭೂಮಿ ಪ್ರದೇಶವಿದೆ.ಈ ಪ್ರಸ್ಥಭೂಮಿಯನ್ನು ದಕ್ಷಿಣ ಭಾಗ ಹಾಗೂ ಉತ್ತರ ಭಾಗವೆಂದು ಉಪ–ವಿಭಜಿಸಬಹುದು - ದಕ್ಷಿಣ ಭಾಗವು ತಗ್ಗಾದ ಬೆಟ್ಟ ಸಾಲುಗಳ ನಡುವೆ ಇರುವ ಸಮತಟ್ಟಾದ ಭೂಮಿಯಾದರೆ, ಉತ್ತರ ಭಾಗವು ವಿಶಾಲವಾಗಿ ಹರಡಿದ ಸಮತಟ್ಟಾದ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ

ಡಕ್ಕನ್ ಪ್ರಸ್ಥಭೂಮಿಯ ಅತ್ಯಂತ ದಕ್ಷಿಣ ಭಾಗವು ಕರ್ನಾಟಕದ ಪ್ರಮುಖ ಭೂ ಪ್ರದೇಶವಾಗಿದೆ. ಸರಾಸರಿ ಎತ್ತರದಲ್ಲಿ ಸಮುದ್ರ ಮಟ್ಟಕ್ಕಿಂತ ೬೦೦–೯೦೦ ಮೀಟರ್‌ಗಳಷ್ಟು ವ್ಯತ್ಯಾಸವಿದೆ. ಸಂಪೂರ್ಣ ಭೂಪ್ರದೇಶದಲ್ಲಿ ಬೆಟ್ಟ ಹಾಗೂ ಕಣಿವೆಗಳ ಉಬ್ಬು–ತಗ್ಗುಗಳು ಇವೆ. ಕೇವಲ ಅರಬ್ಬಿ ಸಮುದ್ರಕ್ಕೆ ಅಂಟಿಕೊಂಡಿರುವ ಕಿರಿದಾದ ಕರಾವಳಿಪ್ರದೇಶದಲ್ಲಿ ಮಾತ್ರ, ೩೦೦ ಮೀಟರ್‌ಗಳಿಗಿಂತ ಕಡಿಮೆ ಎತ್ತರದ ಭೂಮಿಯನ್ನು ಕಾಣಬಹುದು. ೧,೫೦೦ ಮೀಟರ್‌ಗಳಿಗಿಂತ ಎತ್ತರದ ಬಹಳಷ್ಟು ಶಿಖರಗಳು ಪಶ್ಚಿಮ ಹಾಗೂ ಪೂರ್ವ ಘಟ್ಟಗಳೆರಡರಲ್ಲೂ ಇವೆ. ಕರ್ನಾಟಕದ ಅತ್ಯಂತ ಎತ್ತರದ ಶಿಖರಗಳ ಪೈಕಿ, ಚಿಕ್ಕಮಗಳೂರು ಜಿಲ್ಲೆಯಲಿ



ಪಶ್ಚಿಮ ಘಟ್ಟಗಳ ನಿತ್ಯ ಹರಿದ್ವರ್ಣದ ಕಾನನ





ಮುಳ್ಳಯ್ಯನಗಿರಿ (೧,೯೨೫ ಮೀ.), ಬಾಬಾಬುಡನ್‌ಗಿರಿ (ಚಂದ್ರದ್ರೋಣ ಪರ್ವತ ೧,೮೯೪ ಮೀ.), ಹಾಗೂ ಕುದುರೆಮುಖ (೧,೮೯೫ ಮೀ.)ಗಳಿದ್ದರೆ, ಕೊಡಗು ಜಿಲ್ಲೆಯಲ್ಲಿ ಪುಷ್ಪಗಿರಿ (೧,೯೦೮ ಮೀ.) ಶಿಖರವಿದ್ದು, ೧,೫೦೦ ಮೀಟರ್‌ಗಳಿಗಿಂತ ಎತ್ತರದ ಒಟ್ಟು ಹನ್ನೆರಡು ಶಿಖರಗಳು ಇವೆ. ಸರಾಸರಿ (ಸಮುದ್ರ) ಮಟ್ಟದಿಂದ ವಿವಿಧ ಎತ್ತರಗಳಲ್ಲಿ ಬರುವ ಭೂಪ್ರದೇಶದ ಶೇಕಡಾವಾರು ಪ್ರಮಾಣವು ಹೀಗಿದೆ: ೧೫೦ ಮೀಟರ್‌ಗಳಿಗಿಂತ ಕಡಿಮೆ – ೫.೧೬ ಪ್ರತಿಶತ; ೧೫೦ರಿಂದ ೩೦೦ ಮೀಟರ್‌ಗಳು – ೧.೯೫ ಪ್ರತಿಶತ; ೩೦೦ರಿಂದ ೬೦೦ ಮೀಟರ್‌ಗಳು – ೪೩.೫೧ ಪ್ರತಿಶತ; ೬೦೦ರಿಂದ ೧,೩೫೦ ಮೀಟರ್‌ಗಳು – ೪೮.೮೧ ಪ್ರತಿಶತ ಹಾಗೂ ೧,೩೫೦ಕ್ಕಿಂತ ಎತ್ತರ – ೦.೫೭ ಪ್ರತಿಶತ.

ಪ್ರಾಕೃತಿಕವಾಗಿ, ಕರ್ನಾಟಕ ರಾಜ್ಯವು ನಿರ್ದಿಷ್ಟವಾಗಿ ಗುರುತಿಸಲಾಗುವ ಭಾರತದ ಎರಡು ಬೃಹತ್ ಪ್ರದೇಶಗಳ ಭಾಗವಾಗಿದೆ ೧) ಡೆಕ್ಕನ್ ಪ್ರಸ್ಥಭೂಮಿ ಹಾಗೂ ಕರಾವಳಿಯ ಸಮತಟ್ಟು ಪ್ರದೇಶ ಹಾಗೂ ೨ ದ್ವೀಪಗಳು. ಭೌಗೋಳಿಕವಾಗಿ ರಾಜ್ಯದಲ್ಲಿ, ಭೂವೈಶಿಷ್ಟ್ಯತೆಗಳುಳ್ಳ ನಾಲ್ಕು ಪ್ರದೇಶಗಳಿವೆ:

**೧.ಉತ್ತರ ಕರ್ನಾಟಕದ ಪ್ರಸ್ಥಭೂಮಿ:** ಉತ್ತರ ಕರ್ನಾಟಕದ ಪ್ರಸ್ಥಭೂಮಿಯಲ್ಲಿ ಬೆಳಗಾವಿ, ಬೀದರ್, ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ ಹಾಗೂ ಯಾದಗಿರಿ ಜಿಲ್ಲೆಗಳು ಸೇರಿವೆ.ಅದರ ಬಹುಭಾಗವು ಡೆಕ್ಕನ್ ಪಟ್ಟಿಯಿಂದ (ಕಪ್ಪು ಜ್ವಾಲಾಮುಖಿ ಶಿಲೆ, ಮುಖ್ಯವಾಗಿ ಬಸಾಲ್ಟ್ ಶಿಲೆ) ರೂಪಿತವಾಗಿದೆ.ಅದು ಸರಾಸರಿ ಸಮುದ್ರಮಟ್ಟಕ್ಕಿಂತ ೩೦೦–೬೦೦ ಮೀಟರ್‌ಗಳ ಸಾಮಾನ್ಯ ಎತ್ತರವಿರುವ ಏಕರೀತಿಯ, ವೃಕ್ಷರಹಿತ, ವಿಸ್ತೃತ ಪ್ರಸ್ಥಭೂಮಿ ಪ್ರದೇಶದಿಂದ ಪ್ರತಿನಿಧಿತವಾಗಿದೆ. ಆದರೆ, ಕೃಷ್ಣಾ, ಭೀಮಾ, ಘಟಪ್ರಭಾ ಹಾಗೂ ಮಲಪ್ರಭಾ ನದಿಗಳ ಬಯಲುಗಳು ನಡುವೆ ಕಾಣುವ ಜಲಾನಯನಗಳು, ಮೆಟ್ಟಿಲೋಪಾದಿಯ ಭೂಪ್ರದೇಶಗಳು, ಜಂಬುಮಣ್ಣಿನ ಕಡಿದಾದ ಇಳಿಜಾರುಗಳು ಹಾಗೂ ಉಳಿದ ಬೆಟ್ಟಗಳು ಹಾಗೂ ಏಣುಗಳು ಈ ವಿಸ್ತೃತ ಪ್ರಸ್ಥಭೂಮಿಯ ಏಕತಾನತೆಯ ಸ್ವರೂಪದಲ್ಲಿ ಬದಲಾವಣೆ ತರುತ್ತದೆ.ಸಾಮಾನ್ಯ ಇಳಿಜಾರು ಪೂರ್ವಕ್ಕೆ ಇದ್ದು, ಈ ಪ್ರದೇಶದ ಬಹುಭಾಗವು ಸಂಪದ್ಭರಿತ ಕಪ್ಪು ಹತ್ತಿ ಮಣ್ಣಿನಿಂದ ಆವೃತವಾಗಿದೆ.

**೨.ಮಧ್ಯ ಕರ್ನಾಟಕದ ಪ್ರಸ್ಥಭೂಮಿ:** ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ರಾಯಚೂರು, ಕೊಪ್ಪಳ ಹಾಗೂ ಶಿವಮೊಗ್ಗ ಜಿಲ್ಲೆಗಳನ್ನು ಮಧ್ಯ ಕರ್ನಾಟಕದ ಪ್ರಸ್ಥಭೂಮಿಯು ಒಳಗೊಂಡಿದೆ.ಡೆಕ್ಕನ್ ಟ್ರಾಪ್‌ನ ಉತ್ತರ ಕರ್ನಾಟಕ ಪ್ರಸ್ಥಭೂಮಿ ಹಾಗೂ ಹೋಲಿಕೆಯಲ್ಲಿ ಅಧಿಕ ಮೇಲ್ಮೈಯನ್ನು ಹೊಂದಿರುವ ನೈಸಿಕ್ ದಕ್ಷಿಣ ಕರ್ನಾಟಕ ಪ್ರಸ್ಥಭೂಮಿಯನ್ನು ಈ ಪ್ರದೇಶವು ಪ್ರತಿನಿಧಿಸುತ್ತದೆ.ಈ ಭಾಗವು, ಬಹುಪಾಲು ತುಂಗಭದ್ರಾ ನದಿಕಣಿವೆ ಪ್ರದೇಶದಿಂದ ಪ್ರತಿನಿಧಿಸಲ್ಪಟ್ಟಿದೆ.ಸಾಮಾನ್ಯ ಎತ್ತರವು ೪೫೦ರಿಂದ ೭೦೦ ಮೀಟರ್‌ಗಳ ನಡುವೆ ಇರುತ್ತದೆ.ಆದರೆ, ಪರಿವರ್ತಿತ ಭಾಗವು ಧಾರವಾಡ ಶ್ರೇಣಿಯ ಬಂಡೆಗಳಿಂದ ಮುಖ್ಯವಾಗಿ ರೂಪಿಸಲ್ಪಟ್ಟ ಸಮಾಂತರ ಏಣುಗಳ ಹಲವಾರು ಜೋಡಿಗಳನ್ನು ಅಲ್ಲಲ್ಲಿ ಕಾಣಬಹುದು.ಈ ರೀತಿಯ ಉಳಿಕೆಯ ಗುಡ್ಡಗಳ ಎತ್ತರವು, ಸರಾಸರಿ ಸಮುದ್ರ ಮಟ್ಟಕ್ಕಿಂತ ಸುಮಾರು ೯೦೦ ಮೀಟರ್‌ಗಳಷ್ಟು ಇದೆ.ಈ ಪ್ರದೇಶದ ಸಾಮಾನ್ಯ ಇಳಿಜಾರು ಪೂರ್ವಾಭಿಮುಖವಾಗಿದೆ.

**೩.ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿ:** ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ತುಮಕೂರು ಜಿಲ್ಲೆಗಳನ್ನು ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿಯು ಒಳಗೊಂಡಿದೆ.ಈ ಕ್ಷೇತ್ರವು ಬಹುತೇಕವಾಗಿ ಕಾವೇರಿ ನದಿ ತಪ್ಪಲಿನ ಪ್ರದೇಶವನ್ನು ಒಳಗೊಂಡಿದ್ದು, ೬೦೦ ಮೀಟರ್‌ಗಳ ಬಾಹ್ಯರೇಖಾ ಪ್ರದೇಶವು ಆಳವಾದ ಇಳಿಜಾರಿನ ವೈಶಿಷ್ಟ್ಯವನ್ನು ಹೊಂದಿದೆ. ಪಶ್ಚಿಮ ಹಾಗೂ ದಕ್ಷಿಣದಲ್ಲಿ, ಇದು ಪಶ್ಚಿಮ

ಘಟ್ಟ ಶ್ರೇಣಿಗಳಿಂದ ಆವೃತವಾಗಿದ್ದು, ಉತ್ತರ ಭಾಗವು ಸ್ಪಷ್ಟವಾಗಿ ಗುರುತಿಸಲ್ಪಡುವ ಎತ್ತರದ ಆದರೆ ವಿಚ್ಛಿನ್ನವಾದ ಪ್ರಸ್ಥಭೂಮಿಯನ್ನು ಹೊಂದಿದೆ. ಪೂರ್ವಭಾಗಕ್ಕೆ, ಕಾವೇರಿ ಮತ್ತರ್ಧ ಉಪನದಿಗಳು ಹರಿದು, ಉಬ್ಬುತಗ್ಗುಗಳ ಬಯಲಾನ್ನು ರೂಪಿಸಿವೆ. ಈ ಪ್ರದೇಶದ ಸಾಮಾನ್ಯ ಎತ್ತರವು ೬೦೦ರಿಂದ ೯೦೦ ಮೀಟರ್‌ಗಳಷ್ಟು ಇದೆ. ಆದರೆ, ಮೈಸೂರು ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟ ಸಾಲು ಹಾಗೂ ಕೊಡಗು ಜಿಲ್ಲೆಯ ಬ್ರಹ್ಮಗಿರಿ ಶ್ರೇಣಿಗಳಲ್ಲಿ ಸುಮಾರು ೧,೫೦೦ ರಿಂದ ೧,೭೫೦ ಮೀಟರ್‌ಗಳಷ್ಟು ಎತ್ತರವನ್ನು ಕಾಣಬಹುದು.



**೪.ಕರ್ನಾಟಕದ ಕರಾವಳಿ ಪ್ರದೇಶ:** ರಾಜ್ಯದ ಪಶ್ಚಿಮ ಭಾಗದಲ್ಲಿ, ಪಶ್ಚಿಮ ಘಟ್ಟಶ್ರೇಣಿ ಹಾಗೂ ಅರಬ್ಬಿ ಸಮುದ್ರಗಳ ನಡುವೆ ವಿಸ್ತೃತವಾದ, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನು ಕರ್ನಾಟಕದ ಕರಾವಳಿ ಪ್ರದೇಶವು ಒಳಗೊಂಡಿದೆ.ಈ ಪ್ರದೇಶದ ಉದ್ದಗಲಕ್ಕೂ, ಪಶ್ಚಿಮ ಘಟ್ಟಗಳ ಅನೇಕ ಏಣು ಹಾಗೂ ಚಾಚುಗಳಿವೆ. ನದಿಗಳು, ತೊರೆಗಳು, ಜಲಪಾತಗಳು, ಶಿಖರಗಳು ಹಾಗೂ ಬೆಟ್ಟ ಸಾಲುಗಳ ವೈವಿಧ್ಯಮಯ ಭೂಸ್ವರೂಪಗಳು ಇಲ್ಲಿವೆ. ಕರಾವಳಿ ಪ್ರದೇಶವನ್ನು ಎರಡು ವಿಸ್ತೃತ ಭೌತಿಕ ಗುಣಲಕ್ಷಣಗಳ ಆಧಾರದ ಮೇಲೆ ವಿಂಗಡಿಸಬಹುದು. ಬಯಲು/ಸಮತಟ್ಟು ಪ್ರದೇಶ ಹಾಗೂ ಪಶ್ಚಿಮ ಘಟ್ಟಗಳು. ಕರಾವಳಿ ಸಮತಟ್ಟು ಪ್ರದೇಶವು ಅಳಿವೆಯ/ನದೀಮುಖದ ಹಾಗೂ ಸಾಗರದ ಸಮತಟ್ಟು ಪ್ರದೇಶಗಳ ಕಿರಿದಾದ ಚಾಚನ್ನು ಪ್ರತಿನಿಧಿಸುತ್ತದೆ. ಪೂರ್ವ ಬದಿಯ ಹಠಾತ್ ಏರುವಿಕೆಯಿಂದ ಪಶ್ಚಿಮ ಘಟ್ಟಗಳು ರೂಪಿತವಾಗಿವೆ. ಸುಮಾರು ೯೦೦–೧,೫೦೦ ಮೀಟರ್ ಎತ್ತರವಿರುವ ದಕ್ಷಿಣದ ಭಾಗಗಳಿಗೆ ಹೋಲಿಸಿದರೆ, ಘಟ್ಟಗಳ ಉತ್ತರ ಭಾಗದ ಎತ್ತರವು ಸುಮಾರು ೪೫೦–೬೦೦ ಮೀಟರ್‌ಗಳಿವೆ. ಕರಾವಳಿ ಪ್ರದೇಶವು ಸುಮಾರು ೫೦–೮೦ ಕಿ.ಮೀ.ಗಳಷ್ಟು ಅಗಲವಿದ್ದು, ಉತ್ತರದಿಂದ ದಕ್ಷಿಣಕ್ಕೆ ೨೬೭ ಕಿ.ಮೀ.ಗಳ ದೂರವನ್ನು ಕ್ರಮಿಸುತ್ತದೆ. ಸರಾಸರಿ ಸಮುದ್ರ ಮಟ್ಟಕ್ಕಿಂತ, ಸರಿಸುಮಾರು ಎತ್ತರವು ಸಾಮಾನ್ಯವಾಗಿ ೭೫ ಮೀಟರ್‌ಗಳಷ್ಟಿದೆ. ಕಾರವಾರದಂತಹ ಕೆಲವು ಸ್ಥಳಗಳಲ್ಲಿ, ಪಶ್ಚಿಮ ಘಟ್ಟಗಳ ತುದಿಯು/ನೆತ್ತಿಯು ಸಮುದ್ರಕ್ಕೆ ೧೩ ಕಿ.ಮೀ.ಗಳಷ್ಟು ಹತ್ತಿರದವರೆಗೂ ತಲಪುತ್ತವೆ.

***ಕರ್ನಾಟಕದಲ್ಲಿ ಬೆಟ್ಟ ಹಾಗೂ ಬೀಚ್‌ಗಳೆರಡೂ ಸಾಮಾನ್ಯ***







# ಭೂವಿಜ್ಞಾನ

## ಭೂವೈಜ್ಞಾನಿಕ ಚರಿತ್ರೆ ಹಾಗೂ ಸಂಯೋಜನೆ

ಇಲ್ಲಿಯವರೆಗೆ ಗುರುತಿಸಲಾದ, ಇಡೀ ಭಾರತದಲ್ಲೇ ಅತ್ಯಂತ ಪ್ರಾಚೀನವಾದ ಬಂಡೆಗಳನ್ನು ಒಳಗೊಂಡಿರುವ ಹೆಗ್ಗುರುತಿಗೆ ಕರ್ನಾಟಕವು ಪಾತ್ರವಾಗಿದೆ.ಮೈಸೂರು ಜಿಲ್ಲೆಯ ಪಶ್ಚಿಮ ಭಾಗದ ಸರಗೂರಿನಿಂದ ಹಿಡಿದು, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯವರೆಗಿನ ನೈಸಿಕ್ (ರೂಪಾಂತರಿಕ ಶಿಲೆ) ಪಟ್ಟಿಗಳ ಸರಣಿಯು ಇದೆ; ಅವುಗಳನ್ನು ಸುಮಾರು ೩.೪ ಶತಕೋಟಿ ವರ್ಷಗಳದ್ದೆಂದು ಈಗ ಕಾಲಗಣನೆ ಮಾಡಲಾಗಿದೆ.ಅಷ್ಟೇ ಹಳೆಯದಾದ, ರಾಜ್ಯದ ಪೂರ್ವ ಭಾಗದ ಕೋಲಾರ ಚಿನ್ನದ ಗಣಿಗಳಿಂದ, ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಗಳವರೆಗೆ ಹರಡಿರುವ ಚಿನ್ನ ಹೊತ್ತ ಶಿಸ್ಟ್ ಅಥವಾ ಪದರಗಲ್ಲುಗಳು ಇವೆ.ಇವುಗಳನ್ನು ಸುಮಾರು ೩.೪–೩ ಶತಕೋಟಿ ವರ್ಷಗಳ ಹಿಂದಿನದೆಂದು ಕಾಲಗಣನೆ ಮಾಡಲಾಗಿದೆ.ಇದಕ್ಕಿಂತ ಸ್ವಲ್ಪ ಇತ್ತೀಚಿನದಾದ ನೈಸಿಕ್ ಸಂಕೀರ್ಣವು ರಾಜ್ಯದ ಪೂರ್ವ ಭಾಗಗಳಲ್ಲಿ ವಿಸ್ತೃತವಾಗಿದೆ.ಸಾಮಾನ್ಯವಾಗಿ, ಅವುಗಳು ಗ್ರಾನೈಟ್ ಸ್ವರೂಪದ (ಬೆಣಚುಕಲ್ಲು) ಕಲ್ಲುಗಳಾಗಿದ್ದು, ವಯಸ್ಸಿನಲ್ಲಿ ಸುಮಾರು ೨.೭–೨ ಶತಕೋಟಿ ವರ್ಷಗಳಷ್ಟು ಹಳೆಯದಾಗಿದೆ.


ಧಾರವಾಡ ಸರಣಿ ಎಂದು ಕರೆಯಲ್ಪಡುವ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಗದಗ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಬಹುತೇಕ ಹರಡಿರುವ ಕಿರಿಯ ಶಿಷ್ಟ ಪಟ್ಟಿಯು ಸುಮಾರು ೨.೯ ರಿಂದ ೨.೬ ಶತಕೋಟಿ ವರ್ಷಗಳಷ್ಟು ಹಳೆಯದಾಗಿದೆ.



*ನಂದಿಬೆಟ್ಟ – ಕರ್ನಾಟಕದಲ್ಲಿರುವ ಪ್ರಾಚೀನ ಬೆಟ್ಟಗಳಲ್ಲಿ ಒಂದು*

ಮಂಡ್ಯ ಜಿಲ್ಲೆಯ ಪೂರ್ವ ಭಾಗದಿಂದ, ತುಮಕೂರು ಜಿಲ್ಲೆಯ ಪೂರ್ವ ಭಾಗದವರೆಗೆ, ಉತ್ತರ–ದಕ್ಷಿಣವಾಗಿ ಸುಮಾರು ೫೦ ಕಿಲೋಮೀಟರ್‌ನಷ್ಟು ಹರಡಿರುವ ಕಡಿಮೆ ವಯಸ್ಸಿನ ಗ್ರಾನೈಟ್‌ಗಳನ್ನು ಕ್ಲೊಸ್ಪೇಟ್ ಗ್ರಾನೈಟ್‌ಗಳೆಂದೂ ಕರೆಯುತ್ತಾರೆ. ಇವುಗಳನ್ನು ಸುಮಾರು ೨.೬ ಶತಕೋಟಿ ವರ್ಷಗಳಷ್ಟು ಪುರಾತನವಾದು ಎಂದು ನಂಬಲಾಗಿದೆ. ಚಿತ್ರದುರ್ಗ ಹಾಗೂ ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲಿ ಗ್ರಾನೈಟ್‌ಗಳ ಪ್ರತ್ಯೇಕ ಗುಡ್ಡೆಗಳನ್ನೂ ನೋಡಬಹುದು.ಇವೆಲ್ಲವೂ ಆರ್ಷೇಯ ಕಲ್ಪಕ್ಕೆ ಸೇರಿದ್ದು, ಸರಿಸುಮಾರು ರಾಜ್ಯದ ದಕ್ಷಿಣ ತುದಿಯಿಂದ ಕೃಷ್ಣಾ ನದಿಯವರೆಗೂ ಕರ್ನಾಟಕದ ಪ್ರಮುಖ ಭಾಗದಲ್ಲಿ ಕಾಣಸಿಗುತ್ತವೆ.

ಪುರಾತನ ಬಂಡೆಗಳೊಳಗೆ ಅನೇಕ ನೀರುಹಾದಿಯ ರಚನೆಗಳು ಹೊರಚಾಚಿವೆ.ಇವು ಮುಖ್ಯವಾಗಿ ಡೊಲೊರಿಟಿಕ್ ಸಂರಚನೆಗಳಾಗಿದ್ದು, ಸುಮಾರು ೨.೪ ಶತಕೋಟಿ ವರ್ಷಗಳಿಗಿಂತ ಕಡಿಮೆ ಪುರಾತನವಾದುದ? ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಧಾರವಾಡ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಹರಡಿದ ಕಲಾದಗ್ಗಿ ಹಾಗೂ ಭೀಮಾ ಗುಂಪಿನ ಬಂಡೆಗಳು, ಗಾಢವಾದ/ಆಳವಾದ ಏಕಾಭಿಮುಖರಾಹಿತ್ಯ ದಿಂದ, ಈ ಮೊದಲಿನ ಸಿಸ್ಟ್ ಹಾಗೂ ಗ್ರಾನೈಟ್ ಬಂಡೆಗಳ ಮೇಲೆ ಇರುವ ಎತ್ತರದ ಸಂಚಿತ ಶಿಲೆಗಳು ನಿಂತಿದ್ದು, ಪ್ರೋಟೋಝೂಯಿಕ್ ಯುಗದ ಅಂತ್ಯವನ್ನು ಇವು ಸೂಚಿಸುತ್ತವೆ. ಮುಂದಿನ ೫೦೦ ದಶಲಕ್ಷ ವರ್ಷಗಳಲ್ಲಿ, ಕರ್ನಾಟಕದಲ್ಲಿ ಯಾವುದೇ ಭೂ ವೈಜ್ಞಾನಿಕ ಘಟನೆಯ ಸಾಕ್ಷಿಯೂ ದೊರೆತಿಲ್ಲ.



ಮುಂದಿನ ಪ್ರಮುಖ ಭೂವೈಜ್ಞಾನಿಕ ಘಟನೆಯು ಸುಮಾರು ೬೫ ದಶಲಕ್ಷ ವರ್ಷಗಳ ಹಿಂದೆ, ಜರುಗಿದ ಜ್ವಾಲಾಮುಖಿಯಾಗಿದ್ದು. ಭಾರತ ಪರ್ಯಾಯದ್ವೀಪದ ಉತ್ತರ ಭಾಗದ ವಿಸ್ತೃತ ಪ್ರದೇಶಕ್ಕೆ ಲಾವಾ ರಸವನ್ನು ಹರಿಸಿ, ಹರಡಿದ ಅಗ್ನಿಪರ್ವತ ಪ್ರಚಂಡ ಚಟುವಟಿಕೆ ನಡೆಸಿದೆ. ಸಾಮಾನ್ಯವಾಗಿ, ಈ ಪಟ್ಟಿಯನ್ನು ಇವುಗಳನ್ನು ಡೆಕ್ಕನ್ ಟ್ರಾಪ್‌ಗಳೆಂದು ಕರೆಯಲಾಗುತ್ತದೆ. ಇವುಗಳ ಅತ್ಯಂತ ದಕ್ಷಿಣ ಭಾಗದ ವಿಸ್ತರಣೆಗಳನ್ನು ಕರ್ನಾಟಕದ ಉತ್ತರ ಭಾಗಗಳಾದ ಬೆಳಗಾವಿ, ಬಿಜಾಪುರ, ಗುಲ್ಬರ್ಗಾ, ಯಾದ್‌ಗೀರ್ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕಾಣಬಹುದು. ಒಂದಾದ ಮೇಲೆ ಒಂದರಂತೆ ಹರಿದ ಲಾವಾ ರಸದ ಪರಿಣಾಮವಾಗಿ ಡೆಕ್ಕನ್ ಟ್ರಾಪ್‌ಗಳು ಉಂಟಾಗಿದ್ದು, ಸರಣಿಯಂತಿರುವ ಸಮತಲ ಪದರಗಳ ವೈಶಿಷ್ಟ್ಯತೆಯನ್ನು ಹೊಂದಿವೆ. ಪ್ರತ್ಯೇಕ ಹರಿವುಗಳ ದಪ್ಪವು ೬ರಿಂದ ೨೪ ಮೀಟರ್‌ಗಳವರೆಗೂ ಇದೆ.ಕೆಲವು ಸ್ಥಳಗಳಲ್ಲಿ, ಡೆಕ್ಕನ್ ಟ್ರಾಪ್‌ಗಳು ಸುಮಾರು ೨,೦೦೦ ಮೀಟರ್ ದಪ್ಪವಿರುವುದೆಂದು ಹೇಳಲಾಗುತ್ತದೆ.

ವಿಚಿತ್ರವಾದ ತೇವಾಂಶ ಹಾಗೂ ಶುಷ್ಕ ಹವಾಮಾನಗಳ ಪರ್ಯಾಯ ಪರಿಸ್ಥಿತಿಗಳ ಸಮಯದಲ್ಲಿ, ಸಿಲಿಕಾ ಹಾಗೂ ಇತರ ಕಠಿಣ ವಸ್ತುಗಳನ್ನು ಒಸರಿಸುವ ಮೂಲಕ ರೂಪಿತವಾದ ಹಳೆಯ ಬಂಡೆಗಳ ಪಳಿಯುಳಿಕೆಗಳನ್ನೊಳಗೊಂಡ ಜಂಬುಮಣ್ಣಿನ ರಚನೆಗಳು ಅದಕ್ಕಿಂತ ಕಡಿಮೆ ಪುರಾತನವಾದದ್ದು.ಬೀದರ್ ಹಾಗೂ ಬೆಳಗಾವಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಹಾಗೂ ಉತ್ತರ ಕನ್ನಡ, ಉಡುಪಿ ಹಾಗೂ ಮಂಗಳೂರು ಜಿಲ್ಲೆಗಳ ಕರಾವಳಿ ಪ್ರದೇಶದ ಉದ್ದಕ್ಕೂ ಇವು ವಿಸ್ತೃತವಾಗಿ ಹರಡಿವೆ. ಆದರೆ ಇತ್ತೀಚಿನ ಭೂವೈಜ್ಞಾನಿಕ ಚರಿತ್ರೆಯನ್ನು ಸರಿಯಾಗಿ ದಾಖಲು ಮಾಡಿಲ್ಲ. ಆದರೂ, ಪ್ರಸ್ಥಭೂಮಿ ಪ್ರದೇಶದ ನದಿಯ ದಡಗಳ ಕಿರಿದಾದ ಚಾಚಿನಲ್ಲಿರುವ ಮೆಕ್ಕಲುಮಣ್ಣಿನ ಸಂಗ್ರಹ ಹಾಗೂ ಕರಾವಳಿ ಭಾಗದ ನದಿ ಮುಖಜ ಭೂಮಿಯ ಶೇಖರಣೆಗಳು, ೩–೪ ದಶಲಕ್ಷ ವರ್ಷಗಳ ಹಿಂದೆ ಪ್ರಾರಂಭವಾದ ಪ್ಲಿಸ್ಟೋಸೀನ್ ಯುಗಕ್ಕೆ ಸೇರಿವೆ.

ಕರ್ನಾಟಕದ ಭೂವೈಜ್ಞಾನಿಕ ಚರಿತ್ರೆಯು ಅನಾದಿ ಕಾಲದಿಂದ ಪ್ರಾರಂಭವಾಗುತ್ತದೆ. ಪ್ರೀಕೇಂಬ್ರಿಯನ್ ಭೂವಿಜ್ಞಾನ, ಅಂದರೆ ಈ ಭೂಮಿಯ ಅತ್ಯಂತ ಪುರಾತನ ಭೂಸ್ವರೂಪಗಳ ಅಧ್ಯಯನಕ್ಕಾಗಿ ವಿಶ್ವದ ಎಲ್ಲೆಡೆಗಳಿಂದ ವಿದ್ವಾಂಸರು ಕರ್ನಾಟಕಕ್ಕೆ ಬರುತ್ತಾರೆ.

## ಖನಿಜ ಸಂಪತ್ತು

ಕರ್ನಾಟಕದ ಭೂ ಪ್ರದೇಶವು ಸರಿಸುಮಾರು ಸಮನಾಗಿ ಹಂಚಿಕೆಯಾದ ಸಂಪತ್ಭರಿತವಾದ ಖನಿಜ ಸಂಪತ್ತಿನಿಂದ ಕೂಡಿದೆ. ಅದರಲ್ಲೂ ಕ್ರಿ.ಶ.೧೮೮೦ರಷ್ಟು ಹಳೆಯದಾದ, ದೇಶದ ಅತ್ಯಂತ ಪುರಾತನ ಭೂವೈಜ್ಞಾನಿಕ ಸರ್ವೇಕ್ಷಣೆ ಸಮೀಕ್ಷಾ ಇಲಾಖೆಯನ್ನು ಅದು ಪಡೆದಿದೆ. ರಾಜ್ಯದಲ್ಲಿ ಕಲ್ನಾರು (ಆಸ್ಬೆಸ್ಟಾಸ್), ಬಾಕ್ಸೈಟ್ (ಅಲ್ಯೂಮಿನಿಯಂ ಅದುರು), ಕ್ರೋಮೈಟ್, ಡೋಲೋಮೈಟ್, ಚಿನ್ನ, ಕಬ್ಬಿಣದ ಅದಿರು, ಕೆಓಲಿನ್ (ಬಿಳಿಜೇಡಿ/ಪಿಂಗಾಣಿ ಮಣ್ಣು), ಸುಣ್ಣ ಕಲ್ಲು, ಮ್ಯಾಗ್ನೆಸೈಟ್, ಮ್ಯಾಂಗನೀಸ್, ಓಕರ್ (ಕಾವಿ ಮಣ್ಣು), ಕ್ವಾರ್ಟ್ಜ್ (ಸ್ಫಟಿಕಶಿಲೆ) ಹಾಗೂ ಸಿಲಿಕಾ ಮರಳಿನ ಶೇಖರಣೆಗಳು ದೊರೆಯುತ್ತವೆ.ಕರ್ನಾಟಕವು ಫೆಲ್ಸೈಟ್‌ನ ಏಕೈಕ ಉತ್ಪಾದನ ರಾಜ್ಯವಾಗದ್ದು ಚಿನ್ನ, ಮರಳು ಹಾಗೂ ಫ್ಯುಚ್‌ಸೈಟ್ ಕ್ವಾರ್ಟ್ಜ್‌ಟ್‌ಗಳ ಉತ್ಪಾದನೆಯ ಮುಂಚೂಣಿಯಲ್ಲಿದೆ.

ಚಿನ್ನದ ಗಣಿಗಳು, ಕೋಲಾರ ಜಿಲ್ಲೆ ಕೆಜಿಎಫ್, (ಈಗ ಸ್ಥಗಿತಗೊಂಡಿದೆ) ಹಾಗೂ ಹಟ್ಟಿಯಲ್ಲಿ (ರಾಯಚೂರು ಜಿಲ್ಲೆ), ವರ್ಷಕ್ಕೆ ಸುಮಾರು ೨,೦೦೦ ಕೆ.ಜಿ.ಚಿನ್ನವನ್ನು ಉತ್ಪಾದನೆ ಮಾಡುತ್ತವೆ. ಆದರೆ, ಚಿನ್ನದ ಭೂಸಂಗ್ರಹಗಳು ಇದೀಗ ಕಡಿಮೆ ಆಗುತ್ತಿವೆ.

ರಾಜ್ಯದ ವಿವಿಧ ಭಾಗಗಳಲ್ಲಿ ಕಬ್ಬಿಣದ ಅದಿರಿನ ಬೃಹತ್ ಶೇಖರಣೆಯಿವೆ.ಬಳ್ಳಾರಿ–ಹೊಸಪೇಟೆ ಪ್ರದೇಶದ ಕಬ್ಬಿಣದ ಅದಿರುಗಳನ್ನು ವಿಶ್ವದ ಅತ್ಯುತ್ತಮ ಶ್ರೇಣಿಯ ಕಬ್ಬಿಣದ ಅದಿರುಗಳಲ್ಲಿ



ಕುದುರೆ ಮುಖ ಪರ್ವತ ಶ್ರೇಣಿ

ಒಂದೆಂದು ಪರಿಗಣಿಸಲಾಗಿದೆ. ರಾಜ್ಯದಲ್ಲಿ ಲಭ್ಯವಿರುವ ಉತ್ತಮ ಗುಣಮಟ್ಟದ ಕಬ್ಬಿಣದ ಅದಿರಿನ ಒಟ್ಟಾರೆ ಶೇಖರಣೆಯು ೧,೦೦೦ ದಶಲಕ್ಷ ಟನ್‌ಗಳಷ್ಟು ಇದೆ. ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶದಲ್ಲಿ, ಸಂಡೂರು ಮ್ಯಾಂಗನೀಸ್ ಅಂಡ್ ಐರನ್ ಓರ್‍ಸ್ ಸಂಸ್ಥೆಯು ಅತ್ಯಂತ ಬೃಹತ್ ಪ್ರಮಾಣದ ಮ್ಯಾಂಗನೀಸ್ ಅದಿರನ್ನು, ಅಂದರೆ ಸುಮಾರು ೨,೩೦,೦೦೦ ಟನ್ನನ್ನು ಉತ್ಪಾದಿಸುತ್ತದೆ. ಕುದರೆಮುಖ ಐರನ್ ಓರ್‍ಸ್ ಸಂಸ್ಥೆಯು ಪಶ್ಚಿಮ ಘಟ್ಟಗಳಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆಯಲ್ಲಿ ತೊಡಗಿತ್ತು. ಆದರೆ ಅದು ಈಗ ಕೆಲಸ ಮಾಡುತ್ತಿಲ್ಲ. ಗಣಿಗಾರಿಕೆ ವಲಯದಲ್ಲಿ ಮೈಸೂರು ಮಿನರಲ್ಸ್ ಅಂಡ್ ಟ್ರೇಡಿಂಗ್ ಕಾರ್ಪೊರೇಷನ್ ಸಹ, ಸಕ್ರಿಯವಾದ ಸಂಸ್ಥೆ.

ರಾಜ್ಯದ ಸುಮಾರು ೪,೨೦೦ ಚ.ಕಿ.ಮೀ.ಪ್ರದೇಶದ ಗ್ರಾನೈಟ್ ಹಾಗೂ ಗ್ರಾನೈಟಿಕ್ ಬಂಡೆಗಳು ಅಲಂಕಾರಿಕ ಗುಣವನ್ನು ಹೊಂದಿದೆ. ರಾಜ್ಯದ ಮೈಸೂರು, ಚಾಮರಾಜನಗರ, ಬೆಂಗಳೂರು, ಮಂಡ್ಯ, ತುಮಕೂರು, ಕೋಲಾರ, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ರಾಯಚೂರು, ಕೊಪ್ಪಳ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಬಹುಪಾಲು ಅಲಂಕಾರಿಕ ಗ್ರಾನೈಟ್‌ಗಳು ದೊರೆಯುತ್ತವೆ.

## ಕರ್ನಾಟಕದಲ್ಲಿ ಖನಿಜಗಳ ಉತ್ಪಾದನೆ

| ಕ್ರ.ಸಂ. | ಖನಿಜಗಳು | ಘಟಕಗಳು | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೪–೦೫ |
|---|---|---|---|---|---|---|---|
| | | I.ಲೋಹೀಯ a) ಫೆರಸ್ (ಕಬ್ಬಿಣಯುಕ್ತ) | | | | | |
| ೧. | ಕ್ರೋಮೈಟ್ | '೦೦೦ ಮೆಟ್ರಿಕ್ ಟನ್‌ಗಳಲ್ಲಿ | ೧೫ | ೧೮ | ೧೯ | ೨೭ | ೨೭ |
| ೨. | ಕಬ್ಬಿಣದ ಅದಿರು | '೦೦೦ ಮೆಟ್ರಿಕ್ ಟನ್‌ಗಳಲ್ಲಿ | ೧೮೯೦೨ | ೨೨೫೯೫ | ೨೪೦೪೪ | ೩೪೧೦೭ | ೩೯೬೯೩ |
| ೩. | ಮ್ಯಾಂಗನೀಸ್ ಅದಿರು | '೦೦೦ ಮೆಟ್ರಿಕ್ ಟನ್‌ಗಳಲ್ಲಿ | ೨೧೯ | ೨೧೩ | ೨೨೩ | ೩೫೯ | ೫೬೪ |
| | | b) ಫೆರಸೇತರ | | | | | |
| ೪. | ಬಾಕ್ಸೈಟ್ | '೦೦೦ ಮೆಟ್ರಿಕ್ ಟನ್‌ಗಳಲ್ಲಿ | ೫೦ | ೫೨ | ೩೦ | ೫೮ | ೬೮ |
| ೫. | ತಾಮ್ರ | '೦೦೦ ಮೆಟ್ರಿಕ್ ಟನ್‌ಗಳಲ್ಲಿ | – | – | – | – | – |
| ೬. | ಚಿನ್ನ | '೦೦೦ ಮೆಟ್ರಿಕ್ ಟನ್‌ಗಳಲ್ಲಿ | ೨೧೪೦ | ೨೪೭೫ | ೨೭೦೫ | ೦ | ೩೩೯೦ |
| ೭. | ಬೆಳ್ಳಿ | '೦೦೦ ಮೆಟ್ರಿಕ್ ಟನ್‌ಗಳಲ್ಲಿ | ೨೧೯ | ೨೭೫ | ೨೭೦ | ೩೩೭ | ೩೯ |
| | | II.ಲೋಹೇತರ | | | | | |
| ೮. | ಅಸ್ಬೆಸ್ಟಾಸ್ | ಟನ್‌ಗಳಲ್ಲಿ | – | – | – | – | – |
| ೯. | ಜೇಡಿ ಮಣ್ಣು (ಇತರ) | ಟನ್‌ಗಳಲ್ಲಿ | – | – | – | – | – |
| ೧೦. | ಕೊರಂಡಂ | ಟನ್‌ಗಳಲ್ಲಿ | – | – | – | – | – |
| ೧೧. | ಫೈರ್‌ಕ್ಲೇ / ಬೆಂಕಿಜೇಡಿ | ಟನ್‌ಗಳಲ್ಲಿ | ೩೩೪೬ | ೧೫೩೬೦ | ೧೧೨೯೬ | ೦ | ೦ |
| ೧೨. | ಕೆಓಲಿನ್ | ಟನ್‌ಗಳಲ್ಲಿ | ೧೧೮೭೭ | ೧೫೭೮೧ | ೧೪೯೭೮ | ೫೮೨೭ | ೦ |
| ೧೩. | ಕ್ಯಾನೈಟ್ | ಟನ್‌ಗಳಲ್ಲಿ | ೩೫೫ | ೨೩೦ | ೨೯೭ | ೩೦೧ | ೬೩೫ |
| ೧೪. | ಮ್ಯಾಗ್ನೆಸೈಟ್ | ಟನ್‌ಗಳಲ್ಲಿ | ೨೫೫೩೬ | ೨೧೨೧೪ | ೧೭೧೭೯ | ೧೯೬೯೩ | ೨೬೫೩ |
| ೧೫. | ಓಕರ್ | ಟನ್‌ಗಳಲ್ಲಿ | ೨೫೭೭೬ | ೨೫೦೪೭ | ೩೪೩೪೯ | ೧೦೮೦ | ೨೦೫೮ |
| ೧೬. | ಕ್ವಾರ್ಟ್ಜ್ | ಟನ್‌ಗಳಲ್ಲಿ | ೧೦೨೬೦ | ೬೮೪೯ | ೨೯೭೩ | ೬೨೫೦೦ | ೬೭೩೬೩ |
| ೧೭. | ಸ್ಟಿಯಟೈಟ್ | ಟನ್‌ಗಳಲ್ಲಿ | ೦ | ೦ | ೧೮೯೨ | ೬೭೧೪೩೬ | ೦ |
| | | III.ಕಟ್ಟಡ ಸಾಮಗ್ರಿಗಳು | | | | | |
| ೧೮. | ಡೊಲೊಮೈಟ್ | ಟನ್‌ಗಳಲ್ಲಿ | ೯೨೭೮೦ | ೧೨೩೦೨೫ | ೧೬೬೯೬೭ | ೨೬೨೦೫೧ | ೪೩೩೨೯೮ |
| ೧೯. | ಲೈಮ್ ಶೆಲ್ | ಟನ್‌ಗಳಲ್ಲಿ | ೫೩೩೨೦ | ೮೯೨೨೪ | ೮೭೭೧೨ | ೯೨೮೫೬ | ೧೦೧೧೦೬ |
| ೨೦. | ಲೈಮ್‌ಸ್ಟೋನ್ | '೦೦೦೦ ಮೆಟ್ರಿಕ್ ಟನ್‌ಗಳಲ್ಲಿ | ೯೮೩೯ | ೧೦೪೮೧ | ೧೨೧೮೧ | ೧೩೫೯ | ೯೨೧೫ |
| ೨೧. | ಮೌಲ್ಡಿಂಗ್ ಮರಳು | '೦೦೦೦ ಮೆಟ್ರಿಕ್ ಟನ್‌ಗಳಲ್ಲಿ | --- | --- | --- | --- | --- |

# ನದಿ ವ್ಯವಸ್ಥೆ

ನದಿಗಳು ಹಾಗೂ ನದಿ ವ್ಯವಸ್ಥೆಗಳು ಭೂರಚನೆಯ ವಿಭಜನೆಗಳಿಗೆ ಅನುಗುಣವಾಗಿದ್ದು, ಉತ್ತರ–ದಕ್ಷಿಣ ಭಾಗಕ್ಕೆ ಚಾಚಿರುವ ಪಶ್ಚಿಮ ಘಟ್ಟಗಳು ನೀರಿನ ಪ್ರಮುಖ ವಿಭಜಕವಾಗಿದ್ದು, ಪಶ್ಚಿಮಾಭಿಮುಖವಾದ ಹಾಗೂ ಪೂರ್ವಾಭಿಮುಖವಾದ ನದಿ ವ್ಯವಸ್ಥೆಗಳ ಉಗಮಕ್ಕೆ ಕಾರಣ ವಾಗಿದೆ. ಪೂರ್ವದಲ್ಲಿರುವ ನಂದಿದುರ್ಗವು ಮೂರು ನದಿ ವ್ಯವಸ್ಥೆಗಳ ಉಗಮಕ್ಕೆ ಕಾರಣವಾದ ಮತ್ತೊಂದು ಮೂಲ.

ಕರ್ನಾಟಕವು ಸುಮಾರು ೧೭ ಲಕ್ಷ ದಶಲಕ್ಷ ಕ್ಯೂಬಿಕ್ ಮೀಟರ್‌ಗಳಷ್ಟು ಮೇಲ್ಮೈ ಜಲ ಸಂಪನ್ಮೂಲ ಹೊಂದಿದ್ದು, ಇದು ದೇಶದ ಜಲ ಸಂಪನ್ಮೂಲಗಳಲ್ಲಿ ೬ ಪ್ರತಿಶತವಾಗಿದೆ.ಇದರಲ್ಲಿ ಸುಮಾರು ೪೦ ಪ್ರತಿಶತದಷ್ಟು ಪೂರ್ವಾಭಿಮುಖಿ ನದಿಗಳಲ್ಲಿ ದೊರೆಯುತ್ತಿದ್ದು, ಉಳಿದ ಭಾಗವು ಪಶ್ಚಿಮಾಭಿಮುಖಿಜಾಲ ನದಿಗಳಿಂದ ದೊರೆಯುತ್ತದೆ.

ರಾಜ್ಯದಲ್ಲಿ ಏಳು ನದಿ ಹಾಗೂ ಅವುಗಳ ಉಪನದಿಗಳು ಹರಿದು ಹೋಗುತ್ತವೆ. ನದಿ ವ್ಯವಸ್ಥೆ ಹಾಗೂ ಅವುಗಳು ಹರಿಯುವ ಪ್ರದೇಶವು ಕೆಳಕಂಡಂತೆ ಇದೆ:



*ಗೊಡಚಿನಮಕ್ಕಿ ಜಲಪಾತ, ಬೆಳಗಾವಿ ಜಿಲ್ಲೆ*

| ನದಿ ವ್ಯವಸ್ಥೆ | | ರಾಜ್ಯದಲ್ಲಿ ನೀರು ಹರಿಯುವ ಪ್ರದೇಶ | | | ಸರಾಸರಿ ಅಂದಾಜು ಜಲಸಾಮರ್ಥ್ಯ | |
|---|---|---|---|---|---|---|
| ಸಂ. | | ೦೦೦ ಚ.ಕಿ.ಮೀ. Sq.km | | ಎಮ್‌ಕ್ಯುಎಮ್ | ಟಿಎಮ್‌ಸಿ | ಪ್ರತಿಶತ |
| ೧. | ಕೃಷ್ಣಾ | ೧೧೧.೭೪ | ೫೮.೫೬ | ೨೭,೪೫೧ | ೯೬೯.೪೪ | ೨೮.೨೦ |
| ೨. | ಕಾವೇರಿ | ೩೬.೧೩ | ೧೮.೯೭ | ೧೦,೯೮೦ | ೩೮೭.೭೬ | ೧೧.೨೮ |
| ೩. | ಗೋದಾವರಿ | ೪.೪೩ | ೨.೩೨ | ೧,೪೧೫ | ೪೯.೯೭ | ೧.೪೫ |
| ೪. | ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು | ೨೪.೫೩ | ೧೨.೮೮ | ೫೬,೬೦೦ | ೧,೯೮೮.೮೩ | ೫೮.೧೪ |
| ೫. | ಉತ್ತರ ಪೆನ್ನಾರ್ | ೬.೯೧ | ೩.೬೪ | ೯೦೬ | ೩೨ | ೦.೯೩ |
| ೬. | ದಕ್ಷಿಣ ಪೆನ್ನಾರ್ | ೩.೭೬ | ೧.೯೭ | | | |
| ೭. | ಪಾಲಾರ್ | ೨.೯೭ | ೧.೫೬ | | | |
| | ಒಟ್ಟು | ೧೯೦.೫೦ | ೧೦೦ | ೯೭,೩೫೨ | ೩,೪೩೮.೦೦ | ೧೦೦ |

## ಕೃಷ್ಣಾ ನದಿ ಕಣಿವೆ

ಸುಮಾರು ೪೩.೭೪ ಪ್ರತಿಶತದಷ್ಟು ಕೃಷ್ಣಾ ನದಿ ಕಣಿವೆಯು ರಾಜ್ಯದಲ್ಲಿದ್ದು, ೪೮೩ ಕಿ.ಮೀ. ದೂರದಷ್ಟು ರಾಜ್ಯದಲ್ಲಿ ಹರಿಯುತ್ತದೆ. ೬೬,೨೩೭ ಚ.ಕಿ.ಮೀ.ಬಸಿತದ ವಿಸ್ತೀರ್ಣವನ್ನು ಹೊಂದಿದ ತುಂಗಭದ್ರೆಯು, ಕೃಷ್ಣಾ ನದಿಯ ಅತ್ಯಂತ ದೊಡ್ಡದಾದ ಹಾಗೂ ಪ್ರಮುಖವಾದ ಉಪನದಿಗಳಲ್ಲಿ ಒಂದು. ಅದರ ಇತರ ಪ್ರಮುಖ ಉಪನದಿಗಳೆಂದರೆ ಭೀಮಾ, ಕೊಯ್ನಾ, ಪಂಚಗಂಗ, ದೂಧ್‌ಗಂಗಾ, ಹಿರಣ್ಯಕೇಶಿ, ಘಟಪ್ರಭಾ ಹಾಗೂ ಮಲಪ್ರಭಾ.ಈ ನದಿಕಣಿವೆಯು, ರಾಜ್ಯದ ೧೮ ಜಿಲ್ಲೆಗಳನ್ನು ಹಾಗೂ ರಾಜ್ಯದ ಸುಮಾರು ೬೦ ಪ್ರತಿಶತದಷ್ಟು ಭೌಗೋಳಿಕ ಪ್ರದೇಶವನ್ನೂ ಒಳಗೊಂಡಿದೆ.

**ಕೃಷ್ಣಾ:** ಮಹಾರಾಷ್ಟ್ರದ ಮಹಾಬಲೇಶ್ವರದ ಬಳಿ, ೧,೩೩೬ ಮೀಟರ್ ಎತ್ತರದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಉಗಮವಾಗುವ ಕೃಷ್ಣಾ ನದಿಯು, ಪಶ್ಚಿಮದಿಂದ ಪೂರ್ವಕ್ಕೆ, ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಲ್ಲಿ ಸುಮಾರು ೧,೪೦೦ ಕಿ.ಮೀ. ಕ್ರಮಿಸುತ್ತದೆ. ಕೃಷ್ಣಾ ನದಿಯ ಪ್ರದೇಶವು ಸುಮಾರು ೨.೫೯ ಲಕ್ಷ ಚ.ಕಿ.ಮೀ.ಆಗಿದ್ದು, ಅದರ ಉಪನದಿಗಳೂ ಸೇರಿಸಿ, ಇದು ರಾಜ್ಯದಲ್ಲಿ ಒಟ್ಟು ೭೦೪ ಕಿ.ಮೀ.ದೂರ ಹರಿಯುತ್ತದೆ.

**ಘಟಪ್ರಭಾ:** ಪಶ್ಚಿಮ ಘಟ್ಟಗಳಲ್ಲಿ ಸುಮಾರು ೮೮೪ ಮೀಟರ್ ಎತ್ತರದಲ್ಲಿ, ಉಗಮವಾಗುವ ಘಟಪ್ರಭಾ ನದಿಯು, ಕೃಷ್ಣಾ ನದಿಯನ್ನು ಸೇರುವ ಮುನ್ನ ೨೮೩ ಕಿ.ಮೀ.ದೂರದಷ್ಟು ಪೂರ್ವಾಭಿಮುಖವಾಗಿ ಹರಿಯುತ್ತದೆ.ಬೆಳಗಾವಿ ಜಿಲ್ಲೆಯ ಗೋಕಾಕ್ ಜಲಪಾತದಲ್ಲಿ,



ನದಿಯು ೫೩ ಮೀಟರ್‌ಗಳಷ್ಟು ಎತ್ತರದಿಂದ ಧುಮ್ಮಿಕ್ಕುತ್ತದೆ. ಇದು ಮತ್ತದರ ಉಪನದಿಗಳ ಒಟ್ಟಾರೆ ಜಲಾನಯನ ಪ್ರದೇಶವು, ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯಗಳ ೮,೮೨೯ ಚ.ಕಿ.ಮೀ.ಪ್ರದೇಶವನ್ನು ಒಳಗೊಂಡಿದೆ.

**ಮಲಪ್ರಭಾ:** ಮಲಪ್ರಭಾ ನದಿಯೂ, ಬೆಳಗಾವಿ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿ ಹುಟ್ಟುವುದು. ೭೯೨ ಮೀಟರ್ ಎತ್ತರದಲ್ಲಿ ಮೊದಲು ಪೂರ್ವದಲ್ಲಿ ಹಾಗೂ ನಂತರ ಈಶಾನ್ಯ ದಿಕ್ಕಿನಲ್ಲಿ ಹರಿಯುವ ಇದು ತನ್ನ ಉಗಮ ಸ್ಥಾನದಿಂದ ಸುಮಾರು ೩೦೪ ಕಿ.ಮೀ.ಗಳಷ್ಟು ದೂರದಲ್ಲಿರುವ ಕೂಡಲಸಂಗಮದಲ್ಲಿ ಕೃಷ್ಣೆಯನ್ನು ಸೇರುತ್ತದೆ.ಅದರ ಮುಖ್ಯ ಉಪನದಿಗಳೆಂದರೆ ಬೆಣ್ಣಿಹಳ್ಳ, ಹಿರೇಹಳ್ಳ ಹಾಗೂ ತಾಸ್ ನದಿ. ಇದು ಮಲಪ್ರಭಾ ಹಾಗೂ ಅದರ ಉಪನದಿಗಳ ಒಟ್ಟಾರೆ ೧೧,೫೪೯ ಚ.ಕಿ.ಮೀ.ಜಲಾನಯನ ಪ್ರದೇಶವು ಸಂಪೂರ್ಣವಾಗಿ ಕರ್ನಾಟಕದಲ್ಲೇ ಇದೆ.

**ಭೀಮಾ:** ಸುಮಾರು ೯೪೫ ಮೀಟರ್ ಎತ್ತರದಲ್ಲಿ, ಮಹಾರಾಷ್ಟ್ರದ ಪಶ್ಚಿಮ ಘಟ್ಟಗಳಲ್ಲಿ, ಹುಟ್ಟುವ ಭೀಮಾ ನದಿಯು ಆಗ್ನೇಯಾಭಿಮುಖವಾಗಿ ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಹರಿಯುವ ರಾಯಚೂರು ತಾಲ್ಲೂಕಿನ ಕೂಡ್ಲುವಿನ ಬಳಿ, ಕೃಷ್ಣೆಯನ್ನು ಸೇರುವ ಮುನ್ನ, ಇದು ೮೬೧ ಕಿ.ಮೀ. ದೂರ ಕ್ರಮಿಸುತ್ತದೆ. ಅದರ ಒಟ್ಟಾರೆ ಬಸಿ ಪ್ರದೇಶವು ೭೦,೬೧೪ ಚ.ಕಿ.ಮೀ.ಗಳಷ್ಟಿದ್ದು, ಅದರಲ್ಲಿ ಕರ್ನಾಟಕದ ಭಾಗವು ೧೮,೩೧೫ ಚ.ಕಿ.ಮೀ.ಗಳಷ್ಟು ಆಗಿದೆ.

**ತುಂಗಭದ್ರಾ:** ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಸುಮಾರು ೧,೧೯೮ ಮೀಟರ್ ಎತ್ತರದಲ್ಲಿ, ಉಗಮಿಸುವ ಅವಳಿ ನದಿಗಳಾದ ತುಂಗಾ ಹಾಗೂ ಭದ್ರೆಯರ ಸಂಗಮದಿಂದ, ಸುಮಾರು

*ಶಿವನಸಮುದ್ರ ಜಲಪಾತ ಮಂಡ್ಯ ಜಿಲ್ಲೆ*

೬೧೦ ಮೀಟರ್‌ಗಳ ಎತ್ತರದಲ್ಲಿ, ಶಿವಮೊಗ್ಗದ ಉತ್ತರಕ್ಕೆ ತುಂಗಭದ್ರಾ ನದಿಯು ರೂಪುಗೊಳ್ಳುತ್ತದೆ. ವರದಾ ಹಾಗೂ ಹಗರಿ ನದಿಗಳು ಅದರ ಪ್ರಮುಖ ಉಪನದಿಗಳು. ಅದರ ಒಟ್ಟು ಬಸಿ ಪ್ರದೇಶವು ೭೧,೪೧೭ ಚ.ಕಿ.ಮೀ.ಗಳಾಗಿದ್ದು, ಇದರಲ್ಲಿ ೫೭,೬೭೧ ಚ.ಕಿ.ಮೀ.ಗಳಷ್ಟು ರಾಜ್ಯದಲ್ಲಿ ಇದು ೨೯೩ ಕಿ.ಮೀ.ಗಳಷ್ಟು ದೂರ ರಾಜ್ಯದಲ್ಲಿ ಹರಿಯುತ್ತದೆ.

## ಕಾವೇರಿ ನದಿಕಣಿವೆ

ಕಾವೇರಿ ನದಿಕಣಿವೆಯ ಸುಮಾರು ೪೨.೨ ಪ್ರತಿಶತ ಪ್ರದೇಶವು (೮೧,೧೫೫ ಚ.ಕಿ.ಮೀ.) ಕರ್ನಾಟಕದಲ್ಲಿದೆ. ಇದು ರಾಜ್ಯದ ಎಂಟು ಜಿಲ್ಲೆಗಳನ್ನು ಒಳಗೊಂಡಿದ್ದು ೧೮ ಪ್ರತಿಶತ ಪ್ರದೇಶವನ್ನು ಒಳಗೊಂಡಿದೆ. ಕರ್ನಾಟಕದಲ್ಲಿ ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಕಬಿನಿ, ಸುವರ್ಣಾವತಿ, ಲೋಕಪಾವನಿ, ಶಿಂಷಾ ಹಾಗೂ ಅರ್ಕಾವತಿ ಅದರ ಮುಖ್ಯ ಉಪನದಿಗಳಾಗದೆ.

**ಕಾವೇರಿ:** ಕಾವೇರಿ ನದಿಯು ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿ ಉಗಮಿಸಿ: ರಾಜ್ಯದಲ್ಲಿ, ೩೨೦ ಕಿ.ಮೀ. ದೂರ ಹರಿಯುತ್ತದೆ. ಸಾಮಾನ್ಯವಾಗಿ, ನದಿಯು ಆಗ್ನೇಯ ದಿಕ್ಕಿನಲ್ಲಿ ಹರಿಯುತ್ತದೆ. ಚುಂಚನಕಟ್ಟೆ ಜಲಪಾತ (ಸುಮಾರು ೨೦ ಮೀ.) ಹಾಗೂ ಶಿವಸಮುದ್ರ ಜಲಪಾತಗಳು (ಸುಮಾರು ೧೦೦ ಮೀ.) ರಾಜ್ಯದಲ್ಲಿದೆ.

**ಹೇಮಾವತಿ:** ಪಶ್ಚಿಮ ಘಟ್ಟದ ಒಡಲಲ್ಲಿ ಸುಮಾರು ೧,೨೧೯ ಮೀಟರ್ ಎತ್ತರದಲ್ಲಿ ಹೇಮಾವತಿ ನದಿಯ ಉಗಮವಾಗುತ್ತಿದ್ದು ಕೃಷ್ಣರಾಜಸಾಗರದ ಬಳಿ ಕಾವೇರಿ ನದಿಯೊಂದಿಗೆ ಸಂಗಮವಾಗುತ್ತದೆ. ಬಸಿ ಪ್ರದೇಶವು ಸುಮಾರು ೫,೪೧೦ ಚ.ಕಿ.ಮೀ. ಗಳಾಗಿದ್ದು, ನದಿಯ ಸರಾಸರಿ ಉದ್ದವು ೨೪೫ ಕಿ.ಮೀ.ಆಗಿದೆ.

**ಕಬಿನಿ:** ಕಬಿನಿ ನದಿಯು (ಇದನ್ನು 'ಕಪಿಲ' ಎಂದೂ ಕರೆಯುತ್ತಾರೆ) ಸುಮಾರು ೨೩೦ ಕಿ.ಮೀ.ನಷ್ಟು ಒಟ್ಟಾರೆ ಹರಿವಿನ ದೂರವನ್ನು ಹಾಗೂ ಸುಮಾರು ೭,೦೪೦ ಚ.ಕಿ.ಮೀ.ನಷ್ಟು ಜಲಾನಯನ ಪ್ರದೇಶವನ್ನೂ ಹೊಂದಿದೆ.ತಿರುಮಲಕೂಡಲು ನರಸೀಪುರದಲ್ಲಿ, ಇದು ಕಾವೇರಿ ನದಿಯನ್ನು ಕೂಡುತ್ತದೆ.

## ಗೋದಾವರಿ ನದಿಕಣಿವೆ

ಗೋದಾವರಿ ನದಿಕಣಿವೆಯು, ೪,೪೦೫ ಚ.ಕಿ.ಮೀ.ನಷ್ಟು ಬಸಿ ಕಾಲುವೆ ಪ್ರದೇಶ ವನ್ನು ಹೊಂದಿದೆ. ಗೋದಾವರಿ ನದಿಕಣಿವೆಯ ಸ್ವಲ್ಪ ಭಾಗ ಮಾತ್ರ ರಾಜ್ಯದಲ್ಲಿದೆ. ಮಂಜ್ರಾ



ಕಾವೇರಿ ನದಿಯಲ್ಲೊಂದು ಪಕ್ಷಿ

ನದಿಯು ಗೋದಾವರಿಯ ಪ್ರಮುಖ ಉಪನದಿ ಹಾಗೂ ರಾಜ್ಯದಲ್ಲಿ ಸುಮಾರು ೧೫೫ ಕಿ.ಮೀ.ದೂರ ಹರಿಯುತ್ತದೆ.

## ಪೆನ್ನಾರ್ ಹಾಗೂ ಪಾಲಾರ್ ಜಲಾನಯನ ಭೂಮಿ


ಉತ್ತರ ಪೆನ್ನಾರ್, ದಕ್ಷಿಣ ಪೆನ್ನಾರ್ ಹಾಗೂ ಪಾಲಾರ್ ನದಿಗಳು ರಾಜ್ಯದಲ್ಲಿ ಸುಮಾರು ೧೩,೬೧೦ ಚ.ಕಿ.ಮೀ.ಗಳಷ್ಟು ಪ್ರದೇಶವನ್ನು ಬಸಿಯುತ್ತದೆ.

## ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು

ರಾಜ್ಯದಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ಅನೇಕ ನದಿಗಳಿವೆ; ಅವುಗಳ ಪೈಕಿ ಮುಖ್ಯವಾದವು ಶರಾವತಿ, ಕಾಳಿ, ಗಂಗಾವಳಿ (ಬೇಡ್ತಿ), ಅಘನಾಶಿನಿ ಹಾಗೂ ನೇತ್ರಾವತಿ.ಪಶ್ಚಿಮಕ್ಕೆ ಹರಿಯುವ ಎಲ್ಲ ನದಿಗಳ ಒಟ್ಟಾರೆ ಜಲಾನಯನ ಪ್ರದೇಶವು ೨೬,೨೧೪ ಚ.ಕಿ.ಮೀ.ಗಳಷ್ಟಿವೆ.ಅವುಗಳನ್ನು ಪ್ರಮುಖವಾಗಿ ವಿದ್ಯುತ್ ಉತ್ಪಾದನೆಗಾಗಿ ಬಳಸಲಾಗುತ್ತದೆ.

# ಹವಾಮಾನ

ರಾಜ್ಯದಲ್ಲಿ ಮೂರು ಪ್ರಮುಖ ರೀತಿಯ ಹವಾಮಾನಗಳಿವೆ.ಪವನಶಾಸ್ತ್ರೀಯ ಉದ್ದೇಶಗಳಿಗಾಗಿ, ರಾಜ್ಯವನ್ನು ಮೂರು ಉಪ–ವಿಭಾಗಗಳಾಗಿ ವಿಂಗಡಿಸಲಾಗಿದೆ, ಅವುಗಳೆಂದರೆ (ಎ) ಕರಾವಳಿ ಕರ್ನಾಟಕ (ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳು), (ಬಿ) ಉತ್ತರ ಒಳನಾಡು ಕರ್ನಾಟಕ (ಬೆಳಗಾವಿ, ಬೀದರ್, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಗುಲ್ಬರ್ಗಾ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳು) ಹಾಗೂ (ಸಿ) ದಕ್ಷಿಣ ಒಳನಾಡು ಕರ್ನಾಟಕ (ಉಳಿದ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಕೊಡಗು, ಹಾಸನ, ಕೋಲಾರ, ಮೈಸೂರು, ಚಾಮರಾಜನಗರ, ಮಂಡ್ಯ, ಶಿವಮೊಗ್ಗ ಹಾಗೂ ತುಮಕೂರು).ಉಷ್ಣವಲಯದ ಮಳೆಗಾಲದ ಹವಾಮಾನವು, ಅಂದರೆ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ, ಸಂಪೂರ್ಣ ಕರಾವಳಿ



*ಮುಂಜಾನೆಯಲ್ಲಿ ಮುತ್ತತ್ತಿಯ ಕಾವೇರಿ ತೀರ, ಮಂಡ್ಯ ಜಿಲ್ಲೆ*





ಪ್ರದೇಶ ಹಾಗೂ ನೆರೆಯ ಪ್ರದೇಶಗಳಲ್ಲಿ ಕಾಣಿಸುತ್ತದೆ.ರಾಜ್ಯದ ದಕ್ಷಿಣ ಭಾಗವು ಬಿಸಿಯಾದ, ಋತುಮಾನಿಕವಾಗಿ ಒಣದಾದ, ಉಷ್ಣವಲಯದ ಹುಲ್ಲುಗಾವಲ ಹವಾಮಾನವನ್ನು ವೀಕ್ಷಿಸುತ್ತದೆ; ಅದೇ ಉತ್ತರ ಭಾಗದಲ್ಲಿ ಬಿಸಿಯಾದ, ಅರೆ-ಶುಷ್ಕ, ಉಷ್ಣವಲಯದ ಹುಲ್ಲುಗಾವಲಿನ ರೀತಿಯ ಹವಾಮಾನವಿರುತ್ತದೆ.

ಋತುಮಾನಕ್ಕೆ ತಕ್ಕಂತೆ ರಾಜ್ಯದ ಹವಾಮಾನವು ಬದಲಾಗುತ್ತದೆ.ಜನವರಿಯಿಂದ ಫೆಬ್ರವರಿಯವರೆಗಿನ ಚಳಿಗಾಲದ ನಂತರ, ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆಯು ಇರುತ್ತದೆ.ಏಪ್ರಿಲ್ ಹಾಗೂ ಮೇ ತಿಂಗಳುಗಳು ಬಿಸಿಯಾಗಿ, ಅತ್ಯಂತ ಶುಷ್ಕವಾಗಿ ಹಾಗೂ ಸಾಮಾನ್ಯವಾಗಿ ಅಹಿತಕರವಾಗಿರುತ್ತದೆ.ಅಧಿಕ ತೇವಾಂಶ ಹಾಗೂ ತಾಪಮಾನದಿಂದ, ಜೂನ್ ತಿಂಗಳಲ್ಲಿ ವಾತಾವರಣವು ದುರ್ಭರವಾಗಿರುವ ಸಾಧ್ಯತೆ ಇದೆ.ಆನಂತರದ ಮೂರು ತಿಂಗಳುಗಳಲ್ಲಿ (ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್), ಅಧಿಕ ತೇವಾಂಶ ಮುಂದುವರಿದರೂ, ದಿನದ ತಾಪಮಾನದಲ್ಲಿ ಇಳಿತವಾಗುತ್ತದೆ. ಅಕ್ಟೋಬರ್‌ನಿಂದ ಡಿಸೆಂಬರ್ ತಿಂಗಳು, ಮಳೆಗಾಲದ ನಂತರದ ಋತುಮಾನ.ಅಕ್ಟೋಬರ್‌ನಿಂದ ಮಾರ್ಚ್‌ವರೆಗಿನ ಅವಧಿಯು, ಮಳೆಗಾಲದ ನಂತರದ ಹಾಗೂ ಚಳಿಗಾಲದ ಋತುಮಾನಗಳನ್ನು ಒಳಗೊಂಡು, ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ರಾಜ್ಯದ ಆಗ್ನೇಯ ಭಾಗದ ಮೇಲೆ ಪ್ರಭಾವ ಬೀರುವ ಮಳೆಯ ಕೆಲವು ಅವಧಿಗಳನ್ನು ಹೊರತುಪಡಿಸಿ, ಸಂಪೂರ್ಣ ರಾಜ್ಯದಲ್ಲಿ ಸಾಮಾನ್ಯವಾಗಿ ಹಿತಕರ ಹವಾಮಾನವಿರುತ್ತದೆ.



ಮನಕುಲದೊಂದಿಗೆ ಮಾತನಾಡುವ ಪ್ರಕೃತಿ

## ತಾಪಮಾನ

ಕರಾವಳಿ ಪ್ರದೇಶ ಹಾಗೂ ಎತ್ತರದ ಪ್ರಸ್ಥಭೂಮಿಯನ್ನು ಹೊರತುಪಡಿಸಿ, ರಾಜ್ಯಾದ್ಯಂತ ಹಗಲು ಹಾಗೂ ರಾತ್ರಿಯ ತಾಪಮಾನಗಳೆರಡೂ ಬಹುತೇಕವಾಗಿ ಸಮನಾಗೇ ಇರುತ್ತದೆ. ರಾಜ್ಯದ ನೈಋತ್ಯ ಪ್ರದೇಶವು ಎತ್ತರದಲ್ಲಿ ಇರುವುದರಿಂದ, ಸಾಮಾನ್ಯವಾಗಿ ತಾಪಮಾನವು ಅಲ್ಲಿ ಇಳಿತ ಕಂಡು, ಎತ್ತರದ ಮಟ್ಟದ ಸ್ಥಳಗಳಲ್ಲಿ ಮತ್ತಷ್ಟು ಕಡಿಮೆ ತಾಪಮಾನವು ತೋರುತ್ತದೆ. ಏಪ್ರಿಲ್ ಹಾಗೂ ಮೇ ತಿಂಗಳು ಅತ್ಯಧಿಕ ತಾಪಮಾನವಿರುವ ತಿಂಗಳುಗಳು.ಮೇ ತಿಂಗಳಲ್ಲಿ, ಸರಾಸರಿ ಗರಿಷ್ಠ ತಾಪಮಾನವು ರಾಜ್ಯದ ಈಶಾನ್ಯ ಮೂಲೆಯಲ್ಲಿ ೪೦ ಸೆ.ವರೆಗೆ ಏರುತ್ತದೆ; ಪಶ್ಚಿಮ ಘಟ್ಟ ಪ್ರದೇಶದ ನೈಋತ್ಯ ದಿಕ್ಕಿನತ್ತ ಹಾಗೂ ಕರಾವಳಿ ಪ್ರದೇಶದಲ್ಲಿ ಇದು ಇಳಿತ ಕಾಣುತ್ತದೆ. ರಾಜ್ಯದ ವಿವಿಧ ಸ್ಥಳಗಳಲ್ಲಿ ದಾಖಲಾದ ಅತ್ಯಧಿಕ ತಾಪಮಾನವೆಂದರೆ, ಮೇ ೨೩, ೧೯೨೮ ರಂದು ರಾಯಚೂರಿನಲ್ಲಿ ೪೫.೬.ಸೆ – ಇದು ಬೇಸಿಗೆಯ ತಿಂಗಳುಗಳಲ್ಲಿ ಇರುವ ಸಾಮಾನ್ಯಕ್ಕಿಂತ ೬ ಅಧಿಕವಾಗಿದೆ. ಪ್ರತ್ಯೇಕ ಸ್ಥಳದಲ್ಲಿ ದಾಖಲಾದ ಅತ್ಯಂತ ಕಡಿಮೆ ತಾಪಮಾನವೆಂದರೆ, ಡಿಸೆಂಬರ್ ೧೬, ೧೯೧೮ರಂದು ಬೀದರ್‌ನಲ್ಲಿ ೨.೮.ಸೆ. ಆಗಿತ್ತು.

# ಮಳೆ

ರಾಜ್ಯದ ವಾರ್ಷಿಕ ಮಳೆಯಲ್ಲಿ ಸುಮಾರು ೫೦ರಿಂದ ೩೫೦ ಸೆ.ಮೀ.ನಷ್ಟು ವ್ಯತ್ಯಾಸ ಕಾಣುತ್ತದೆ.ಬಿಜಾಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳ ದಕ್ಷಿಣ ಭಾಗದಲ್ಲಿ, ೫೦ರಿಂದ ೬೦ಸೆ.ಮೀ.ಗಳ ವ್ಯತ್ಯಾಸವಿದ್ದು, ಅಲ್ಲಿ ಅತ್ಯಂತ ಕಡಿಮೆ ಮಳೆಯಾಗುತ್ತದೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಮಳೆಯು ಗಣನೀಯವಾಗಿ ಅಧಿಕಗೊಂಡು, ಕರಾವಳಿ ಪ್ರದೇಶದಲ್ಲಿ ಅದು ಅತ್ಯಧಿಕವಾಗುತ್ತದೆ.ಮುಂಗಾರು, ಪ್ರಮುಖ ಮಳೆಗಾಲವಾಗಿದ್ದು (ಜೂನ್‌ನಿಂದ ಅಕ್ಟೋಬರ್), ರಾಜ್ಯವು ಅದರ ೮೦ ಪ್ರತಿಶತದಷ್ಟು ಮಳೆಯನ್ನು ಪಡೆಯುತ್ತದೆ. ಚಳಿಗಾಲದ ಮಳೆಯು (ಜನವರಿಯಿಂದ ಫೆಬ್ರುವರಿ) ವಾರ್ಷಿಕ ಒಟ್ಟಾರೆಯ ಒಂದು ಪ್ರತಿಶತಕ್ಕಿಂತ ಕಡಿಮೆ ಇದ್ದು, ಅಧಿಕ ಬಿಸಿಲಿನ ಋತುವಿನಲ್ಲಿ (ಮಾರ್ಚ್ – ಮೇ) ಏಳು ಪ್ರತಿಶತ ಹಾಗೂ ಮಳೆಗಾಲದ ನಂತರದ ಋತುವಿನಲ್ಲಿ ಸುಮಾರು ೧೨ ಪ್ರತಿಶತ ಮಳೆಯನ್ನು ಪಡೆಯುತ್ತದೆ. ಜೂನ್ ತಿಂಗಳ ಪ್ರಾರಂಭದ ಸುಮಾರಿಗೆ, ಅತ್ಯಂತ ದಕ್ಷಿಣ ಭಾಗದಲ್ಲಿ ಮುಂಗಾರು ಮಳೆಯು ಸಾಮಾನ್ಯವಾಗಿ ಪ್ರಾರಂಭವಾಗುತ್ತಿದ್ದು ಜೂನ್ ಮಧ್ಯಭಾಗದ ವೇಳೆಗೆ, ಸಂಪೂರ್ಣ ರಾಜ್ಯವನ್ನು ಆವರಿಸುತ್ತದೆ. ಮಳೆಗಾಲದ ತಿಂಗಳುಗಳಾದ ಜುಲೈ ಮತ್ತು ಆಗಸ್ಟ್‌ನಲ್ಲಿ, ವಾರ್ಷಿಕ ಮಳೆಯ ಸುಮಾರು ೩೦ ಪ್ರತಿಶತ ಹಾಗೂ ೧೮ ಪ್ರತಿಶತದಷ್ಟು ಮಳೆಯು ಬೀಳುತ್ತದೆ.ಕರ್ನಾಟಕದ ಕರಾವಳಿಯಲ್ಲಿ ಈ ಪ್ರತಿಯೊಂದು ತಿಂಗಳಲ್ಲೂ ಸುಮಾರು ೨೬ ಮಳೆಯ ದಿನಗಳು (ದಿನವೂ ಕನಿಷ್ಟ ೨.೫ರಷ್ಟಾದರೂ ಮಳೆ); ಕರ್ನಾಟಕದ ಒಳನಾಡಿನಲ್ಲಿ ೮ರಿಂದ ೧೧ ದಿನಗಳಷ್ಟು ಮಳೆ ಆಗುತ್ತದೆ. ಅಕ್ಟೋಬರ್ ತಿಂಗಳಿನ ಎರಡನೆ ವಾರದ ವೇಳೆಗೆ ಮುಂಗಾರು ಮಳೆಯ ಹಿನ್ನಡೆಯು ಪ್ರಾರಂಭವಾಗಿ, ಅಕ್ಟೋಬರ್‌ನ ಮಧ್ಯಭಾಗದ ವೇಳೆಗೆ, ಮಳೆಗಾಲವು ಸಂಪೂರ್ಣ ರಾಜ್ಯದಿಂದ ಹಿಂದಕ್ಕೆ ಸರಿಯುತ್ತದೆ.

ಹಿನ್ನಡೆಯುತ್ತಿರುವ ಮಳೆಗಾಲದ ಸೆಳೆವು, ಅಂದರೆ, ಹಿಂಗಾರು ಮಳೆಯು (ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ) ಕರ್ನಾಟಕದ ದಕ್ಷಿಣ ಒಳನಾಡಿನ ಪೂರ್ವ ಭಾಗಗಳ ಮೇಲೆ ಪರಿಣಾಮ ಬೀರುತ್ತಿದ್ದು ಈ ಪ್ರದೇಶದಲ್ಲಿ ಬರುವ ಸುಮಾರು ೩೦ ಪ್ರತಿಶತದಷ್ಟು ಮಳೆಯು ಈ ಋತುವಿನಲ್ಲಿ ಬೀಳುತ್ತದೆ.

ಭಾರತದ ಅಧಿಕ ಮಳೆಗಾಲದ ತಾಣಗಳ ಪೈಕಿ, ೫೦೦ಸೆ.ಮೀ.ಗಿಂತ ಅಧಿಕ ವಾರ್ಷಿಕ ಮಳೆಗರೆಯುವ ನಾಲ್ಕು ತಾಣಗಳು ಕರ್ನಾಟಕದಲ್ಲಿದೆ. ಅವುಗಳೆಂದರೆ ಆಗುಂಬೆ, ಭಾಗಮಂಡಲ, ಪುಲ್ಲಿಂಗೋಥ್ ಹಾಗೂ ಮೋಕುಟ್. ಆಗುಂಬೆಯನ್ನು ದಕ್ಷಿಣ ಭಾರತದ ಚಿರಾಪುಂಜಿ ಎಂದು ಕರೆಯಬಹುದು.


ಜೋಗ ಜಲಪಾತ, ಶಿವಮೊಗ್ಗ ಜಿಲ್ಲೆ

# ಅರಣ್ಯಗಳು

ಕರ್ನಾಟಕ ರಾಜ್ಯವು ೧,೯೧,೭೯೧ ಚ.ಕಿ.ಮೀ ಭೌಗೋಳಿಕ ಪ್ರದೇಶವನ್ನು ಹೊಂದಿದ್ದು, ಅದರಲ್ಲಿ ೩೮,೨೮೪ ಚ.ಕಿ.ಮೀ.ಪ್ರದೇಶವು (೧೯.೯೬ ಪ್ರತಿಶತ) ಅರಣ್ಯ ಇಲಾಖೆಯ ನಿಯಂತ್ರಣದಲ್ಲಿದೆ. ಅರಣ್ಯಗಳನ್ನು, ಕಾಯ್ದಿರಿಸಿದ ರಕ್ಷಿತ (೨೮,೬೮೯.೯ ಚ.ಕಿ.ಮೀ.), (೩,೯೩೦.೭೦ ಚ.ಕಿ.ಮೀ.), ಅವರ್ಗೀಕೃತ (೫,೨೩೦.೯೯ ಚ.ಕಿ.ಮೀ.), ಗ್ರಾಮ್ಯ (೧,೨೪೨.೨ ಚ.ಕಿ.ಮೀ.) ಹಾಗೂ ಖಾಸಗಿ (೩೦೮.೪೨ ಚ.ಕಿ.ಮೀ.) ಅರಣ್ಯಗಳೆಂದು ವಿಂಗಡಿಸಲಾಗಿದೆ.ಅವರ್ಗೀಕೃತ ಪ್ರದೇಶಗಳು ಸಿ ಹಾಗೂ ಡಿ ಶ್ರೇಣಿಯ ಭೂಮಿಗಳು, ಅಂದರೆ ಬಹುತೇಕವಾಗಿ ಕಂದಾಯ ಇಲಾಖೆಯಿಂದ ಹಸ್ತಾಂತರಗೊಂಡ ಬಂಜರು ಭೂಮಿಯನ್ನು ಒಳಗೊಂಡಿವೆ.ರಾಜ್ಯದ ಅರಣ್ಯ ಪ್ರದೇಶ ಹಾಗೂ ಭೌಗೋಳಿಕ ಪ್ರದೇಶದ ಅಖಿಲ-ಭಾರತ ಸರಾಸರಿಯ ಶೇಖಡಾವಾರು ಹೋಲಿಕೆಯಲ್ಲಿ, ರಾಷ್ಟ್ರೀಯ ಅರಣ್ಯ ನೀತಿಯಲ್ಲಿ ನಿಗಧಿತ ೨೩ ಪ್ರತಿಶತ ಹಾಗೂ ೩೩ ಪ್ರತಿಶತಕ್ಕಿಂತ ಕಡಿಮೆ ಇದೆ.ನೆರೆ ರಾಜ್ಯಗಳಲ್ಲಿ, ಅರಣ್ಯಗಳ ಅಡಿಯಲ್ಲಿ ಬರುವ ಪ್ರದೇಶವು ಹೀಗಿದೆ: ಆಂಧ್ರ ಪ್ರದೇಶ ೬೨ ಲಕ್ಷ ಹೆಕ್ಟೇರುಗಳು (ದೇಶದ ಒಟ್ಟಾರೆ ಪ್ರದೇಶದ ೯ ಪ್ರತಿಶತ ಭಾಗ), ಮಹಾರಾಷ್ಟ್ರ ೫೪ ಲಕ್ಷ ಹೆಕ್ಟೇರುಗಳು (೮ ಪ್ರತಿಶತ), ತಮಿಳುನಾಡು ೨೨ ಲಕ್ಷ ಹೆಕ್ಟೇರುಗಳು (೩ ಪ್ರತಿಶತ) ಹಾಗೂ ಕೇರಳ ೧೧ ಲಕ್ಷ ಹೆಕ್ಟೇರುಗಳು (೨ ಪ್ರತಿಶತ).

೧೯೫೬–೮೭ರ ಅವಧಿಯಲ್ಲಿ ಅರಣ್ಯೇತರ ಉದ್ದೇಶಗಳಿಗಾಗಿ ಸುಮಾರು ಎರಡು ಲಕ್ಷ ಹೆಕ್ಟೇರುಗಳಷ್ಟು ಅರಣ್ಯ ಪ್ರದೇಶವು ನಾಶವಾಗಿದೆ.ವಿವರಗಳು ಕೆಳಕಂಡಂತೆ ಇದೆ:

| | |
|---|---|
| ಜಲವಿದ್ಯುತ್ ಉದ್ದೇಶಗಳು | ೨೨,೧೯೪ ಹೆಕ್ಟೇರುಗಳು |
| ವಿದ್ಯುತ್ ತಂತಿಗಳು/ಸಾಲುಗಳು | ೧,೬೮೮ ಹೆಕ್ಟೇರುಗಳು |
| ರಸ್ತೆಗಳು | ೩೩೦ ಹೆಕ್ಟೇರುಗಳು |
| ಕೆರೆಗಳು | ೩೫,೮೪೦ ಹೆಕ್ಟೇರುಗಳು |
| ಸಣ್ಣ ಪಟ್ಟಣಗಳು | ೧,೭೯೧ ಹೆ. |
| ಗಣಿಗಾರಿಕೆ | ೪೨,೬೭೬ ಹೆ. |
| ಕೃಷಿ | ೬೭,೨೧೭ ಹೆ. |
| ಪುನರ್ವಸತಿ | ೨೫,೮೨೦ ಹೆ. |
| ಇತರ ಉದ್ದೇಶಗಳು | ೬,೩೫೭ ಹೆ. |
| **ಒಟ್ಟು** | **೨,೦೩,೯೧೩ ಹೆ.** |

ರಾಜ್ಯದಲ್ಲಿ ೨೦ ಪ್ರತಿಶತ ಭೂಪ್ರದೇಶವನ್ನು ಅರಣ್ಯಗಳೆಂದು (೩.೮೬ ಮಿಲಿಯನ್ ಹೆಕ್ಟೇರುಗಳು) ವರ್ಗೀಕರಿಸಿದ್ದರೂ, ಕೇವಲ ೧೧ ಪ್ರತಿಶತ ಪ್ರದೇಶವು ಸರಿಯಾದ ಅರ್ಥದಲ್ಲಿ ದಟ್ಟ ಅರಣ್ಯದಿಂದ ಆವೃತವಾಗಿದೆ. ಮಿಕ್ಕ ಪ್ರದೇಶಗಳಲ್ಲಿ, ಅದು ವಿವಿಧ ಹಂತಗಳ ಶಿಥಿಲೀಕರಣದಲ್ಲಿದೆ.

# ಸಸ್ಯ ಸಂಕುಲ

ಹವಾಮಾನ, ಮಣ್ಣು ಹಾಗೂ ಭೂವಿನ್ಯಾಸಗಳಿಂದ ಪ್ರಭಾವಿತಗೊಂಡ ಸಸ್ಯ ವಲಸೆಯಿಂದುಂಟಾದ ಸಿರಿವಂತ ಹಾಗೂ ವೈವಿಧ್ಯಮಯ ಸಸ್ಯರಾಶಿಯನ್ನು ಕರ್ನಾಟಕ ರಾಜ್ಯವು ಹೊಂದಿದೆ. ಶತಮಾನಗಳಿಂದ ಅನೇಕ ಪ್ರದೇಶಗಳಲ್ಲಿ ರೂಪಿತವಾದ ಮೂಲ ಸ್ವರೂಪಗಳನ್ನು ಜೈವಿಕ ಅಂಶಗಳು ಸಾಕಷ್ಟು ಮಾರ್ಪಾಡು ಮಾಡಿವೆ.

ಭೂವಿನ್ಯಾಸ, ಜೈವಿಕ-ಹವಾಮಾನ ಹಾಗೂ ಮಣ್ಣನ್ನು ಗಣನೆಗೆ ತೆಗೆದುಕೊಂಡು, ಕರ್ನಾಟಕದ ಸಸ್ಯರಾಶಿಯನ್ನು ಕೆಳಕಂಡ ನಾಲ್ಕು ವರ್ಗಗಳಲ್ಲಿ ವಿಂಗಡಿಸಬಹುದು.ಅವುಗಳೆಂದರೆ,

೧. ಲಿಟ್ಟೋರಲ್ ಸಸ್ಯಸಂಪತ್ತು
೨. ಪಶ್ಚಿಮ ಕರಾವಳಿಯ ಉಷ್ಣವಲಯದ ಸಸ್ಯಸಂಪತ್ತು
೩. ಮೇಲ್ಭೂಮಿಯ ಎಲೆ ಉದುರುವ ಸಸ್ಯಸಂಪತ್ತು
೪. ದಾಕ್ಷಿಣಾತ್ಯ ಉಷ್ಣವಲಯದ ಪರ್ವತ ಸಸ್ಯಸಂಪತ್ತು

**ಲಿಟ್ಟೋರಲ್ ಸಸ್ಯಸಂಪತ್ತು:** ಕರ್ನಾಟಕದಲ್ಲಿ ಎರಡು ರೀತಿಯ ಲಿಟ್ಟೋರಲ್ ಸಸ್ಯಸಂಪತ್ತು ಇದೆ.





caption goes here caption goes here

ಅಯಾಸಗೊಂಡ ಕಣ್ಣುಗಳಿಗೆ ಹಸಿರಿನ ಭೂಸಾದೃಶ್ಯ

ಮೊದಲನೆಯದು ಮರಳು ದಿಬ್ಬಗಳ ಭೂಪ್ರದೇಶದ ಸಸ್ಯಸಂಪತ್ತು ಹಾಗೂ ಎರಡನೆಯದು ಅಳಿವೆಗಳ ಉದ್ದಕ್ಕೂ ಇರುವ ಲವಣ ಸಸ್ಯಗಳು.ಸುಡು ಬಿಸಿಲು, ಚಲಿಸುತ್ತಿರುವ ಮರಳು ಹಾಗೂ ಲವಣಯುಕ್ತ ಗಾಳಿಯು ಹೇರುವ ಸೀಮಿತತೆಗಳನ್ನು ಸ್ಯಾಮ್ಮೊಫೈಟ್ಸ್ ಎಂಬ ವಿಶೇಷ ಸಸ್ಯಗಳು ಮೀರಿವೆ. ಅನೇಕ ಮರಳಿನ ನಿರ್ಬಂಧಕಗಳು, ಅಲೆಗಳ ಗುರುತಿಗಿಂತ ಎತ್ತರದಲ್ಲಿರುವ ಮರಳು ದಿಬ್ಬಗಳನ್ನು ಹಿಡಿದು ನಿಲ್ಲಿಸುತ್ತದೆ.ಕಡಲ ತೀರದ ಹಿಂಬದಿಯ ಒದ್ದೆ ಮರಳುಗಳ ಮೇಲೆ ಋತುಮಾನಿಕ ಹಾಸನ್ನು ಸನ್‌ಡ್ಯೂ ಹಾಗೂ ಬ್ಲಾಡ್ಡರ್ ವರ್ಟ್‌ಗಳೆಂಬ ಸಸ್ಯಗಳು ಹಾಸುತ್ತವೆ.


ಸೀಮಿತವಾದ ಕಾಂಡ್ಲ ಸಸ್ಯ ರಚನೆಗಳು, ಸಮುದ್ರದತ್ತ ಸಾಗುವ ಭೂಮಿಯ ಕ್ಷಾರತೆಯಲ್ಲಿ ಹಠಾತ್ ಏರಿಕೆ ಕಾಣುವ ಅಳಿವೆಗಳಲ್ಲಿ ಸಂಭವಿಸುತ್ತದೆ. ಕುಂದಾಪುರ ಹಾಗೂ ಗೋಕರ್ಣದ ಬಳಿ ಲವಣ / ಕ್ಷಾರ ಸಸ್ಯಸಂಪತ್ತಿನ ಉತ್ತಮ ಉದಾಹರಣೆಗಳು ದೊರೆಯುತ್ತವೆ. ಅದು ಬಹುತೇಕವಾಗಿ ರೈಝೋಫ್ಹೋರ– ಅವಿಸೆನಿಯಾ– ಬ್ರುಗ್ಯುಎರ ರೀತಿಯದಾಗಿವೆ. ಜೌಗು ಕ್ಷಾರ ಪರಿಸರದೊಡನೆ, ಬಲವಾದ ಭರತ ಪ್ರವಾಹ/ಅಲೆಗಳ ಪ್ರವಾಹ ಹಾಗೂ ನೀರಿನ ಮಟ್ಟದಲ್ಲಿ ಉಂಟಾಗುವ ಏರುಪೇರುಗಳು, ಅಲ್ಲದೆ ಕೆಸರಿನ ಮಣ್ಣಿನ ಉಸಿರುಕಟ್ಟಿಸುವ ಪರಿಸ್ಥಿತಿಗಳ ನಿರ್ಬಂಧನೆಗಳನ್ನು ಮೀರಿ, ಮರಗಳು ಹಾಗೂ ಪೊದೆಗಳು ಬೆಳೆಯಬೇಕು. ಈ ಲಿಟ್ಟೋರಲ್ ಸಸ್ಯ ರಚನೆಗಳು, ನಿಸರ್ಗದ ಸಮತೋಲನ ಕಾಪಾಡುವಲ್ಲಿ ಪಾರಿಸಾರಿಕ ಪಾತ್ರವನ್ನು ವಹಿಸುತ್ತದೆ. ಕೃಷಿ ಭೂಮಿ ಹಾಗೂ ಮಾನವ ವಸಾಹತುಗಳತ್ತ ಕಡಲತೀರದ ಮರಳು ತಳ್ಳಲ್ಪಡುವುದನ್ನು ಈ ಸಾಮ್ಮೊಫೈಟ್‌ಗಳು ತಡೆಯುತ್ತವೆ.ವಿನೋದವನ್ನು ನೀಡುವ ಸಮುದ್ರ ತೀರವನ್ನೂ ಅವು ರಕ್ಷಿಸುತ್ತವೆ.

ವಿವಿಧ ಬಗೆಯ ಮೀನು ಹಾಗೂ ಇತರ ಸಾಗರ ಪ್ರಾಣಿಗಳಿಗೆ ಪ್ರಜನನಕ್ಕೆ ಸ್ಥಳವನ್ನೊದಗಿಸುತ್ತದೆ. ಕರಾವಳಿ ಬದಿಯ ಪೂರ್ವಕ್ಕೆ ಇರುವ ನೈಸರ್ಗಿಕ ಸಸ್ಯಸಂಪತ್ತು, ತೇವಯುಕ್ತ ಉದುರೆಲೆಯ ರೀತಿಯದಾಗಿದೆ.ಕೆಲವೊಮ್ಮೆ, ಅದನ್ನು ನಿತ್ಯಹಸಿರಿನ ಸಸ್ಯ ಪರಿಸರದ ಅವನತಿಯ ಹಂತ ಎಂದು ಪರಿಗಣಿಸಲಾಗುತ್ತದೆ.

ದಕ್ಷಿಣ ಕನ್ನಡದ ವಿಸ್ತೃತ ಕರಾವಳಿಯ ತಗ್ಗು ಪ್ರದೇಶದಲ್ಲಿ, ಪೊದೆಗಳ ದಟ್ಟ ಕೆಳಸ್ತರದೊಂದಿಗೆ, ಸಾಮಾನ್ಯವಾಗಿ ಹೋಪಿಯಾ–ಸೈಜಿಜಿಯಮ್–ಹೊಲಿಗಾಮ ಸರಣಿಯನ್ನು ಕಾಣಬಹುದು. ಲಿಯಾನಾಗಳು, ಅದರಲ್ಲೂ ಹುಗೋನಿಯಾ ಮಿಸ್ಟಾಕ್ಸ್ ಹಾಗೂ ಯುವಾರಿಯ ರಿಯೋರಿಯಮ್ ಸಾಮಾನ್ಯವಾಗಿ ಬೆಳೆಯುವ ಸಸ್ಯಗಳು. ಘಟ್ಟಗಳ ಬೆಟ್ಟದ ಬುಡದತ್ತ, ದ್ವಿತೀಯಕ ತೇವಯುಕ್ತ ಉದುರೆಲೆಯ ಅರಣ್ಯಗಳು ಉತ್ತಮವಾಗಿ ಸಂರಕ್ಷಣೆಯಾಗಿದೆ. ಕರಾವಳಿಯ ನಗರ ಕೇಂದ್ರಗಳಲ್ಲಿ ಪರಿಸರದ ಅಧಿಕವಾಗಿರುವ ಜೈವಿಕ ಅಂಶಗಳು, ಘಟ್ಟಗಳಲ್ಲಿ ಕಡಿಮೆ ಆಗುತ್ತವೆ.

**ಪಶ್ಚಿಮ ಕರಾವಳಿಯ ಉಷ್ಣವಲಯದ ಸಸ್ಯಸಂಪತ್ತು:** ಪಶ್ಚಿಮ ಕರಾವಳಿಯ ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳ ಉತ್ತಮ ಉದಾಹರಣೆಗಳನ್ನು ಘಟ್ಟಗಳ ಕೆಳಗಿನ ಇಳಿಜಾರು ಹಾಗೂ ಕಣಿವೆಗಳಲ್ಲಿ ಕಾಣಬಹುದು.ಈ ಮುಚ್ಚಿದ ಛತ್ರ ಅರಣ್ಯಗಳನ್ನು ಗಾಢವಾದ ಋತುಮಾನಿಕ ಅವಕ್ಷೇಪನವು ಪೋಷಿಸಿ, ಪರಿಸರದ ಸಸ್ಯಸಂಪತ್ತನ್ನು ರೂಪಿಸುತ್ತದೆ. ನೆಟ್ಟಗಿರುವ, ಗುಡ್ಡದ ಬುಡಚಾಚಿನ ಕಾಂಡಗಳು, ೨೦ ಅಥವಾ ಅಧಿಕ ಮೀಟರ್‌ಗಳಿಗಿಂತ ರೆಂಬೆರಹಿತವಾಗಿ ಬೆಳೆದು, ಪಕ್ಕದಲ್ಲಿರುವ ಮರಗಳ ಮೇಲ್ಭಾಗವನ್ನು ಸೇರುತ್ತದೆ.ಪ್ರಧಾನ ಛತ್ರವೃಕ್ಷಗಳಲ್ಲಿ ವಿವಿಧ ರೀತಿಗಳಿವೆ. ಅತ್ಯಂತ ಸಾಮಾನ್ಯವಾದುದೆಂದರೆ ಯುಪ್ಟೆರೊಕಾರ್ಪಸ್ - ಕಿಂಗಿಯೋಡೆಂಡ್ರಾನ್ - ವಟಾರಿಯ – ಇದನ್ನು ಸರಾಸರಿ ಸಮುದ್ರ ಮಟ್ಟಕ್ಕಿಂತ ಸುಮಾರು ೭೦ರಿಂದ ೬೦೦ ಮೀಟರ್ ಎತ್ತರಗಳ ನಡುವೆ ಕಾಣಬಹುದು.ಈ ಅರಣ್ಯಗಳಲ್ಲಿ ವಿವಿಧ ರೀತಿಯ ಇತರ ಸಸ್ಯ ಸ್ವರೂಪಗಳಿವೆ.ಅರಣ್ಯಗಳ ಒಳಗೆ, ಜೀವವೈವಿಧ್ಯತೆ ಹಾಗೂ ಅದರ ಸ್ಥಾನಿಕ ಹಂಚಿಕೆಯಿಂದ, ನೀರು ಹಾಗೂ ಇಂಗಾಲದ ಡೈಆಕ್ಸೈಡ್‌ಗಳ ಜೀವಾಮೃತವಾದ ಜೈವಿಕ ಸಂಯುಕ್ತಗಳಾಗಿ ಪರಿವರ್ತಿಸಲು, ಸೂರ್ಯನ ಶಕ್ತಿಯನ್ನು ಪರಿಣಾಮಕಾರಿಯಾಗಿ ಹಂಚುತ್ತದೆ.

**ಮೇಲ್ಭೂಮಿಯ ತೇವಯುಕ್ತ ಉದುರೆಲೆಯ ಸಸ್ಯಸಂಪತ್ತು:** ಬೆಟ್ಟದ ಗಾಳಿಮರೆಯ ಬದಿಯತ್ತ ಕಡಿಮೆಯಾಗುತ್ತಿರುವ ಮಳೆಯು, ಮತ್ತೊಂದು ಸಂಧಿಕಾಲದ ಸಸ್ಯಸಂಪತ್ತಿಗೆ ದಾರಿ ಮಾಡಿಕೊಡುತ್ತದೆ - ಅದು, ಮೇಲ್ಭೂಮಿಯ ತೇವಯುಕ್ತ ಉದುರೆಲೆಯ ಸಸ್ಯಸಂಪತ್ತು. ಎಲೆಗಳಾಗಿದ್ದಾಗ, ಈ ಅರಣ್ಯಗಳ ಛಾವಣಿಯು ದಟ್ಟವಾಗಿರುತ್ತದೆ. ಒಣ ತಿಂಗಳುಗಳಲ್ಲಿ, ಬಾಷ್ಪವಿಸರ್ಜನೆಯಿಂದ ಉಂಟಾಗುವ ನೀರಿನ ಕಳವನ್ನು ತಪ್ಪಿಸಲು, ಅಲ್ಪಾವಧಿಯ ಎಲೆ ಉದುರುವಿಕೆಯುಂಟಾಗುತ್ತದೆ. ಎಲೆ–ರಹಿತ ಅವಧಿಯಲ್ಲಿ, ಮರಗಳು ಹೂಬಿಡಲು ಪ್ರಾರಂಭಿಸುತ್ತವೆ. ಬೆಳಗಾವಿಯಿಂದ ಕೊಡಗಿನವರೆಗಿನ ಈ ತೇವಯುಕ್ತ ಪತನಶೀಲ ಸಸ್ಯಸಂಪತ್ತು, ತೇಗ, ಮತ್ತಿ, ಕಣಗಲು, ಹಾಗೂ


ಸಮೃದ್ಧ ಕೃಷಿ ಭೂಮಿ

ನಂದಿ ಎಂಬ ಸ್ಥಳೀಯ ಹೆಸರುಗಳನ್ನುಳ್ಳ ಟೆಕ್ಟೋನ–ದಿಲ್ಲೆನಿಯಾ–ಲಾಗರ್‌ಸ್ಟ್ರೋಮಿಯಾ–ಟರ್ಮಿನಾಲಿಯಾ ವೃಕ್ಷ ಸರಣಿಗೆ ನೆಲೆಯಾಗಿದೆ.ಹಿಂದೊಮ್ಮೆ, ಘಟ್ಟಗಳ ಪೂರ್ವದ ಅಂಚಿನ ವಿಸ್ತೃತ ಪ್ರದೇಶಗಳು ಬಿದಿರಿನ ಪೊದೆಗಳಿಂದ ಆವೃತವಾಗಿತ್ತು.

**ಮೇಲ್ಭೂಮಿಯ ಒಣ ಉದುರೆಲೆಯ ಸಸ್ಯಸಂಪತ್ತು:** ಮೈದಾನದ ಪೂರ್ವಭಾಗದ ಜೈವಿಕ ಹವಾಮಾನವು, ಅನೇಕ ರಕ್ಷಿತ ಪ್ರದೇಶಗಳಲ್ಲಿ ಒಣದಾದ ಉದುರೆಲೆಯ ಸಸ್ಯಸಂಪತ್ತಿನ ಸಂಧಿಕಾಲಕ್ಕೆ ಆಸ್ಪದ ನೀಡುತ್ತದೆ. ಇಲ್ಲಿ ತೆರೆದ ಛಾವಣಿಯಿದ್ದು, ಅತ್ಯಂತ ಒಣ ತಿಂಗಳುಗಳಲ್ಲಿ ಮರಗಳು ಎಲೆರಹಿತವಾಗಿರುತ್ತವೆ. ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ವಾಡಿಕೆಯಂತೆ ಬರುವ ಮಳೆಯ ನಂತರ ಕಾಣುವ ಮೊದಲ ಚಿಗುರೆಲೆಗಳು ಬರುವ ಮುನ್ನವೇ, ಹೂ ಹಾಗೂ ಹಣ್ಣುಗಳು ಬಿಡುವ ಪ್ರಕ್ರಿಯೆಯು ಬಹಳಷ್ಟು ಮುಂಚಿತವಾಗಿಯೇ ನಡೆಯುತ್ತದೆ.

ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ರಾಯಚೂರು, ಕೊಪ್ಪಳ, ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಗಳ ಅನೇಕ ಭಾಗಗಳಲ್ಲಿ, ಅಗಲ–ಎಲೆಯ ಉದುರೆಲೆ ಅರಣ್ಯಗಳು, ಸಣ್ಣ ಎಲೆಗಳನ್ನು ಹೊಂದಿದ ಮರಗಳಿಗೆ ಎಡೆ ಮಾಡಿವೆ.ಈ ಅರಣ್ಯಗಳ ಉಳಿದ ಕೆಲವು ಭಾಗಗಳು ಅಕೇಷಿಯಾ, ಅಲ್‌ಬಿಜ್ಜಿಯಾ ಹಾಗೂ ಹಾರ್ಡ್ವಿಕಾದ (ಜಾಲಿ, ಬಿಲ್ವಾರ ಹಾಗೂ ಎಣ್ಣೆಮರಗಳೆಂಬ ಸ್ಥಳೀಯ ಹೆಸರುಗಳನ್ನು ಇವು ಹೊಂದಿವೆ) ಮರಗಳಿಂದ ಕೂಡಿದೆ.ಮೈದಾನವು ಅನೇಕಾನೇಕ ನೀರಾವರಿ ಕೆರೆಗಳಿಂದ ತುಂಬಿದ್ದು, ಸಾಮಾನ್ಯವಾಗಿ ಇವು ಸ್ವಾರಸ್ಯಕರ ರೀತಿಯ ಸಸ್ಯಸಂಕುಲಗಳಿಗೆ ಆಧಾರವನ್ನು ನೀಡುತ್ತವೆ.

**ದಾಕ್ಷಿಣಾತ್ಯ ಉಷ್ಣವಲಯದ ಪರ್ವತ ಸಸ್ಯಸಂಪತ್ತು:** ೧,೫೦೦ ಮೀಟರ್‌ಗಳಿಗಿಂತ ಎತ್ತರದಲ್ಲಿ, ಅದರಲ್ಲೂ ವಿಶೇಷವಾಗಿ ಕುದುರೆಮುಖ, ಬಾಬಬುಡನಗಿರಿ ಹಾಗೂ ಬಿಳಿಗಿರಿರಂಗನ ಬೆಟ್ಟಗಳಲ್ಲಿ, ಉಷ್ಣವಲಯದ ನಿತ್ಯಹರಿದ್ವರ್ಣದ ಮರಗಳಲ್ಲಿ ಉನ್ನತೀಯ ವ್ಯತ್ಯಾಸವು ಪ್ರಕಟವಾಗುತ್ತದೆ. ಹುಲ್ಲುಗಾವಲು ಹಾಗೂ ತಗ್ಗಿನ ಮರಯುಕ್ತ ಭಾಗಗಳ ಸಸ್ಯಸಂಪತ್ತಿನಿಂದ ದಾಕ್ಷಿಣಾತ್ಯ ಉಷ್ಣವಲಯದ ಪರ್ವತ ಸಸ್ಯಸಂಪತ್ತನ್ನು ಒಳಗೊಂಡಿದೆ. ಅಲ್ಪಕಾಲದಲ್ಲೇ ಯಥೇಚ್ಛವಾಗಿ ಬೆಳೆಯುವ ಔಷಧೀಯ ಸಸ್ಯಗಳು ಒಂದಾದ ಮೇಲೆ ಒಂದರಂತೆ ಕಾಣಿಸಿಕೊಳ್ಳುತ್ತವೆ. ತೇವಯುಕ್ತ ಅರಣ್ಯಗಳ ಗಣನೀಯ ಭಾಗವು, ಜೈವಿಕ ಅಂಶಗಳಿಂದ ಬಹಳಷ್ಟು ಬದಲಾವಣೆ ಹೊಂದಿವೆ.

ಕರ್ನಾಟಕದ ಸಸ್ಯಸಂಪತ್ತಿನ ಚಲನಾತ್ಮಕ ವ್ಯವಸ್ಥೆಯು, ಜೈವಿಕ ಅಂಶಗಳಿಂದ, ಅದರಲ್ಲೂ ಮಾನವ ಹಸ್ತಕ್ಷೇಪದಿಂದ, ನೈಸರ್ಗಿಕ ಸಸ್ಯಸಂಪತ್ತಿನಲ್ಲಿ ಹಲವಾರು ಬದಲಾವಣೆಗಳನ್ನು ಸೂಚಿಸುತ್ತದೆ. ಮಾನವ–ವಾಸದ ಕರಾವಳಿ ಪ್ರದೇಶಗಳು ತೆಂಗಿನ ಮರಗಳ ದಟ್ಟ ಛಾವಣಿಯನ್ನು ಪ್ರಸ್ತುತಪಡಿಸುತ್ತವೆ. ಗಮನಾರ್ಹ ಛಾವಣಿಯುಳ್ಳ ಸಸ್ಯಸಂಪತ್ತಿನ ಒಣ ರೀತಿಗಳ ಸಂಧಿಕಾಲಕ್ಕೆರಚನೆಗಳು, ಪೊದೆಗಳ ಅಡಿಕಾಡು ಹಾಗೂ ನೆಲವನ್ನು ಮುಚ್ಚಿದ ಔಷಧೀಯ ಗಿಡಗಳು, ತಲುಪಲಾಗದ ಕೆಲವು ಪ್ರದೇಶಗಳು ಹಾಗೂ ಕಾಯ್ದಿರಿಸಿದ ಅರಣ್ಯದ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ.

# ಪ್ರಾಣಿ ಸಂಕುಲ

ಕರ್ನಾಟಕದಲ್ಲಿ ದೊರೆಯುವ ವನ್ಯಜೀವಿಗಳ ಪೈಕಿ, ಆನೆ, ಹುಲಿ, ಚಿರತೆ, ಗೌರ್/ಕಾಡೆಮ್ಮೆ, ಸಾಂಬಾರ್ ಜಾತಿಯ ಜಿಂಕೆ, ಚೀತಲ್ ಮುಂಟ್‌ಜಾಕ್, ಬಾನೆಟ್ ಮಕಾಕ್/ಮಂಗ, ಕಾಡುಪಾಪ, ಸಾಮಾನ್ಯ ಪಾಮ್ ಸಿವೆಟ್, ಸಣ್ಣ ಭಾರತೀಯ ಸಿವೆಟ್, ಕರಡಿ, ಧೋಲ್/ಕಾಡು ನಾಯಿ, ಪಟ್ಟೆ ಹೈನಾ ಹಾಗೂ ಗೋಲ್ಡನ್ ಗುಳ್ಳೆನರಿ (ಜಾಕಾಲ್)ಗಳನ್ನು ನೋಡಬಹುದು.ಇಲ್ಲಿ ಕಾಣುವ ಕೆಲವು ಪಕ್ಷಿಗಳ ಪೈಕಿ, ಗ್ರೇಟ್ ಹಾರ್ನ್‌ಬಿಲ್, ಮಲಬಾರ್ ಪೈಡ್ ಹಾರ್ನ್‌ಬಿಲ್, ಸಿಲೋನ್ ಫ್ರಾಗ್‌ಮೌತ್, ಹೆರಾನ್‌ಗಳು (ಕ್ರೌಂಚ ಪಕ್ಷಿ/ಸಾರಸ), ಬಾತುಕೋಳಿಗಳು, ಕೈಟ್‌ಗಳು, ಫಾಲ್ಕನ್‌ಗಳು, ಕ್ವೇಲ್‌ಗಳು, ಪಾರ್ಟ್‌ರಿಡ್ಜ್, ಲ್ಯಾಪ್‌ವಿಂಗ್, ಸ್ಯಾಂಡ್‌ಪೈಪರ್, ಪಾರಿವಾಳ, ಡವ್, ಪಾರಕೀಟ್, ಕೋಗಿಲೆ, ಗೂಬೆ, ನೈಟ್‌ಜಾರ್, ಸ್ವಿಫ್ಟ್, ಕಿಂಗ್‌ಫ್ಲಿಷರ್, ಬೀ–ಈಟರ್ಸ್ (ಜೇನು ಭಕ್ಷಕಗಳು) ಹಾಗೂ ಮುನಿಯಾಗಳು ಇವೆ.ಕಳ್ಳಬೇಟೆ , ವಾಸಸ್ಥಾನಗಳ ವಿನಾಶ, ಮಾನವ–ವನ್ಯಮೃಗಗಳ ತಿಕ್ಕಾಟ ಹಾಗೂ ಮಾಲಿನ್ಯದಿಂದ, ಕರ್ನಾಟಕದ ವನ್ಯಸಂಪತ್ತು ಗಂಡಾಂತರಕ್ಕೆ ಒಳಪಟ್ಟಿದೆ.

ಕರ್ನಾಟಕ ರಾಜ್ಯವು ಸಂಪದ್ಭರಿತ ಸಸ್ಯ ಹಾಗೂ ಪ್ರಾಣಿ ಸಂಕುಲವನ್ನು ಪಡೆದಿದೆ.ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿ ಮಾತ್ರವೇ, ಸ್ವಲ್ಪಮಟ್ಟಿಗಾದರೂ ಅದರ ನೈಸರ್ಗಿಕ ಜೈವಿಕ ಸಂಪತ್ತನ್ನು ಉಳಿಸಿಕೊಂಡಿರುವ ರಾಜ್ಯದ ಭಾಗ. ಅನೇಕ ಜಲ–ವಿದ್ಯುತ್ ಹಾಗೂ ನೀರಾವರಿ ಯೋಜನೆಗಳು, ಗಣಿಗಾರಿಕೆ, ತ್ವರಿತ ಗತಿಯಲ್ಲಿ ನಡೆಯುತ್ತಿರುವ ಅರಣ್ಯಗಳ ಶೋಷಣೆ, ಹಾಗೂ ನೆಡುತೋಪುಗಳು ಹಾಗೂ ಬೆಳೆ ಬೇಸಾಯದಿಂದ ಹೆಚ್ಚುತ್ತಿರುವ ಭೂಬೇಡಿಕೆಯಿಂದ, ಸ್ಥಳೀಯ ಪ್ರಾಣಿಸಂಕುಲಗಳ ಈ ಕೊನೆಯ ಆಶ್ರಯ ತಾಣವು ವೇಗದ ಅವನತಿಗೆ ಒಳಗಾಗುತ್ತಿದೆ. ಕರ್ನಾಟಕದಲ್ಲಿ ಅರಣ್ಯಗಳ ಅಡಿಯಲ್ಲಿ ಬರುವ ಕ್ಷೇತ್ರವು ಒಟ್ಟು ೩೮.೭೨ ಲಕ್ಷ ಹೆಕ್ಟೇರುಗಳು, ಅಂದರೆ, ರಾಜ್ಯದ ಒಟ್ಟಾರೆ ಭೂಪ್ರದೇಶದ ೨೦ ಪ್ರತಿಶತದಷ್ಟು ಇದೆ.ರಾಜ್ಯದೆಲ್ಲೆಡೇ ವಿಸ್ತೃತವಾದ ಧಾರ್ಮಿಕ ರಕ್ಷಣೆಗೆ ಒಳಪಟ್ಟಿರುವ ಬಾನೆಟ್ ಮಕಾಕ್/ಮಂಗವನ್ನು ಹೊರತುಪಡಿಸಿ, ಅದಕ್ಕಿಂತ ದೊಡ್ಡ ಸಸ್ತನಿಗಳು ಬಹುತೇಕವಾಗಿ ಅರಣ್ಯ ಪ್ರದೇಶಗಳಿಗೆ ಸೀಮಿತವಾಗಿವೆ. ವನ್ಯಮೃಗಗಳನ್ನು ಹೊತ್ತ ಅರಣ್ಯ ಪ್ರದೇಶಗಳನ್ನು ಕರ್ನಾಟಕದಲ್ಲಿ ಆರು ವಲಯಗಳಾಗಿ ವಿಂಗಡಿಸಲಾಗಿದೆ; ಅವುಗಳೆಂದರೆ, ಕರಾವಳಿ ಪ್ರದೇಶ, ಪಶ್ಚಿಮ ಘಟ್ಟಗಳ ಶಿಖರರೇಖೆ, ಮಲೆನಾಡು, ಹಳೇ ಮೈಸೂರು ಪ್ರಸ್ಥಭೂಮಿ, ಕೊಳ್ಳೇಗಾಲದ ಬೆಟ್ಟಗಳು ಹಾಗೂ ಮೈದಾನ. ಪ್ರಾಣಿಗಳ ನೈಸರ್ಗಿಕ ಹಂಚಿಕೆಯು ಬಹುತೇಕವಾಗಿ ಸಸ್ಯಸಂಪತ್ತಿನಿಂದ ನಿರ್ಧರಿಸಲ್ಪಡುತ್ತದೆ.

**ಪ್ರದೇಶ ೧–ಕರಾವಳಿ ಪ್ರದೇಶ:** ಉತ್ತರ ಕನ್ನಡ ಜಿಲ್ಲೆ ಹಾಗೂ ಬೆಳಗಾವಿಯ ಕೆಲವು ಭಾಗಗಳು ಕರ್ನಾಟಕದ ಅತ್ಯಂತ ಉತ್ತರವಲಯದ ತುದಿಯ ಗುಡ್ಡಗಾಡು ಪ್ರದೇಶವನ್ನು ಒಳಗೊಂಡಿವೆ. ಈ ಗುಡ್ಡಗಾಡು ಪ್ರದೇಶಗಳಲ್ಲಿ ನಿತ್ಯಹರಿದ್ವರ್ಣದಿಂದ ಒಣ ಉದುರೆಲೆಯ ರೀತಿಯ ಸಸ್ಯಸಂಪತ್ತನ್ನು ಕಾಣಬಹುದು. ಕಾಳಿ ನದಿ ಜಲವಿದ್ಯುತ್ ಯೋಜನೆ ಹಾಗೂ ಬಹಳಷ್ಟು ಕಬ್ಬಿಣ ಹಾಗೂ

ಮ್ಯಾಂಗನೀಸ್ ಅದಿರಿನ ಗಣಿಗಾರಿಕೆಯಿಂದಾಗಿ, ಈ ಆವಾಸಸ್ಥಾನವು ಅತ್ಯಧಿಕವಾಗಿ ಛಿದ್ರಗೊಂಡಿದ್ದು, ಅರಣ್ಯದ ಹರವು ಬಹಳಷ್ಟು ಮಾಯವಾಗಿದೆ.ಈ ಪ್ರದೇಶದಲ್ಲಿ, ಕಾಡೆಮ್ಮೆ (ಗೌರ್) ಚದುರಿದಂತೆ ಇದ್ದು, ಸಾಂಬಾರ್ ಜಿಂಕೆ ಹೆಚ್ಚು ವಿಸ್ತೃತವಾಗಿ ಹಂಚಿಕೆಯಾಗಿದೆ. ವಿಸ್ತೃತ ಪ್ರದೇಶದಲ್ಲಿ ಆನೆಗಳಿವೆ. ಮಾಂಸಾಹಾರಿಗಳಾದ ಹುಲಿ, ಕಪ್ಪು ಚಿರತೆ  ಹಾಗೂ ಕಾಡು ನಾಯಿಗಳು ಈಗ ವಿರಳವಾಗಿವೆ. ಹಿಂದೊಮ್ಮೆ, ಈ ಪ್ರದೇಶವು ವನ್ಯಜೀವಿಗಳಿಂದ, ಅದರಲ್ಲೂ ಹುಲಿ ಹಾಗೂ ಕಾಡೆಮ್ಮೆಗಳಿಂದ ಸಂಪದ್ಭರಿತವಾಗಿತ್ತು.

**ಪ್ರದೇಶ ೨ – ಪಶ್ಚಿಮ ಘಟ್ಟಗಳ ಶಿಖರ:** ಈ ಪ್ರದೇಶವು ಉತ್ತರ ಕನ್ನಡದ ದಕ್ಷಿಣ ಭಾಗದಲ್ಲಿದೆ. ಘಟ್ಟಗಳ ಈ ಶಿಖರ ಕೆಳಸ್ಥರದಲ್ಲಿ ಕಿರಿದಾದ ಅರಣ್ಯದ ಪಟ್ಟಿ ಇದೆ. ನಿತ್ಯಹರಿದ್ವರ್ಣದಿಂದ ತೇವಯುಕ್ತ ಉದುರೆಲೆಯ ಸಸ್ಯಸಂಪತ್ತಿನ ವೈವಿಧ್ಯತೆಯನ್ನು ಇಲ್ಲಿ ನೋಡಬಹುದು. ಪ್ರಮುಖ ಪ್ರಾಣಿಗಳ ಪೈಕಿ ಅನೇಕ ಪ್ರಾಣಿ ಸಂಕುಲ ಈ ಪ್ರದೇಶದಲ್ಲಿ ನೋಡಬಹುದು, ಆದರೆ ಅವುಗಳ ಸಂಖ್ಯೆಯು ಕಡಿಮೆಯಿದೆ. ಆನೆಗಳ ಪ್ರತ್ಯೇಕೀಕೃತ ಕೆಲವೇ ದಂಡುಗಳನ್ನು ಇಲ್ಲಿ ನೋಡಬಹುದು.ಕಾಡೆಮ್ಮೆ ಹಾಗೂ ಸಾಂಬಾರ್ ಜಿಂಕೆಗಳನ್ನು ಆಗಾಗ ನೋಡಬಹುದಾದರೆ, ಚುಕ್ಕೆಯಿರುವ ಜಿಂಕೆಯು ಆಗೊಮ್ಮೆ, ಈಗೊಮ್ಮೆ ಕಾಣಿಸಿಕೊಳ್ಳುತ್ತದೆ. ಊಳಿಡುವ ಜಿಂಕೆ ಹಾಗೂ ಕರಡಿಗಳೂ ಇವೆಯೆಂದು ವರದಿ ಮಾಡಲಾಗಿದ್ದು ಕಾಡು ಹಂದಿಯನ್ನು ಎಲ್ಲೆಡೆಯೂ ಕಾಣಬಹುದು. ಮಾಂಸಾಹಾರಿಗಳಾದ ಹುಲಿ, ಕರಿಚಿರತೆ ಹಾಗೂ ಕಾಡುನಾಯಿ ವಿರಳ. ಈ ಪ್ರದೇಶವು ಬಹುತೇಕ ದೊಡ್ಡ ಸಸ್ಯಾಹಾರಿಗಳಿಗೆ ಒಳ್ಳೆಯ ವಾಸಸ್ಥಾನವಲ್ಲ; ಹಾಗೆ ಮಾಂಸಾಹಾರಿ ಪ್ರಾಣಿಗಳಿಗೂ ಸಹ.

**ಪ್ರದೇಶ ೩ – ಮಲೆನಾಡು:** ಈ ಪ್ರದೇಶವು ಒಣ ಹಾಗೂ ತೇವಯುಕ್ತ ಪತನಶೀಲ/ ಉದುರೆಲೆಯ ಸಸ್ಯಸಂಪತ್ತನ್ನು ಪಡೆದಿದೆ. ಬಾಬಾಬುಡನ್‌ಗಿರಿ ಶ್ರೇಣಿಯಂತಹ ಸ್ಪಷ್ಟವಾಗಿ ಗೋಚರವಾಗುವ ಬೆಟ್ಟಗಳಿಂದ ಪ್ರದೇಶವನ್ನು ಗುರುತಿಸಬಹುದು. ಈ ಪ್ರದೇಶದಲ್ಲಿ, ರಾಜ್ಯದ ಮೈಸೂರು ಪ್ರಸ್ಥಭೂಮಿಯ ನಂತರ, ಉತ್ತಮ ವನ್ಯಜೀವಿಗಳ ದಟ್ಟಣಿಯೂ ಸಂಬಂಧಿಸಿದಂತೆ ಎರಡನೆಯ ಸ್ಥಾನದಲ್ಲಿದೆ. ಆನೆಗಳು, ಗೌರ್/ ಕಾಡೆಮ್ಮೆ, ಸಾಂಬಾರ್ ಜಿಂಕೆ, ಚುಕ್ಕೆ ಜಿಂಕೆ, ಕಾಡು ಹಂದಿ ಮುಂತಾದ ಪ್ರಾಣಿಗಳನ್ನು ಹೊಂದಿದೆ. ಈ ಪ್ರದೇಶದ ಮೇಲಿನ ಮಾನವಜನ್ಯ ಒತ್ತಡಗಳು ಬಹಳಷ್ಟು ಕಡಿಮೆ ಇರುವುದರಿಂದ, ವನ್ಯಜೀವಿಗಳ ಮೇಲೆ ಅಷ್ಟಾಗಿ ಆಕ್ರಮಣ ನಡೆದಿಲ್ಲ. ಸಾರ್ವಕಾಲಿಕ ನದಿಗಳು, ಅಣೆಕಟ್ಟುಗಳು ಹಾಗೂ ಯಥೇಚ್ಛವಾದ ಬಿದಿರು, ಹುಲ್ಲು ಹಾಗೂ ಇತರ ಮೇವಿನ ತಳಿಗಳ ಅಸ್ತಿತ್ವ, ಜೊತೆಗೆ ಹದವಾದ ಮಳೆ ಇವೆಲ್ಲವೂ ಈ ಪ್ರದೇಶವನ್ನು ಆನೆಗಳಿಗೆ ಅತ್ಯಂತ ಸೂಕ್ತ ಆವಾಸಸ್ಥಾನವನ್ನಾಗಿ ಮಾಡಿದೆ.



ಬಲಾಢ್ಯತೆಯ ಪ್ರದರ್ಶನ

**ಪ್ರದೇಶ ೪ – ಮೈಸೂರು ಪ್ರಸ್ಥಭೂಮಿ:** ಮೈಸೂರು ಪ್ರಸ್ಥಭೂಮಿಯ ಪಶ್ಚಿಮ ಅಂಚು ಮೂರು ಕಡೆಗಳಲ್ಲಿ ಸಹ್ಯಾದ್ರಿಯ ಅತ್ಯಂತ ದಕ್ಷಿಣದ ಶ್ರೇಣಿಗಳು, ನೀಲಗಿರಿ ಬೆಟ್ಟಗಳು ಹಾಗೂ ಬಿಳಿಗಿರಿರಂಗನ ಬೆಟ್ಟಗಳತ್ತ ಬೆಟ್ಟಗಳ ಪೂರ್ವ ಚಾಚನ್ನು ಹೊಂದಿದ, ಉಬ್ಬುತಗ್ಗುಗಳ ಮೈದಾನ ಪ್ರದೇಶವಾಗಿದ್ದು, ತೇವಯುಕ್ತ ಹಾಗೂ ಒಣ ಉದುರೆಲೆಯ ಅರಣ್ಯಗಳಿಂದ ಮುಚ್ಚಲ್ಪಟ್ಟಿದೆ. ದಕ್ಷಿಣ ಭಾರತದಲ್ಲೇ ಅತ್ಯಧಿಕ ಸಂಖ್ಯೆಯನ್ನು ವನ್ಯಜೀವಿಗಳ ಈ ಪ್ರದೇಶವು ಹೊಂದಿದೆ. ಆನೆಗಳ ದೊಡ್ಡ ಹಿಂಡುಗಳು, ಚುಕ್ಕೆ ಜಿಂಕೆ, ಕಾಡು ಹಂದಿ, ಕರಡಿ, ಕಾಡೆಮ್ಮೆ, ಸಾಂಬಾರ್ ಜಿಂಕೆ ಹಾಗೂ ಒಮ್ಮೊಮ್ಮೆ ಹುಲಿ ಹಾಗೂ ಬೆಕ್ಕುಗಳನ್ನು ಇಲ್ಲಿ ನೋಡಬಹುದು.

**ಪ್ರದೇಶ ೫ – ಕೊಳ್ಳೇಗಾಲದ ಬೆಟ್ಟಗಳು:** ಈ ಗುಡ್ಡಗಾಡು ಪ್ರದೇಶವು ಪಶ್ಚಿಮ ಘಟ್ಟಗಳ ಪೂರ್ವ ಚಾಚಿನಲ್ಲಿದೆ.ಈ ಬೆಟ್ಟಗಳಲ್ಲಿ, ತೇವಯುಕ್ತ ಉದುರೆಲೆಯ ಅಥವಾ ಅರೆ–ನಿತ್ಯಹರಿದ್ವರ್ಣ ಕಾಡುಗಳಲ್ಲದೆ ಬಹುಪಾಲು ಪೊದೆಗಳಾಗಿ ಅವನತಿ ಹೊಂದಿದ ಒಣ  ಉದುರೆಲೆಯ ಅರಣ್ಯಗಳಿಂದ ಬೆಟ್ಟದ ಮಿಕ್ಕ ಭಾಗಗಳು ಆವೃತವಾಗಿವೆ. ಕಾಡು ನಾಯಿಗಳನ್ನು ಬಹುತೇಕ ಎಲ್ಲ ಕಡೆಯೂ ಕಾಣಬಹುದು, ಆದರೆ ಹುಲಿ, ಕಾಡೆಮ್ಮೆ ಹಾಗೂ ಕಪ್ಪು ಚಿರತೆಗಳ ಅಸ್ತಿತ್ವವು ಸೀಮಿತವಾಗಿದೆ. ಆನೆಗಳನ್ನು ಹೊರತುಪಡಿಸಿ, ಸುಮಾರು ಮಿಕ್ಕೆಲ್ಲ ವನ್ಯಜೀವಿಗಳ ತಳಿಗಳೂ ಈ ಪ್ರದೇಶದಲ್ಲಿವೆ.

**ಪ್ರದೇಶ ೬ – ಮೈದಾನ:** ಡೆಕ್ಕನ್ ಪ್ರಸ್ಥಭೂಮಿಯ ಮೈದಾನ ಪ್ರದೇಶಗಳಲ್ಲಿ ಅತ್ಯಂತ ಕಡಿಮೆ ಅರಣ್ಯವಿದ್ದು, ಉಳಿದಿರುವುದೂ ಸಹ ಅತ್ಯಧಿಕ ಅವನತಿಯ ಪರಿಸ್ಥಿತಿಯಲ್ಲಿದೆ. ಮೃಗಗಳ ದೊಡ್ಡ ಹಿಂಡುಗಳ ಆವಾಸಸ್ಥಾನವಾಗಿ ರಾಣಿಬೆನ್ನೂರು ಹೆಸರುವಾಸಿಯಾಗಿದೆ.ತೋಳಗಳು ಅಪರೂಪವಾಗಿವೆ, ಆದರೆ ಮೈದಾನದ ವಿವಿಧ ಸ್ಥಳಗಳಿಂದ ಅವು ಗೋಚರವಾಗಿರುವುದು ವರದಿಯಾಗಿದೆ.



***ಕರ್ನಾಟಕದ ಶ್ರೀಮಂತ ಪ್ರಾಣಿ ಸಂಕುಲ***






# ಜನ ಸಂಖ್ಯಾಶಾಸ್ತ್ರ

## ಜನಸಂಖ್ಯೆ

೨೦೧೧ರ ಜನಗಣತಿಯ ಪ್ರಕಾರ, ಕರ್ನಾಟಕವು ೧,೯೧,೭೯೧ ಚ.ಕಿ.ಮೀ.ಗಳ ಪ್ರದೇಶವನ್ನು ಹೊಂದಿದ್ದು, ೩,೧೦,೫೭,೭೪೨ ಪುರುಷರು ಹಾಗೂ ೩,೦೦,೭೨,೯೬೨ ಮಹಿಳೆಯರು ಹಾಗೂ ಒಟ್ಟಾರೆ ೬,೧೧,೩೦,೭೦೪ ಜನಸಂಖ್ಯೆಯನ್ನು ಪಡೆದಿದೆ.ಪ್ರದೇಶ ಹಾಗೂ ಜನಸಂಖ್ಯೆಗಳೆರಡಕ್ಕೂ ಸಂಬಂಧಿಸಿದಂತೆ, ಸಂಯುಕ್ತ ಭಾರತದ ೨೮ ರಾಜ್ಯಗಳ ಹಾಗೂ ಏಳು ಕೇಂದ್ರಾಡಳಿತ ಪ್ರದೇಶಗಳ ಪೈಕಿ, ಅದು ೯ನೆಯ ಸ್ಥಾನದಲ್ಲಿದೆ.ದೇಶದ ಜನಸಂಖ್ಯೆಯಲ್ಲಿ, ಕರ್ನಾಟಕವು ೫.೧ ಪ್ರತಿಶತದಷ್ಟು ಪಾಲು ಹೊಂದಿದೆ.

### ಜನಸಂಖ್ಯಾ ಸಾಂದ್ರತೆ

ಪ್ರತಿ ಚದರ ಕಿಲೋಮೀಟರ್‌ಗೂ ಇರುವ ಜನರ ಸಂಖ್ಯೆಯನ್ನು ಜನಸಂಖ್ಯಾ ಸಾಂದ್ರತೆ ಎಂದು ಕರೆಯುತ್ತಾರೆ. ೧೯೯೧ರಲ್ಲಿ ರಾಜ್ಯದ ಜನಸಂಖ್ಯಾ ಸಾಂದ್ರತೆಯು ೨೩೫ ಆಗಿದ್ದು, ಇದು ದೇಶದಲ್ಲಿದ್ದ ಪ್ರಮಾಣಕ್ಕಿಂತ ೨೬೭ ಕಡಿಮೆಯಾಗಿದೆ. ದೇಶದ ೩೫ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ, ಜನಗಣತಿ ೧೯೯೧ ಹಾಗೂ ೨೦೦೧ರ ಪ್ರಕಾರ, ಜನಸಂಖ್ಯಾ ಸಾಂದ್ರತೆಯಲ್ಲಿ ಕರ್ನಾಟಕವು ೨೦ನೆಯ ಸ್ಥಾನದಲ್ಲಿದೆ. ೨೦೧೧ರ ಪ್ರಕಾರ ರಾಜ್ಯದ ಜನಸಾಂದ್ರತ ಪ್ರಮಾಣವು ೩೧೯ ಆಗಿತ್ತು.



### ಸ್ತ್ರೀ– ಪುರುಷ ಪ್ರಮಾಣ

ನಿರ್ದಿಷ್ಟ ಪ್ರದೇಶವೊಂದರಲ್ಲಿ, ಪ್ರತಿ ೧,೦೦೦ ಪುರುಷರ ಸಂಖ್ಯೆಗೆ ಇರುವ ಮಹಿಳೆಯರ ಸಂಖ್ಯೆಯು ಲಿಂಗ ಪ್ರಮಾಣ ಎಂದು ವಿಷದೀಕರಿಸಲಾಗಿದೆ.ಭಾರತೀಯ ಸರಾಸರಿಗಿಂತ ಕರ್ನಾಟಕದ ಲಿಂಗ ಪ್ರಮಾಣವು ಅಷ್ಟೇನೂ ವ್ಯತ್ಯಾಸ ಕಾಣುವುದಿಲ್ಲ.೨೦೦೧ರಲ್ಲಿ ಜನಸಂಖ್ಯೆಯ ಲಿಂಗ ಪ್ರಮಾಣವು ೯೬೫ ಆಗಿತ್ತು. ೨೦೧೧ರಲ್ಲಿ ೯೮೬ ಆಗಿತ್ತು.

## ಜನಾಂಗೀಯ ವೈವಿಧ್ಯತೆ

ಭೌಗೋಳಿಕವಾಗಿ, ಕರ್ನಾಟಕವು ಡೆಕ್ಕನ್ ಪ್ರಸ್ಥಭೂಮಿಯ ಮಧ್ಯ ಸಮತಟ್ಟು ಪ್ರದೇಶದಲ್ಲಿದೆ.ಕೆಲವೊಮ್ಮೆ, ಅದನ್ನು, ವಿವಿಧ ಕುಲ ಪ್ರವೃತ್ತಿ ಗಳನ್ನು ಹೊಂದಿದ ಜನರು ಕಾಣುವ ಮಾನವ ಚರಿತ್ರೆಯ ಸಂಗ್ರಹಾಲಯದಂತೆ ಇದೆ ಎಂದು ಪರಿಗ್ರಹಿಸಲಾಗಿದೆ. ಕುಲ ಹಾಗೂ ಜನಾಂಗೀಯ ರಚನೆಯ ರೂಪರೇಷೆ ಹಾಗೂ ವೈವಿಧ್ಯತೆಯು, ಭಾಗಶಃ ಅಖಂಡ ಭಾರತದ ಕುಲೀನ ಜಾಲ ದ ಪರಿಣಾಮದಿಂದ ಕರ್ನಾಟಕವು ಮೂಲಭೂತವಾಗಿ ಉಂಟಾಗಿದೆ.

ದಕ್ಷಿಣ ಭಾರತದಲ್ಲಿ ಜನಾಂಗೀಯ ವೈವಿಧ್ಯತಾ ಶ್ರೇಣಿ ಹಾಗೂ ಹರವು ನಿಖರವಾಗಿ ಗೋಚರವಾಗುವುದಿಲ್ಲ. ನಂತರದ ವಲಸೆ ಹೋಗುವಿಕೆಯು ದಕ್ಷಿಣದ ಒಳಭಾಗವನ್ನು ಹೊಕ್ಕಿಲ, ಹಾಗಾಗಿ ಅಷ್ಟಾಗಿ ಪ್ರಭಾವ ಬೀರಲಿಲ್ಲ.ಆದ್ದರಿಂದ, ಈ ಪ್ರದೇಶದ ಜನಾಂಗೀಯ ರಚನೆಯು ನಿಗ್ರಿಟೊ ಕುಲೀನ ಅಂಶಗಳ ಪ್ರಾಥಮಿಕ ಅಂತಸ್ಸರಣಗಳ ನಂತರ ಪ್ರೊಟೊ–ಆಸ್ಟ್ರಲಾಯಿಡ್‌ಗಳಿಂದ ಪಡೆದುಕೊಳ್ಳಲಾಗಿದೆ; ಇತ್ತೀಚಿನ ಕಾಕಸಾಯಿಡ್ ಅಂಶಗಳು ಸಾಮಾನ್ಯವಾಗಿ ಅಷ್ಟಾಗಿ ಪರಿಣಾಮ ಬೀರಿಲ್ಲ ಹಾಗೂ ಪೂರ್ವ ಮಂಗಲಾಯಿಡ್ ಕುಲೀನ ಅಂಶಗಳ ಪ್ರಭಾವವು ಇಲ್ಲವೇ ಇಲ್ಲವೆನ್ನಬಹುದು. ಪರಿಶುದ್ಧ ನಿಗ್ರಿಟೊ ಅಂಶವು ಒಟ್ಟಾಗಿ ಮಾಯವಾಗಿದ್ದು, ಕೆಲವು ಕಾಡಿನ ಪಂಗಡಗಳಲ್ಲಿ ಅಲ್ಲಿ–ಇಲ್ಲಿ ಕಾಣಿಸಿಕೊಂಡಿದೆ. ಕೇರಳದ ಕೊಚ್ಚಿ ಹಾಗೂ ವೈನಾಡು ಹಾಗೂ ತಮಿಳುನಾಡಿನ ಕಾಡರ್, ಪಾಲಯನ್ ಹಾಗೂ ಇರುಳ ಪಂಗಡಗಳಲ್ಲಿ/ಬುಡಕಟ್ಟು ಜನಾಂಗಗಳಲ್ಲಿ ನೆಗ್ರಿಟೋ ಅಂಶದ ಕುರುಹುಗಳು ಕಾಣುತ್ತವೆ. ಭಾರತ ಹಾಗೂ ಆಗ್ನೇಯ ಏಶಿಯಾದ ಎಲ್ಲ ಆಸ್ಟ್ರೆಲಾಯಿಡ್ ಕುಲಗಳ ಪೂರ್ವಜರ ಸಂತತಿಯ ಪಡಿಯಚ್ಚಾದ ಪೇಲಿಯೋ–ಮೆಡಿಟರೇನಿಯನ್ ಕುಲವು, ನಿಗ್ರಿಟೋ ಅಂಶವನ್ನು ನಿಕಟವಾಗಿ ಹೋಲುತ್ತದೆ.

ತನ್ನ ಜನಾಂಗೀಯ ರಚನೆ, ಸಮಾಜದ ಕುಲದ ಪಿತೃತ್ವ ನಿರ್ಣಯ ಹಾಗೂ ರಚನೆಯಲ್ಲಿ ಕರ್ನಾಟಕ ರಾಜ್ಯವು ದಕ್ಷಿಣ ಭಾರತದ ನೆರೆ ರಾಜ್ಯಗಳೊಂದಿಗೆ ಏಕರೀತಿಯ ಹಾಗೂ ಒಮ್ಮತೀಯ ಚಿತ್ರವನ್ನು ಪ್ರಸ್ತುತಪಡಿಸುತ್ತದೆ.ವಿಸ್ತೃತ ಶ್ರೇಣಿಯ ವ್ಯತ್ಯಾಸಗಳಲ್ಲಿ ವಿವಿಧ ಕುಲೀನ ಅಂಶಗಳ ಮಿಶ್ರಿತ ಬಣ್ಣದಿಂದ, ಈ ರಾಜ್ಯದ ಜನರನ್ನು ಗುರುತಿಸಬಹುದಾಗಿದೆ. ಸಾಮಾನ್ಯವಾಗಿ ಅವರು ಗಿಡ್ಡ ಮೈಕಟ್ಟಿನಿಂದ ಮಧ್ಯಮ ಮೈಕಟ್ಟಿನ, ಗಾಢ ಮೈಬಣ್ಣದ, ಮಧ್ಯಮದಿಂದ ಕಡು ಕಂದು ಬಣ್ಣದ, ಡೊಲಿಕೊಸೆಫ಼ಾಲಿಕ್‌ಗಳು (ಉದ್ದ ತಲೆಯುಳ್ಳವರು) ಆಗಿರುತ್ತಾರೆ.ಬ್ರಾಕಿಸೆಫ಼ಾಲಿಕ್ ಗಳನ್ನು (ವಿಶಾಲವಾದ ತಲೆ) ಪಶ್ಚಿಮ ಕರಾವಳಿ ಹಾಗೂ ಕೊಡಗಿನಲ್ಲಿ ಕಾಣಬಹುದಾಗಿದ್ದು ಅವರು ಮೀಸೊರೈನಿಯನ್ನು ಪ್ರದರ್ಶಿಸುತ್ತಾರೆ: ಅಂದರೆ, ಮೂಗಿನ ಅಡಿಯಲ್ಲಿ ಗುಳಿ ಇರುವ ಮಧ್ಯಮವಾಗಿ ಉದ್ದನೆಯ ಮೂಗುಗಳು ಹಾಗೂ ಅಷ್ಟಾಗಿ ಅಗಲವಾಗಿರದ ಮೂಗಿನ ಹೊಳ್ಳೆಗಳು. ಸಾಮಾನ್ಯವಾಗಿ ಮೈ ಮೇಲಿನ ಕೂದಲುಗಳು ಅಧಿಕವಾಗಿದ್ದು, ಅದು ಸುರಳಿಯಾಗುವ ಸಂಭವ ಹೊಂದಿರುತ್ತದೆ.

ಕರ್ನಾಟಕದ ಬುಡಕಟ್ಟು ಜನಾಂಗದವರು ಈ ರಾಜ್ಯದ ಪುರಾತನಕಾಲದ ನಿವಾಸಿಗಳು. ಅವರು ಬಹುತೇಕವಾಗಿ ಗಿಡ್ಡದಾದ ಮೈಕಟ್ಟು, ಗಿಡ್ಡ ಮೂಗುಗಳುಳ್ಳ ಉದ್ದ ತಲೆಯ (ಡೊಲಿಕೊಸೆಫ಼ಲ್) ಹಾಗೂ ಸಾಮಾನ್ಯವಾಗಿ ಅಗಲವಾದ ಮೂಗಿನ ಹೊಳ್ಳೆಗಳುಳ್ಳವರಾಗಿರುತ್ತಾರೆ. ವಿವಿಧ ವಿದ್ವಾಂಸರು, ಅವರನ್ನು ವೆಡ್ಡಾಯಿಡ್, ಪ್ರೊಟೊ–ಆಸ್ಟ್ರಲಾಯಿಡ್‌ಗಳೆಂದು ವಿವಿಧ ರೀತಿಯಲ್ಲಿ

# CENSUS OF INDIA 2011


# PROVISIONAL POPULATION TOTALS - KARNATAKA - DATA SHEET

## Population share of States and Union Territories, India: 2011

- Uttar Pradesh is the most populous State with almost 200 million people, which is more than the population of Brazil.
- The combined population of Uttar Pradesh and Maharashtra the second most populous State, at 312 million, is substantially greater than the population of USA.
- Three fifth of India's population live in any of the seven States:


| | |
|---|---|
| Uttar Pradesh | 199.6 million |
| Maharashtra | 112.4 million |
| Bihar | 103.8 million |
| West Bengal | 91.3 million |
| Andhra Pradesh | 84.7 million |
| Madhya Pradesh | 72.6 million |
| Tamil Nadu | 72.1 million |

- The least populous State is Sikkim.
- Among the Union Territories, NCT of Delhi is the most populous.




## Population share of Districts, Karnataka: 2011

- Bangalore district with a share of 15.69 percent is the most populous district.
- Belgaum, Mysore, Tumkur, Gulbarga and Bellary districts together constitute one fourth of State's population.
- Kodagu district is the least populous district with the share of 0.55 percent.



## Population (in millions), Karnataka: 1901-2011

- Population since 1901 steadily increased from 13.05 to 61.13 million in 2011.
- Population increased by 82,80,142 in terms of absolute number during the decade 2001 - 2011.
- Out of 82,80,142 population increase over the decade, Bangalore district's share alone is 30,51,756.
- Population in Chikmagalur district decreased by 3,153 during the decade 2001 - 2011.




| District Code | State / Districts | Total Population | Males | Females | Percentage Decadal Growth 2001-2011 | Sex ratio | Density ( persons per sq.km. ) | Child Population 0-6 Years | Child Sex Ratio (0-6 Years) | Literacy rate | | |
|---|---|---|---|---|---|---|---|---|---|---|---|---|
| | | | | | | | | | | Persons | Males | Females |
| | **KARNATAKA** | **6,11,30,704** | **3,10,57,742** | **3,00,72,962** | **15.67** | **968** | **319** | **68,55,801** | **943** | **75.60** | **82.85** | **68.13** |
| 01 | BELGAUM | 47,78,439 | 24,27,104 | 23,51,335 | 13.38 | 969 | 356 | 6,05,524 | 931 | 73.94 | 82.90 | 64.74 |
| 02 | BAGALKOT | 18,90,826 | 9,52,902 | 9,37,924 | 14.46 | 984 | 288 | 2,63,781 | 929 | 69.39 | 80.16 | 58.55 |
| 03 | BIJAPUR | 21,75,102 | 11,12,953 | 10,62,149 | 20.38 | 954 | 207 | 3,03,488 | 930 | 67.20 | 77.41 | 56.54 |
| 04 | BIDAR | 17,00,018 | 8,70,850 | 8,29,168 | 13.16 | 952 | 312 | 2,16,885 | 935 | 71.01 | 79.94 | 61.66 |
| 05 | RAICHUR | 19,24,773 | 9,66,493 | 9,58,280 | 15.27 | 992 | 228 | 2,72,703 | 949 | 60.46 | 71.35 | 49.56 |
| 06 | KOPPAL | 13,91,292 | 7,01,479 | 6,89,813 | 16.32 | 983 | 250 | 1,94,199 | 953 | 67.28 | 78.21 | 56.22 |
| 07 | GADAG | 10,65,235 | 5,38,477 | 5,26,758 | 9.61 | 978 | 229 | 1,27,259 | 944 | 75.18 | 84.89 | 65.29 |
| 08 | DHARWAD | 18,46,993 | 9,39,127 | 9,07,866 | 15.13 | 967 | 434 | 2,10,194 | 942 | 80.30 | 86.83 | 73.57 |
| 09 | UTTARA KANNADA | 14,36,847 | 7,27,424 | 7,09,423 | 6.15 | 975 | 140 | 1,46,457 | 947 | 84.03 | 89.72 | 78.21 |
| 10 | HAVERI | 15,98,506 | 8,19,295 | 7,79,211 | 11.08 | 951 | 331 | 1,87,754 | 945 | 77.60 | 84.22 | 70.65 |
| 11 | BELLARY | 25,32,383 | 12,80,402 | 12,51,981 | 24.92 | 978 | 300 | 3,41,804 | 954 | 67.85 | 77.24 | 58.28 |
| 12 | CHITRADURGA | 16,60,378 | 8,43,411 | 8,16,967 | 9.39 | 969 | 197 | 1,77,786 | 933 | 73.82 | 81.37 | 66.05 |
| 13 | DAVANAGERE | 19,46,905 | 9,89,602 | 9,57,303 | 8.71 | 967 | 329 | 2,06,935 | 931 | 76.30 | 83.02 | 69.39 |
| 14 | SHIMOGA | 17,55,512 | 8,79,817 | 8,75,695 | 6.88 | 995 | 207 | 1,76,904 | 960 | 80.50 | 86.11 | 74.89 |
| 15 | UDUPI | 11,77,908 | 5,62,896 | 6,15,012 | 5.90 | 1,093 | 304 | 1,00,579 | 955 | 86.29 | 91.69 | 81.41 |
| 16 | CHIKMAGALUR | 11,37,753 | 5,67,483 | 5,70,270 | -0.28 | 1,005 | 158 | 1,00,791 | 963 | 79.24 | 85.66 | 72.88 |
| 17 | TUMKUR | 26,81,449 | 13,54,770 | 13,26,679 | 3.74 | 979 | 253 | 2,52,307 | 952 | 74.32 | 82.05 | 66.45 |
| 18 | BANGALORE | 95,88,910 | 50,25,498 | 45,63,412 | 46.68 | 908 | 4,378 | 9,88,482 | 941 | 88.48 | 91.82 | 84.80 |
| 19 | MANDYA | 18,08,680 | 9,09,441 | 8,99,239 | 2.55 | 989 | 365 | 1,62,147 | 934 | 70.14 | 78.14 | 62.10 |
| 20 | HASSAN | 17,76,221 | 8,85,807 | 8,90,414 | 3.17 | 1,005 | 261 | 1,55,579 | 964 | 75.89 | 83.55 | 68.30 |
| 21 | DAKSHINA KANNADA | 20,83,625 | 10,32,577 | 10,51,048 | 9.80 | 1,018 | 457 | 2,02,670 | 946 | 88.62 | 93.31 | 84.04 |
| 22 | KODAGU | 5,54,762 | 2,74,725 | 2,80,037 | 1.13 | 1,019 | 135 | 52,697 | 977 | 82.52 | 87.24 | 77.91 |
| 23 | MYSORE | 29,94,744 | 15,11,206 | 14,83,538 | 13.39 | 982 | 437 | 2,85,956 | 956 | 72.56 | 78.44 | 66.59 |
| 24 | CHAMARAJANAGAR | 10,20,962 | 5,13,359 | 5,07,603 | 5.75 | 989 | 200 | 94,859 | 942 | 61.12 | 67.88 | 54.32 |
| 25 | GULBARGA | 25,64,892 | 13,07,061 | 12,57,831 | 17.94 | 962 | 233 | 3,52,162 | 935 | 65.65 | 75.11 | 55.87 |
| 26 | YADGIR | 11,72,985 | 5,91,104 | 5,81,881 | 22.67 | 984 | 224 | 1,85,727 | 942 | 52.36 | 63.33 | 41.31 |
| 27 | KOLAR | 15,40,231 | 7,79,401 | 7,60,830 | 11.04 | 976 | 384 | 1,61,877 | 955 | 74.33 | 81.94 | 66.56 |
| 28 | CHIKKABALLAPURA | 12,54,377 | 6,37,504 | 6,16,873 | 9.17 | 968 | 298 | 1,24,719 | 945 | 70.08 | 78.36 | 61.55 |
| 29 | BANGALORE RURAL | 9,87,257 | 5,07,514 | 4,79,743 | 16.02 | 945 | 441 | 1,02,019 | 947 | 78.29 | 85.44 | 70.73 |
| 30 | RAMANAGARA | 10,82,739 | 5,48,060 | 5,34,679 | 5.06 | 976 | 303 | 1,01,565 | 960 | 69.20 | 76.92 | 61.30 |

Note: For Census 2011, the population of "Others" has been clubbed with the "Males" for working out population, 0-6 population, literates and related rates and ratios.

Source: Series - 30, Karnataka, Provisional Population Totals, Paper-I of 2011.


## Karnataka : Area and Population 2011 (Districts)

- Density of population of the state was 68 persons per Sq. Km. in 1901, increased steadily to reach 319 persons per Sq. Km. in 2011.
- Bangalore district including the city limits of Bruhat Bangalore Mahanagara Palike is the most densely populated district with 4,378 persons per Sq. Km., showing an increase of 1,393 persons during the decade alone.
- Kodagu district is the least populous district and also ranks last in terms of density of population with 135 persons per Sq. Km.




## Population growth rate of Karnataka 1961-1971 to 2001-2011

- Population growth rate of the State declined to 15.67 percent from 24.22 percent in 1961 - 71.
- From 43.05 percent growth in 1951 - 61, Chikmagalur district registered negative growth rate of - 0.28 percent during 2001 - 2011.
- Bangalore district which includes Bruhat Bangalore Mahanagara Palike witnessed an increase of 11.39 percent growth than recorded in 1991 - 2001.
- Growth rate of Child population (0-6) declined by 4.34 percent during the decade 2001 - 2011.




## Child sex ratio 0-6 years and overall sex ratio, Karnataka: 1961-2011

- Child sex ratio of the state continued to decline at faster pace since 1981 and stands at 943 in 2011.
- Perceptible decline in child sex ratio is witnessed in Chamarajanagar, Davanagere, Raichur, Chitradurga and Haveri districts.
- Sharp decline is seen in overall sex ratio in Udupi district, however, it still maintains favourable sex ratio of 1,093.
- Bangalore district has the lowest overall sex ratio of 908 since 1961.



## Literacy rates by gender and male-female gap in literacy rates, Karnataka: 1961-2011

- Literacy rate for the State is 75.6 percent.
- Females outnumber males in terms of absolute increase in number of literates.
- The gender gap in literacy rate has narrowed down to 14.72 percent in 2011 from 22 percent in 1961.
- Dakshina Kannada and Bangalore district rank first in respect of male and female literacy rate respectively.




**Directorate of Census Operations, Karnataka**


2011

7th Floor, 'E' & 'F' Wing, Kendriya Sadan
Koramangala, Bangalore - 560 034
Phone : 080 - 25520352
E-mail : dco-kar@censusindia.gov.in
http://www.censuskarnataka.gov.in


# CENSUS OF INDIA 2011

## PROVISIONAL POPULATION TOTALS - KARNATAKA - DATA SHEET


### DENSITY OF POPULATION 2011




### GROWTH RATE OF POPULATION 2001 - 2011





### POPULATION 2011





| | |
|---|---|
| Total Population | 6,11,30,704 |
| Males | 3,10,57,742 |
| Females | 3,00,72,962 |

### EFFECTIVE FEMALE LITERACY RATE 2011




### CHILD SEX RATIO IN AGE GROUP 0-6 2011





**Directorate of Census Operations, Karnataka**

7th Floor, 'E' & 'F' Wing, Kendriya Sadan

Koramangala, Bangalore - 560 034

Phone : 080 - 25520352

E-mail : dco-kar.rgi@censusindia.gov.in

http://www.censuskarnataka.gov.in



The responsibility for the correctness of internal details rests with the publisher.

The territorial waters of India extend into the sea to a distance of twelve nautical miles measured from the appropriate base line.

The external boundaries and coastlines of India agree with the Record/Master Copy certified by Survey of India.

© Government of India Copyright 2011.



Data Product Code

29-001-2011-Cen-Data Sheet(E)

ವಿಂಗಡಿಸಿದ್ದಾರೆ. ದಕ್ಷಿಣದ ಜಿಲ್ಲೆಗಳ ಬುಡಕಟ್ಟುಗಳ ಪೈಕಿ ಮೈಸೂರು, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳ ಬುಡಕಟ್ಟಿನವರಿದ್ದಾರೆ, ಅಂದರೆ, ಜೇನು ಕುರುಬ, ಬೆಟ್ಟ ಕುರುಬ, ಹಸಲರ್, ಮಲೈಕುಡಿ, ಮಲೇರು, ಸೋಲಿಗರು, ಯೆರವ, ಕೊರಗ, ಇತ್ಯಾದಿ. ಅವರ ಹಂಚುವಿಕೆಯು ಮುಖ್ಯವಾಗಿ ಕರ್ನಾಟಕದಲ್ಲಿ ಆಗಿದೆ.ಹಾಗಾಗಿ, ಅವರನ್ನು ಈ ರಾಜ್ಯದ ಮೂಲ ಬುಡಕಟ್ಟು ಪಂಗಡದವರೆಂದು ವಿಂಗಡಿಸಬಹುದು. ಕೇರಳ ಹಾಗೂ ತಮಿಳುನಾಡಿದ ಪಂಗಡಗಳಲ್ಲಿ ಪಲ್ಲಿಯನ್, ಪುಲಯನ್, ಕಟ್ಟುನಾಯಕನ್, ಇರುಳಿಗ ಹಾಗೂ ಕಾಡರ್‌ಗಳಿದ್ದಾರೆ.ಕೊಂಡ ಕಾಪು, ಚೆಂಚು, ತೊಹಿತಿ ಹಾಗೂ ಕೊಯ ಪಂಗಡದವರಿದ್ದು, ಅವರನ್ನು ಬಳ್ಳಾರಿ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಕಾಣಬಹುದು.ಉತ್ತರದ ಜಿಲ್ಲೆಗಳಾದ ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಹಾಗೂ ಗುಲ್ಬರ್ಗಾದ ಪಂಗಡಗಳು, ಮಧ್ಯ ಹಾಗೂ ಉತ್ತರ ಭಾರತದ ಪಂಗಡಗಳೊಂದಿಗೆ ಜನಾಂಗೀಯ ಸಂಪರ್ಕವನ್ನು ಕಾಣಬಹುದು, ಅಂದರೆ, ಬರ್ದ, ಬವಚ, ಗೊಂಡ್, ಭಿಲ್, ನೊಯಿಕ್ಡ, ಪರ್ಧಿ, ವಿಟೋಲಿಯ, ಕೋಲಿ ಧೋರ್, ಇತ್ಯಾದಿ.ದಕ್ಷಿಣದ ಜಿಲ್ಲೆಗಳ ಪಂಗಡಗಳನ್ನು ಮಲಿದ್–ಮಲೈ, ಅಂದರೆ ಬೆಟ್ಟವನ್ನು ಸೂಚಿಸುವ ಹೆಸರು, ಹಾಗೂ ಉತ್ತರದ ಜಿಲ್ಲೆಯವರನ್ನು ಗೊಂದಿಡ್ ಎಂದು ಕರೆಯುತ್ತಾರೆ.ಈ ಮೊದಲನೆಯ ವರ್ಗವನ್ನು ನಿರ್ದಿಷ್ಟ ಗುರುತಿನ ಆದಿಕಾಲದ ಪ್ರೊಟೋ–ಆಸ್ಟ್ರಲಾಯಿಂಡ್ ಲಕ್ಷಣಗಳಿಂದ ಗುರುತಿಸಬಹುದು.ಇವರ ಪ್ರಮುಖ ಲಕ್ಷಣಗಳು – ಅಗಲವಾದ ಮೂಗಿನ ಹೊಳ್ಳೆಗಳು (ಬ್ರಾಕಿರೈನಿ) ಹಾಗೂ ಉದ್ದನೆಯ ತಲೆಗಳು (ಡೋಲಿಸೆಫ಼ಾಲಿಕ್).ಅನೇಕ ರೀತಿಗಳಲ್ಲಿ, ಗೊಂದಿಡ್ ಕುಲೀನ ಲಕ್ಷಣಗಳನ್ನು ಮಾಲಿಡ್ ರೀತಿಯವರೊಂದಿಗೆ ಹಂಚಿಕೊಳ್ಳಲಾಗಿದೆ, ಆದರೆ, ಮೀಸೋರೈನಿಯನ್ನು (ಮಧ್ಯಮ) ತೋರುವ ಮೂಗಿನ ಆಕಾರ ಹಾಗೂ ಮೂಗಿನ ಹೊಳ್ಳೆಗಳ ಗಾತ್ರದಲ್ಲಿ ಕೆಲವು ಸೂಕ್ಷ್ಮತೆಗಳು ಕಂಡು ಬರುತ್ತವೆ.ಈ ರೀತಿಯ ಜನರಿಗೆ ಇರುವ ಅಗಲವಾದ ದವಡೆಮೂಳೆಯು, ಅವರ ಮುಖವು ಕೋನಾಕಾರವಾಗಿ ಕಾಣುವಂತೆ ಮಾಡುತ್ತದೆ.

ಸ್ಥಳೀಯ ಸಮುದಾಯ/ಜನಸಂಖ್ಯೆಗಳಲ್ಲದೆ, ಇತರ ವರ್ಗಗಳ ಎಳೆಗಳೂ ಗಣನೀಯವಾಗಿವೆ. ಟರ್ಕಿ, ಆಫ಼್ಘಾನಿಸ್ತಾನ್, ಹಾಗೂ ಕೊಲ್ಲಿ ದೇಶಗಳ ಇತರ ಜನರನ್ನು, ಈ ಪ್ರದೇಶವನ್ನು ಆಳಿದ ಮುಸಲ್ಮಾನ ರಾಜವಂಶಗಳು ಗಮನಾರ್ಹ ಸಂಖ್ಯೆಯಲ್ಲಿ ಆಕರ್ಷಿಸಿದವು. ಆ ಪ್ರದೇಶದಿಂದ ತಪ್ಪಿಸಿಕೊಂಡ ನೀಗ್ರೋ ಗುಲಾಮರನ್ನು ಹತ್ತಿರವಿದ್ದ ಗೋವಾ ಆಕರ್ಷಿಸಿತು ಇದರಿಂದಾಗಿ ಗೋವಾದ ಅಂಚಿನಲ್ಲಿ ಇರುವ ಪ್ರದೇಶದಲ್ಲಿ, ಅದರಲ್ಲೂ ವಿಶೇಷವಾಗಿ ಉತ್ತರ ಕನ್ನಡದಲ್ಲಿ ಬಂದು ನೆಲೆಸಿದರು – ಈ ಜನರನ್ನು ಸಿದ್ದಿಗಳೆಂದು ಕರೆಯುತ್ತಾರೆ. ಭಟ್ಕಳ್‌ನಂತಹ ಕಡಲ ತೀರದ ಕೆಲವು ಪ್ರದೇಶಗಳಲ್ಲಿ ನವಾಯತ್‌ರೆಂದು ಸ್ಥಳೀಯವಾಗಿ ಕರೆಯುವ ಅರಾಬಿಕ್ ಮೂಲದ ಜನರು ಶತಮಾನಗಳಿಂದ ಅಲ್ಲಿ ನೆಲೆಸಿದ್ದಾರೆ. ಇತ್ತೀಚೆಗೆ, ಟಿಬೆಟ್ಟಿಯನ್ನರ ಅನೇಕ ವಸಾಹತುಗಳೂ ಅಸ್ತಿತ್ವಕ್ಕೆ ಬಂದಿವೆ (ಮೈಸೂರು ಜಿಲ್ಲೆಯ ಬೈಲಕೊಪ್ಪ ಹಾಗೂ ಧಾರವಾಡ ಜಿಲ್ಲೆಯ ಮುಂಡ್‌ಗೋಡ್ ಮುಂತಾದವು).




ಇಲ್ಲಿನ ಕ್ರೈಸ್ತರ ಜನಸಂಖ್ಯೆಯಲ್ಲಿ ಯೂರೋಪಿಯನ್ ಅಂಶದ. ಸಾಕಷ್ಟು ಪ್ರಭಾವ ಇದೆ; ಕಾರಣ, ಗೋವಾದಲ್ಲಿದ್ದ ಪೋರ್ಚುಗಲ್ ದೇಶದವರು, ಸ್ಥಳೀಯ ಮಹಿಳೆಯರನ್ನು ವಿವಾಹವಾಗಿದ್ದು ಅನೇಕ ಸಂಖ್ಯೆಯಲ್ಲಿ ಗೋವಾದ ಕ್ರಿಶ್ಚಿಯನ್ನರು ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ಕರಾವಳಿಯ ಜನರು ಅರಬ್ ವ್ಯಾಪಾರಿಗಳ ಸಂಪರ್ಕಕ್ಕೆ ಬಂದಾಗ, ಅವರು ಸ್ಥಳೀಯ ಜನರೊಂದಿಗೆ ಬೆರೆಯಲು ನೆರವಾಯಿತು. ಸ್ಥಳೀಯರೂ ಸೇರಿದಂತೆ, ಹಲವಾರು ಜನಾಂಗೀಯ ಕರ್ನಾಟಕದ ಸಂಸ್ಕೃತಿಯು ರೂಪಿತವಾಗುವಲ್ಲಿ ನೆರವಾಗಿ, ಜನರ ಜೀವನಕ್ಕೆ ಆಕಾರವನ್ನು ನೀಡಿದೆ.

**ಭಾಷೆಗಳು:** ಕನ್ನಡವು ರಾಜ್ಯದ ಭಾಷಾ ವೈವಿಧ್ಯತೆ ಪ್ರಮುಖ ಭಾಷೆ. ೧೯೯೧ರ ಜನಗಣತಿಯ ಪ್ರಕಾರ, ರಾಜ್ಯದ ಜನಸಂಖ್ಯೆಯ ಭಾಷಾ ವಿಂಗಡನೆಯು ಕೆಳಕಂಡಂತೆ ಇದೆ:

| | |
|---|---|
| ಕನ್ನಡ | ೬೬.೨೨ಪ್ರತಿಶತ |
| ಉರ್ದು | ೯.೯೬ಪ್ರತಿಶತ |
| ತೆಲುಗು | ೭.೩ಪ್ರತಿಶತ |
| ತಮಿಳು | ೩.೮೪ಪ್ರತಿಶತ |
| ಮರಾಠಿ | ೩.೬೫ಪ್ರತಿಶತ |
| ತುಳು | ೩.೦೭ಪ್ರತಿಶತ |
| ಹಿಂದಿ | ೧.೯೭ಪ್ರತಿಶತ |
| ಮಲಯಾಳಂ | ೧.೬೮ಪ್ರತಿಶತ |
| ಕೊಂಕಣಿ | ೧.೭೫ಪ್ರತಿಶತ |
| ಕೂರ್ಗಿ | ೦.೨೧ಪ್ರತಿಶತ |

**ಮಾತೃ ಭಾಷೆ:** ೨೦೦೧ರ ಜನಗಣತಿಯ ಪ್ರಕಾರ, ರಾಜ್ಯದಲ್ಲಿ ೧೨೩ ಮಾತೃ ಭಾಷೆಗಳಿವೆ. ೨೦೦೧ರಂತೆ, ಮಾತೃ ಭಾಷೆಯ ಆಧಾರದ ಮೇಲೆ ವಿಂಗಡಿತವಾದ ಜನಸಂಖ್ಯೆಯನ್ನು ಕೆಳಕಂಡ ಕೋಷ್ಟಕವು ನೀಡುತ್ತದೆ.


ಮೊದಲ ಒಂಭತ್ತು ಭಾಷೆಗಳು ಸುಮಾರು ೯೯ ಪ್ರತಿಶತ ಜನಸಂಖ್ಯೆಯನ್ನು ಒಳಗೊಂಡಿದೆ.

| **ಮಾತೃ ಭಾಷೆ** | **ಮಾತನಾಡುವವರ ಸಂಖ್ಯೆ** | **ಒಟ್ಟಾರೆ ಜನಸಂಖ್ಯೆಯ ಪ್ರತಿಶತ** |
|---|---|---|
| ಕನ್ನಡ | ೧,೯೩,೨೦,೦೨೩* | ೬೫.೯೪ |
| ಉರ್ದು | ೨೬,೦೬,೬೭೮ | ೯.೦೦ |
| ತೆಲುಗು | ೨೩,೯೪,೨೭೪ | ೮.೧೭ |
| ಮರಾಠಿ | ೧೧,೮೬,೪೧೭ | ೪.೦೫ |
| ತುಳು | ೧೦,೪೧,೭೪೬ | ೩.೫೬ |
| ತಮಿಳು | ೯,೮೩,೯೫೨ | ೩.೩೬ |
| ಕೊಂಕಣಿ | ೫,೭೨,೮೨೮ | ೧.೯೬ |
| ಮಲಯಾಳಂ | ೪,೧೩,೨೮೨ | ೧.೪೧ |
| ಲಂಬಾಣಿ/ಲಂಬಾಡಿ | ೩,೪೦,೫೧೨ | ೧.೧೬ |
| ಹಿಂದಿ | ೧,೨೮,೦೪೩ | ೦.೪೪ |
| ಕೊಡವ | ೭೦.೯೮೫ | ೦.೨೪ |

| **ಮಾತೃ ಭಾಷೆ** | **ಮಾತನಾಡುವವರ ಸಂಖ್ಯೆ** | **ಒಟ್ಟಾರೆ ಜನಸಂಖ್ಯೆಯ ಪ್ರತಿಶತ** |
|---|---|---|
| ಬಂಜಾರಿ | ೩೧,೮೮೪ | ೦.೧೧ |
| ಗುಜರಾತಿ | ೨೬,೯೫೬ | ೦.೦೯ |
| ಕ್ಷತ್ರಿಯ | ೨೪,೩೧೦ | ೦.೦೮ |
| ಇಂಗ್ಲೀಷ್ | ೧೬,೯೩೧ | ೦.೦೬ |
| ಮಾರ್ವಾಡಿ | ೧೪,೨೦೩ | ೦.೦೫ |
| ಯೆರವ | ೧೦,೮೬೭ | ೦.೦೪ |
| ಟಿಬೆಟಿಯನ್ | ೮,೯೮೨ | ೦.೦೩ |
| ಸಿಂಧಿ | ೮,೬೧೧ | ೦.೦೩ |
| ಬಂಗಾಳಿ | ೭,೦೫೬ | ೦.೦೨ |
| ಪಂಜಾಬಿ | ೬,೯೪೩ | ೦.೦೨ |
| ಅರಾಬಿಕ್/ಅರ್ಬಿ | ೬,೯೦೯ | ೦.೦೨ |
| ರಾಜಸ್ಥಾನಿ | ೪,೨೮೪ | ೦.೦೧ |
| ಕುರುಬ/ಕುರುಂಬ | ೪,೦೯೧ | ೦.೦೧ |
| ಕೊರಚ | ೩,೪೭೩ | ೦.೦೧ |
| ವಡರಿ | ೩,೨೨೩ | ೦.೦೧ |
| ಕೊರವ | ೨,೮೩೨ | ೦.೦೧ |
| ಕೊಂಗರ್ | ೧,೮೮೬ | ೦.೦೧ |
| ಬ್ರಜ್‌ಭಾಷಾ | ೧,೬೩೯ | ೦.೦೧ |
| ಗೊರ್ಖಾಲಿ/ನೇಪಾಲಿ | ೧,೬೦೫ | ೦.೦೧ |


* ಈ ಅಂಕಿ-ಅಂಶಗಳಲ್ಲಿ ಬಡಗ, ಹರ್ನ್‌ಶಿಕಾರಿ, ಕೊರಚ, ಕುರುಬ/ಕುರುಂಬ ಪ್ರಾಂತೀಯ ಭಾಷೆಗಳನ್ನು ಮಾತನಾಡುವ ೮,೨೪೭ ಜನರನ್ನು ಸೇರಿಸಿಲ್ಲ.

**ಪ್ರಾಂತೀಯ ಭಾಷೆ/ಉಪಭಾಷೆಗಳು ಹಾಗೂ ಹಸ್ತಪ್ರತಿಗಳು:** ಅನಾದಿ ಕಾಲದಿಂದಲೂ, ಕರ್ನಾಟಕವು ವಿಶಾಲವಾದ ಪ್ರದೇಶವಾಗಿರುವುದರಿಂದ, ನೆರೆಯ ರಾಜ್ಯಗಳ ಭಾಷಾ ಪ್ರಭಾವವೂ ಸೇರಿದಂತೆ, ಅನೇಕ ಅಂಶಗಳಿಂದ ಪ್ರಭಾವಿತವಾದ ಆಡು/ಪ್ರಾಂತೀಯ/ಉಪ ಭಾಷೆಗಳಲ್ಲಿ ಅನುರೂಪವಾದ ಪ್ರಾಂತೀಯ ವ್ಯತ್ಯಾಸಗಳನ್ನು ಅಭಿವೃದ್ಧಿಪಡಿಸಿಕೊಂಡಿದೆ.ಇಂದು, ಕನಿಷ್ಠ, ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾದ, ಮೂರು ಸಾಂಸ್ಕೃತಿಕ ಕೇಂದ್ರಗಳೊಂದಿಗೆ ಹೊಂದಿಕೊಂಡ ಉಪ/ಆಡು ಭಾಷೆಗಳನ್ನು ಗುರುತಿಸಬಹುದು – ಅವುಗಳೆಂದರೆ, ಮೈಸೂರು ಕನ್ನಡ, ಧಾರವಾಡ ಕನ್ನಡ ಹಾಗೂ ಮಂಗಳೂರು ಕನ್ನಡ.ಈ ಪ್ರದೇಶಗಳಲ್ಲೂ, ಅನೇಕ ಆಡುಭಾಷಿಕ ಉಪ-ವಿಭಾಗಗಳು ವೃದ್ಧಿ ಹೊಂದುತ್ತಿವೆ.


ಬುಡಕಟ್ಟು ಜನರ ಅರಣ್ಯ ನೆಲೆ

ಉತ್ತರ ಕನ್ನಡ ಜಿಲ್ಲೆ ಹಾಗೂ ಅದರ ಅಂಚಿನ ಪ್ರದೇಶಗಳಲ್ಲಿ ಹೆಚ್ಚಾಗಿ ಕೇಂದ್ರೀಕೃತವಾದ ಹವ್ಯಕ ಸಮುದಾಯವು, ಕೆಲವು ಪ್ರಾಚೀನ ಅಂಶಗಳನ್ನು ಉಳಿಸಿಕೊಂಡು ಮತ್ತೆ ಕೆಲವನ್ನು ಅಭಿವೃದ್ಧಿಪಡಿಸಿಕೊಂಡಿದು, ಸಾಮಾನ್ಯವಾಗಿ ಮಾತನಾಡುವ ಕನ್ನಡಕ್ಕಿಂತ ವಿಭಿನ್ನವಾದ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಹವ್ಯಕ ಆಡುಭಾಷೆಯು, ತನ್ನಲ್ಲೇ ಅನೇಕ ಪ್ರಾದೇಶಿಕ ವ್ಯತ್ಯಾಸಗಳನ್ನು ಹೊಂದಿದೆ. ಹವ್ಯಕರಿಗಿಂತ ಸ್ವಲ್ಪ ಭಿನ್ನವಾದ ಕನ್ನಡ ಆಡುಭಾಷೆ/ಉಪಭಾಷೆಯನ್ನು ದಕ್ಷಿಣ ಕನ್ನಡದ ಕೋಟ ಬ್ರಾಹ್ಮಣರು ಮಾತನಾಡುತ್ತಾರೆ. ಬಡಗ ರೀತಿಯು ಖಂಡಿತವಾಗಿಯೂ ಕನ್ನಡದ ಅತ್ಯಂತ ಪ್ರಮುಖ ಆಡುಭಾಷೆ ಹಾಗೂ ಬಹುವಾಗಿ, ಅದನ್ನು ಕೇವಲ ನೀಲಗಿರಿ ಜಿಲ್ಲೆಯಲ್ಲಿ ಮಾತ್ರ ಕಂಡುಬರುತ್ತದೆ. ಸಾಮಾನ್ಯ ಕನ್ನಡಕ್ಕಿಂತ ಬಡಗವು ಇನ್ನೂ ಪುರಾತನವಾಗಿದ್ದು, ಅನೇಕ ಕಡೆಗಳಲ್ಲಿ, ಹಳೆಯ ಸಾಹಿತ್ಯದ ಭಾಷೆಯೊಂದಿಗೆ ಒಗ್ಗುತ್ತದೆ.ಬಡಗರು ಎಂಬ ಪದವನ್ನು ತಮಿಳರು ಬಳಸುತ್ತಾರೆ – ಅಂದರೆ 'ಉತ್ತರದವರು' ಎಂದರ್ಥ.ಅವರು, ಅನೇಕ ಶತಮಾನಗಳ ಹಿಂದೆ ನೀಲಗಿರಿ ಪ್ರದೇಶಕ್ಕೆ ವಲಸೆ ಹೋದ ಕನ್ನಡಿಗರು.ನಾಡವರ ಕನ್ನಡವೂ ಸಹ ನಾಡವರು ಮಾತನಾಡುವ ಕನ್ನಡದ ಆಡುಭಾಷೆ – ಅವರು ಉತ್ತರ ಕನ್ನಡದ ಜಿಲ್ಲೆಯ ಕೃಷಿಕರು. ಅದೇ ಜಿಲ್ಲೆಯ ಕನ್ನಡ ವೈಶ್ಯರು ಮಾತನಾಡುವ ಕನ್ನಡದ ಮತ್ತೊಂದು ಆಡುಭಾಷೆಯಿದೆ. ಮೀನುಗಾರರು ಹಾಗೂ ಕೃಷಿಕರಾದ ಹರಿಕಂತ್ರರು, ನಿರ್ದಿಷ್ಟ ಉಚ್ಚಾರಣೆಯೊಂದಿಗೆ ಕನ್ನಡವನ್ನು ಮಾತನಾಡುತ್ತಾರೆ. ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರು ಮಾತನಾಡುವ ಹಾಲಕ್ಕಿ ಕನ್ನಡವು, ಕನ್ನಡದ ಮತ್ತೊಂದು ಆಡುಭಾಷೆ. ಪರಿಶಿಷ್ಟ ಜಾತಿಯ ಗುಂಪಿನವರಾದ ಮುಕ್ರಿಗಳು ಮಾತನಾಡುವ ಕನ್ನಡವು ಇತರರು ಮಾತನಾಡುವ ಭಾಷೆಗಿಂತ ವಿಭಿನ್ನವಾದ ಕೆಲವು ಪದಗಳನ್ನು ಒಳಗೊಂಡಿದೆ. ಭಾಗಶಃ, ಇದು ಹಾಲಕ್ಕಿ ಕನ್ನಡಕ್ಕೆ ಹತ್ತಿರವಾದುದು. ಉತ್ತರ ಕನ್ನಡ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಇರುವ ಪರಿಶಿಷ್ಟ ಜಾತಿಯ ಹಲ್ಲೀರ್ ವಜಂತ್ರಿಗಳು ಮಾತನಾಡುವ ಕನ್ನಡದಲ್ಲಿ ಕೊಂಕಣಿ ಪದಗಳು ಬೆರೆತಿದ್ದು, ಬೇರೆ ಯಾವ ಭಾಷೆಯಲ್ಲೂ ದೊರೆಯದ ಕೆಲವು ವಿಚಿತ್ರವಾದ ಸಂಕೇತ ಪದಗಳನ್ನೂ ಅವರು ಬಳಸುತ್ತಾರೆ. ಅವರು ಮಾತನಾಡುವ ಭಾಷೆಯು ಮುಕ್ರಿಗಳು ಹಾಗೂ ಹಾಲಕ್ಕಿ ಒಕ್ಕಲರು ಮಾತನಾಡುವ ಭಾಷೆಗೆ ಹತ್ತಿರವಾಗಿದೆ.ದಕ್ಷಿಣ ಕನ್ನಡ ಜಿಲ್ಲೆಯ ಮತ್ತೊಂದು ಪರಿಶಿಷ್ಟ ಜಾತಿಯ ಗುಂಪಿನವರಾದ ಕೂಸಾಗಳು, ತಮ್ಮಲ್ಲೇ ಮಾತನಾಡಿಕೊಳ್ಳುವಾಗ, ಒಟ್ಟಾರೆಯಾಗಿ ಪ್ರತ್ಯೇಕ ಆಡುಭಾಷೆಯಂತೆ ಕೇಳಿಸುತ್ತದೆ. ದಕ್ಷಿಣ ಕನ್ನಡದ ಪರಿಶಿಷ್ಟ ಜಾತಿಯ ಗುಂಪಾದ ಕೊರಗರು ಮಾತನಾಡುವ ಕನ್ನಡ ಆಡುಭಾಷೆಯು ವಿಚಿತ್ರವಾಗಿದ್ದು, ಅದನ್ನು ವಿದ್ವಾಂಸರೊಬ್ಬರು ದ್ರಾವಿಡ ಗುಂಪಿನ ನಿರ್ದಿಷ್ಟ ಭಾಷೆ ಎಂದು ವಿವರಿಸಿದ್ದಾರೆ.

ಪರಿಶಿಷ್ಟ ಪಂಗಡದವರಾದ ಇರುಳಿಗರು, ಕನ್ನಡ ಹಾಗೂ ತಮಿಳು ಬೆರಕೆಯ ಪ್ರಾಂತೀಯ ಭಾಷೆ/ಆಡುಭಾಷೆಯನ್ನು ಮಾತನಾಡುತ್ತಾರೆ. ಮನೆಯಲ್ಲಿ ಹಾಗೂ ಹೊರಗೂ, ಸಾಮಾನ್ಯವಾಗಿ ಅವರು ಪ್ರಾದೇಶಿಕ ಭಾಷೆಯನ್ನು ಬಳಸುತ್ತಾರೆ. ಬಿಳಿಗಿರಿರಂಗನಬೆಟ್ಟದ ಸೋಲಿಗರು ಕನ್ನಡದ


*A proud Coorgi looks into the distance*

ಹಳೆಯ ಆಡುಭಾಷೆಯನ್ನು ಬಳಸುತ್ತಿದ್ದರೆಂದು ತೋರುತ್ತದೆ. ತೋಡರ ಭಾಷೆಯಲ್ಲೂ ಕನ್ನಡ ಪದಗಳ ಮಿಶ್ರಣವಿದೆ. ತಮಿಳು, ತೆಲುಗು ಹಾಗೂ ಕನ್ನಡದ ಆಡುಭಾಷೆಯಂತೆ ತೋರುವ ವಿಚಿತ್ರ ಬಂಜಾರ ಭಾಷೆಯನ್ನು ಕೊರಮರು ಹಾಗೂ ಕೊರಚರು ಮಾತನಾಡುತ್ತಾರೆ. ಹಾಗಾಗಿ, ಸಾಮಾನ್ಯ ಕನ್ನಡವಲ್ಲದೆ, ಇನ್ನೂ ಹತ್ತಾರು ಕನ್ನಡದ ಆಡುಭಾಷೆಗಳಿವೆ.

ಕೊಡವ ಆಡುಭಾಷೆಯು ಬಹುಪಾಲು ರಾಜ್ಯದ ಕೊಡಗು ಜಿಲ್ಲೆಗೇ ಸೀಮಿತವಾಗಿದೆ. 'ಕನ್‌ಜ್ವಿ' (ಕ್ಯಾನರಿನ್) ಭಾಷೆಯೆಂದು ಕರೆಯಲ್ಪಡುವ ಕೊಂಕಣಿಯು ಇಂಡೋ – ಆರ್ಯನ್ ಭಾಷೆ. ಪಶ್ಚಿಮ ಕರಾವಳಿಯ ಕೊಂಕಣ ಭಾಗದಲ್ಲಿ ಇದು ರೂಢಿಯಲ್ಲಿದ್ದು ಕನ್ನಡದ ಲಿಪಿಯನ್ನು ಬಳಸಲಾಗುತ್ತದೆ. ಉತ್ತರ ಕನ್ನಡದ ನವಾಯತರು, ನವೈತಿ ಎಂದು ಕರೆಯಲ್ಪಡುವ ಕೊಂಕಣಿಯ ನಿರ್ದಿಷ್ಟ ಆಡುಭಾಷೆಯನ್ನು ಮಾತನಾಡುತ್ತಾರೆ; ಕೆಲವೊಮ್ಮೆ ಇದನ್ನು ಅರಾಬಿಕ್ ಲಿಪಿಯಲ್ಲಿ ಬರೆಯಲಾಗುತ್ತದೆ. ಕರಾವಳಿಯ ರೋಮನ್ ಕ್ಯಾಥೊಲಿಕ್‌ಗಳು ಪೋರ್ಚುಗೀಸ್ ಹಾಗೂ ಇಂಗ್ಲೀಷ್ ಪದಗಳು ಬೆರೆತ ಗೋವಾ ಕೊಂಕಣಿಗೆ ಹತ್ತಿರವಾದ ಕೊಂಕಣಿಯನ್ನು ಮಾತನಾಡುತ್ತಾರೆ. ಆದರೆ, ಅವರು ಗೋವಾದವರಂತೆ ರೋಮನ್ ಲಿಪಿಯನ್ನು ಬಳಸದೆ, ಭಾಷೆಯನ್ನು ಬರೆಯಲು ಕನ್ನಡ ಲಿಪಿಯನ್ನು ಬಳಸುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಸೋನಾರರು ಹಾಗೂ ಸೋನೆಗಾರರು ಮಾತನಾಡುವ ರೀತಿ ಹಾಗೂ ಶೈಲಿಯು, ಇತರರು ಮಾತನಾಡುವ ಕೊಂಕಣಿಗಿಂತ ವಿಭಿನ್ನವಾಗಿದೆ.

ಉದ್ದಿಮೆ ಹಾಗೂ ಸಣ್ಣ ವ್ಯಾಪಾರದಲ್ಲಿ ತೊಡಗಿರುವ ಕ್ಷತ್ರಿಯ ಲಾಡಾರು, ಹಿಂದಿ, ಮರಾಠಿ ಹಾಗೂ ಗುಜರಾತಿಯ ಮಿಶ್ರ ಭಾಷೆಯಾದ ಚೌರಾಶಿಯನ್ನು ಮಾತನಾಡುತ್ತಾರೆ. ಅದಕ್ಕೆ ಲಿಪಿ ಇಲ್ಲ. ಕುಡುಬಿಯರು (ಬುಡಕಟ್ಟು ಪಂಗಡ) ಮರಾಠಿ ಮಿಶ್ರಿತ ಕೊಂಕಣಿಯನ್ನು ಮಾತನಾಡುತ್ತಾರೆ. ಖಾನಾಪುರ್–ಹಳಿಯಾಳ ಪ್ರದೇಶದಲ್ಲಿ, ಮರಾಠಿ ಮಿಶ್ರಿತ ಹೆಂಗಾಡಿ ಎಂಬ ಕೊಂಕಣಿ ಭಾಷೆಯನ್ನು ಮಾತನಾಡುತ್ತಾರೆ.ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯರು ಮಾತನಾಡುವ ಭಾಷೆಯು ಹಿಂದೂಸ್ಥಾನಿ, ಗುಜರಾತಿ, ಮರಾಠಿ ಹಾಗೂ ಹಿಂದಿಗಳ ಮಿಶ್ರಣವಾಗಿದೆ.ಇದು, ಮಹಾರಾಷ್ಟ್ರ–ಗುಜರಾತಿನ ಸೀಮಾ ಪ್ರದೇಶದಲ್ಲಿ ಮಾತನಾಡುವ ಹೈರಾಣಿಯನ್ನು (ಅಹಿರಾಣಿ) ಹೋಲುವ ಭಾಷೆಯಾಗಿದೆ.ಕರ್ನಾಟಕದಲ್ಲಿ ಮಾತನಾಡುವ ಹಾಗೂ ಬರೆಯುವ ಹಾಗೂ ಶಾಸನಗಳಲ್ಲಿ ದೊರೆತಿರುವ ಮರಾಠಿಯು, ಕನ್ನಡದ ಪ್ರಭಾವವನ್ನು ಬಹಳಷ್ಟು ತೋರುತ್ತದೆ.ದಕ್ಷಿಣ ಕನ್ನಡದ ಬ್ರಾಹ್ಮಣರು, ಬಂಟರು, ಜೈನರು ಹಾಗೂ ಇತರರು ಮಾತನಾಡುವ ತುಳುವರ ಮೂಲ ಹಾಗೂ ಪ್ರಾಚೀನ ಭಾಷೆಯಾದ ತುಳುವು, ದ್ರಾವಿಡ ಗುಂಪಿನ ಭಾಷೆಗೆ ಸೇರಿದ್ದು, ಅದನ್ನೂ ಕನ್ನಡದ ಲಿಪಿಯಲ್ಲಿ ಬರೆಯಲಾಗುತ್ತದೆ.

## ವಿಶೇಷ ಭಾಷೆಗಳು

ಕರ್ನಾಟಕದಲ್ಲಿ, ಭಾಷೆಗಳು ಅಥವಾ ವಿಶೇಷ ಉಪಭಾಷೆಗಳು ಅನೇಕ ಬಾರಿ ಕೆಲವು ಜಾತಿಗಳೊಡನೆ ಸಂಬಂಧವನ್ನು ಹೊಂದಿರುತ್ತವೆ. ಬಂಜಾರ ಉಪಭಾಷೆ ಮಾತನಾಡುವವರ ಜನರ ಸಂಖ್ಯೆಯು, ಬಂಜಾರ ಹಾಗೂ ಲಂಬಾಣಿ ಎಂದು ಗಣತಿಗೊಂಡ ಯಾದವರಿಗಿಂತ ಅಧಿಕವಾಗಿದೆ.ಬೇರೆಲ್ಲ ಪರಿಸ್ಥಿತಿಗಳಲ್ಲೂ, ಪ್ರತಿಯೊಂದು ಜಾತಿಯ ಜನಸಂಖ್ಯೆಯು, ಅದೇ ಜಾತಿಯ ಹೆಸರನ್ನು ಹೊಂದಿದವರು ಮಾತನಾಡುವ ಸಂಬಂಧಪಟ್ಟ ಭಾಷೆಗಿಂತ ಅಧಿಕವಾಗಿದೆ. ಜಾತಿಯ ಹೆಸರುಗಳನ್ನು ಹೊಂದಿದ ಭಾಷೆಗಳನ್ನು ಮಾತೃಭಾಷೆಯಾಗಿ ಉಳಿಸಿಕೊಳ್ಳುವುದಕ್ಕಿಂತ, ಪ್ರಮುಖ ಮಾತೃ ಭಾಷೆಗಳು ಪ್ರಭಾವ ಬೀರುವ ಬಲವಾದ ಪ್ರವೃತ್ತಿಯನ್ನು ತೋರುವುದರಿಂದ, ಅವುಗಳನ್ನು ಮಾತೃ ಭಾಷೆಯಾಗಿ ಉಳಿಸಿಕೊಳ್ಳಲಾಗುತ್ತದೆ. ವಿವಿಧ ಸಾಮಾಜಿಕ ವಿಭಾಗಗಳ ನಡುವೆ ಸುಧಾರಿತ ಸಂವಹನದ ಪರಿಣಾಮವಾಗಿ ಈ ಪ್ರಕ್ರಿಯೆಯಿಂದ, ಪ್ರಮುಖ ಭಾಷೆಗಳಲ್ಲಿ ಶಿಕ್ಷಣದ ಹರಡುವಿಕೆಯು ನಿಧಾನವಾಗಿ ಉಂಟಾಗುತ್ತದೆ.

**ದ್ವಿಭಾಷಿತ್ವ:** ತಮ್ಮ ಮಾತೃಭಾಷೆಯಲ್ಲದೆ, ಕೆಲವು ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಮಾತನಾಡುತ್ತಾರೆ.ಕನ್ನಡ ಮಾತೃ ಭಾಷೆಯಾಗಿರುವ ಜನರ ಪೈಕಿ, ಇಂಗ್ಲೀಷ್ ವಿದೇಶೀ ಭಾಷೆಯಾದರೂ, ಅದು ಪ್ರಥಮ ಸಹಾಯಕ ಭಾಷೆಯ ಸ್ಥಾನವನ್ನು ಪಡೆದುಕೊಂಡಿದೆ, ಅದರ ನಂತರ ತೆಲುಗು ಹಾಗೂ ಹಿಂದಿಯು ಅಂತಿಮ ಸ್ಥಾನವನ್ನು ಪಡೆದುಕೊಂಡಿದೆ.ಕನ್ನಡವನ್ನು ಹೊರತುಪಡಿಸಿ, ಒಂಭತ್ತು ಪ್ರಮುಖ ಮಾತೃ ಭಾಷೆಗಳನ್ನು ಮಾತನಾಡುವವರ ಪೈಕಿ, ಕನ್ನಡವು ಪ್ರಥಮ ಸಹಾಯಕ ಭಾಷೆಯ ಸ್ಥಾನದಲ್ಲಿ ಇದೆ. ಉರ್ದು ಮಾತೃಭಾಷೆಯಾದವರಲ್ಲೂ, ಸಹಾಯಕ ಭಾಷೆಯು ಕನ್ನಡವೇ ಆಗಿದೆ.ಕೊಡವ ಮಾತೃಭಾಷೆ ಇರುವವರಲ್ಲೂ ಇದು ನಿಜವಾಗಿದೆ.

## ಸಾಮಾಜಿಕ ವೈವಿಧ್ಯತೆ

### ಧಾರ್ಮಿಕ ವೈವಿಧ್ಯತೆ

ಕರ್ನಾಟಕ ಹಲವಾರು ಧರ್ಮಗಳು ಆಚರಣೆಯಲ್ಲಿರುವ ನಾಡು. ಜನರ ಜೀವನ ಶೈಲಿ ಹಾಗೂ ಚಟುವಟಿಕೆಗಳನ್ನು ರೂಪಿಸುವಲ್ಲಿ ಹಾಗೂ ಕರ್ನಾಟಕದ ಸಂಸ್ಕೃತಿಯನ್ನು ಉತ್ತೇಜಿಸುವಲ್ಲಿ, ಪ್ರತಿಯೊಂದು ಧರ್ಮವೂ ತನ್ನ ಕೊಡುಗೆಯನ್ನು ನೀಡಿದೆ. ಕರ್ನಾಟಕದ ಬಹುಸಂಖ್ಯಾತರು ಹಿಂದೂ ಧರ್ಮದ ಪರಿಪಾಲಕರು; ರಾಜ್ಯದ ಇತರ ಪ್ರಮುಖ ಧರ್ಮಗಳೆಂದರೆ ಬೌದ್ಧ, ಕ್ರಿಶ್ಚಿಯನ್, ಜೈನ, ಇಸ್ಲಾಂ ಹಾಗೂ ಸಿಕ್ಖ್ ಧರ್ಮಗಳು.


ಹಿಂದೂ ಸಾಧು

೨೦೦೧ರ ಜನಗಣತಿಯ ಪ್ರಕಾರ, ಜನಸಂಖ್ಯೆ ಹಾಗೂ ಒಟ್ಟಾರೆ ಜನಸಂಖ್ಯೆಯಲ್ಲಿ ವಿವಿಧ ಧರ್ಮಗಳ ಶೇಖಡಾವಾರು ಸಂಖ್ಯೆಯು ಕೆಳಕಂಡಂತೆ ಇದೆ:

| ಧರ್ಮ | ಜನಸಂಖ್ಯೆ | ಶೇಖಡಾವಾರು ಸಂಖ್ಯೆ |
|---|---|---|
| ಬೌದ್ಧರು | ೩,೯೩,೩೦೦ | ೦.೭೪ಪ್ರತಿಶತ |
| ಕ್ರಿಶ್ಚಿಯನ್ನರು | ೧,೦೦,೯೧೬೪ | ೧.೯೦ಪ್ರತಿಶತ |
| ಹಿಂದುಗಳು | ೪೪೩,೨೧೨,೭೯ | ೮೩.೮೬ಪ್ರತಿಶತ |
| ಜೈನರು | ೪,೧೨,೬೫೯ | ೦.೭೮ಪ್ರತಿಶತ |
| ಮುಸಲ್ಮಾನರು | ೬,೪೬,೩೧೨೭ | ೧೨.೨೩ಪ್ರತಿಶತ |
| ಇತರರು | ೧,೧೫,೬೦ | ೦.೨೨ಪ್ರತಿಶತ |
| ಸಿಕ್ಖರು | ೧೫,೩೨೬ | ೦.೦೨ಪ್ರತಿಶತ |
| ಧರ್ಮವನ್ನು ಹೆಸರಿಸದವರು | ೧,೨೦,೨೪೭ | ೦.೨೩ಪ್ರತಿಶತ |

## ಪಂಗಡಗಳು ಹಾಗೂ ಜಾತಿಗಳು

ಸಾಮಾನ್ಯವಾಗಿ ಸ್ವಗೋತ್ರ ಗುಂಪುಗಳಾದ ಅನೇಕ ಪರಿಶಿಷ್ಟ ಪಂಗಡಗಳು ಹಾಗೂ ಜಾತಿಗಳಿವೆ. ಕರ್ನಾಟಕವೂ ಸೇರಿದಂತೆ, ಪ್ರಾಚೀನ ಭಾರತದಲ್ಲಿ, ಎರಡು ವರ್ಗಗಳ ನಡುವೆ ಅಷ್ಟಾಗಿ ವ್ಯತ್ಯಾಸ ಇರುತ್ತಿರಲಿಲ್ಲ. ಪಟ್ಟಣ ಹಾಗೂ ಗ್ರಾಮಗಳಲ್ಲಿ ವಿವಿಧ ಜಾತಿಯವರು ಒಟ್ಟಾಗಿ ಜೀವಿಸುತ್ತಿದ್ದರೆ, ಗುಡ್ಡಗಾಡು ಪ್ರದೇಶಗಳಲ್ಲಿ ಪ್ರತ್ಯೇಕ ಗುಂಪುಗಳಲ್ಲಿ ಬುಡಕಟ್ಟು ಗುಂಪುಗಳು ಜೀವಿಸುತ್ತಿದ್ದರೂ, ವಿಶಾಲ ಸಮಾಜದೊಂದಿಗೆ ಈ ಗುಂಪುಗಳ ನಿರಂತರ ಒಡನಾಟ ಇರುತ್ತಿತ್ತು.ಅನೇಕ ಭಾರತೀಯ ರಾಜವಂಶದವರು ಬುಡಕಟ್ಟು ಮೂಲಗಳಿಂದ ಮೇಲೆ ಬಂದಿರುವ ಹಲವಾರು ಪ್ರಕರಣಗಳಿಂದ ಚರಿತ್ರೆಯು ತುಂಬಿದೆ. ಬಹುತೇಕ ಬುಡಕಟ್ಟಿನವರು, ಬಿಲ್ಲು–ಬಾಣ ಹಾಗೂ ಇತರ ಆಯುಧಗಳನ್ನು ಬಳಸುವಲ್ಲಿ ಪ್ರವೀಣರಾಗಿದ್ದರಿಂದ, ಅವರನ್ನು ರಾಜರ ಸೇನೆಗಳಿಗೆ ವಿಶೇಷವಾಗಿ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಬುಡಕಟ್ಟು ಹಾಗೂ ಜಾತಿಯ ವ್ಯತ್ಯಾಸವು ಆಧುನಿಕ ಹಾಗೂ ಮಾನವಜನ್ಯ ಚಿಂತನೆ ಆಗಿರುವುದರಿಂದ, ಅದನ್ನು ಸರ್ಕಾರವೂ ವಿಸ್ತೃತವಾಗಿ ಅಳವಡಿಸಿಕೊಂಡಿದೆ.

ನಿರ್ದಿಷ್ಟ ಭೌಗೋಳಿಕ ಪ್ರದೇಶ, ಪ್ರತ್ಯೇಕ ಭಾಷೆ, ನಿರ್ದಿಷ್ಟ ಸಂಸ್ಕೃತಿ ಹಾಗೂ ಸಾಮಾನ್ಯ ರಾಜಕೀಯ ವ್ಯವಸ್ಥೆ ಅಥವಾ ಅಪರಿಚಿತರ ವಿರುದ್ಧ ಸಾಮಾನ್ಯ ನಿರ್ಧಾರದ ಅನಿಸಿಕೆಯನ್ನು ಹೊಂದಿದ ಅನೇಕ ವಂಶಗಳು, ಅಲೆಮಾರಿ ಜನರ ಗುಂಪು ಹಾಗೂ ಉಪ–ಗುಂಪುಗಳ ಸಾಮಾಜಿಕ ಗುಂಪನ್ನು ಪಂಗಡ ಎನ್ನುತ್ತಾರೆ. ವಿದ್ವಾಂಸರು ಪಂಗಡದವರನ್ನು ಅಬಾರಿಜಿನ್ಸ್ ಅಥವಾ ಅಬಾರಿಜಿನಲ್ಸ್ ಅಥವಾ ಆದಿವಾಸಿಗಳೆಂದು ವಿವರಿಸಿದ್ದಾರೆ. ಸಾಮಾನ್ಯವಾಗಿ ನಾಗರಿಕ ಜಗತ್ತಿನಿಂದ ದೂರವಾಗಿ ಅರಣ್ಯ ಹಾಗೂ ಗುಡ್ಡಗಳನ್ನು ತಲಪಲು ಸಾಧ್ಯವಾಗದ ಪ್ರದೇಶಗಳಲ್ಲಿ, ಬುಡಕಟ್ಟು ಗುಂಪುಗಳು ವಾಸಿಸುತ್ತವೆ. ಇವರು ನೀಗ್ರಿಟೊಗಳು, ಆಸ್ಟ್ರಲಾಯಿಡ್‌ಗಳು ಅಥವಾ ಮಂಗೊಲಾಯಿಡ್ ಪಂಗಡಗಳಲ್ಲಿ ಒಂದಕ್ಕೆ ಸೇರಿರುತ್ತಾರೆ: ಅವರು ಒಂದೇ ಬುಡಕಟ್ಟು ಆಡು/ಉಪಭಾಷೆಯನ್ನು ಮಾತನಾಡುತ್ತಾರೆ. ಸಾಂಪ್ರದಾಯಿಕವಾಗಿ, ಅವರು ಚೈತನ್ಯವಾದವನ್ನು ಪರಿಪಾಲಿಸುತ್ತಾರೆ – ಇದರಲ್ಲಿ ಭೂತಗಳು ಹಾಗೂ ಗಣಗಳ ಆರಾಧನೆಯು ಅತ್ಯಂತ ಪ್ರಮುಖ ಅಂಶವಾಗಿದೆ. ಈಗ, ಬಹುತೇಕ ಬುಡಕಟ್ಟಿನವರು ಹಿಂದೂ ಧರ್ಮವನ್ನು ಆಚರಿಸುತ್ತಾರೆ.ಅರಣ್ಯ ಉತ್ಪನ್ನಗಳನ್ನು ಅರಸುವ ಹಾಗೂ ಶೇಖರಣೆ ಮಾಡುವ ಆದಿಕಾಲದ ಕಸುಬಿನಲ್ಲಿ ತೊಡಗಿದ್ದು, ಬಹುತೇಕ ಮಾಂಸಾಹಾರಿಗಳಾಗಿರುತ್ತಾರೆ.

೨೦೦೧ರ ಜನಗಣತಿಯ ಪ್ರಕಾರ, ಕರ್ನಾಟಕದಲ್ಲಿ ೪೯ ಬುಡಕಟ್ಟಿನ ಗುಂಪುಗಳಿವೆ. ಸಂವಿಧಾನದ ಪ್ರಕಾರ, ಈ ಪಟ್ಟಿಯಲ್ಲಿರುವ ಎಲ್ಲರನ್ನೂ ಪರಿಶಿಷ್ಟ ಪಂಗಡಗಳಿಗೆ ಸೇರಿಸಲಾಗಿದೆ. ಇವುಗಳ ಪೈಕಿ, ಯೆರವ, ಸೋಲಿಗರು, ನಾಯಕ್ಡ, ಮಾಲೇರು, ಕಾಡು ಕುರುಬ, ಜೇನು ಕುರುಬ, ಇರುಳಿಗ, ಹಸಲರು, ಕೊರಮ, ಕೊರಚ, ಕುಡಿಯ, ಮುಂತಾದವರಿದ್ದಾರೆ.

ಜಾತಿ ಪದ್ಧತಿಯು ಹಿಂದೂ ಸಮಾಜದ ವಿಚಿತ್ರವಾದ ಅಂಶವಾಗಿದೆ. ಬಹುತೇಕ ಎಲ್ಲ ಜಾತಿಯೂ



ಸಾಲು ಮರಗಳಿಂದ ಕೂಡಿದ ರಸ್ತೆಗಳು ಕರ್ನಾಟಕದಲ್ಲಿ ಸರ್ವೇಸಾಮಾನ್ಯ

ಸ್ವಗೋತ್ರ ಘಟಕವಾಗಿದೆ. ಅನೇಕ ಜಾತಿಗಳು ಮತ್ತಷ್ಟು ಉಪ-ಜಾತಿ ಹಾಗೂ ಉಪ-ಉಪ-ಜಾತಿಗಳಾಗಿಯೂ ವಿಭಜಿತವಾಗಿವೆ. ಅವರ ಸ್ಥಾನಮಾನದ ತತ್ವ ಹಾಗೂ ಇತರರೊಂದಿಗೆ ಇರುವ ಸ್ಪಷ್ಟ ಆಂತರ ಹಾಗು ಸಂಬಂಧವು, ಸಂಪೂರ್ಣ ವ್ಯವಸ್ಥೆಯನ್ನು ಜಟಿಲವಾಗಿಯೂ, ಹಾಗೂ ವಿಶ್ಲೇಷಿಸಲು ಕ್ಲಿಷ್ಟಕರವಾಗಿಯೂ ಮಾಡಿದೆ. ಪ್ರಾಚೀನ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯನ್ನು ವಿವರಿಸುವಾಗ, ಸಾಹಿತ್ಯಕ ಮೂಲಗಳು ಹಾಗೂ ಶಾಸನಗಳು 18 ಸಾಂಪ್ರದಾಯಿಕ ಜಾತಿಗಳನ್ನು ಕುರಿತಾಗಿ ಹೇಳುತ್ತವೆ (ಹದಿನೆಂಟು ಜಾತಿ ಅಥವಾ ಸಮಯ ಅಥವಾ ಅಷ್ಟಾದಶ ಪ್ರಕೃತಿ)

ವೈದಿಕ ಸಂಪ್ರದಾಯದಲ್ಲಿ ಹೇಳಲಾದ ನಾಲ್ಕು ವರ್ಣಗಳು ಹಾಗೂ ಸುಮಾರು 14 ಇತರ ಜಾತಿಗಳನ್ನು ಕುರಿತಾಗಿ ಕೆಲವು ಸಾಹಿತ್ಯಕ ಕೃತಿಗಳಲ್ಲಿ ಹೇಳಲಾಗಿದೆ.ನಂತರದ ಕಾಲದಲ್ಲಿ (17ನೆಯ ಶತಮಾನದ ಕೃತಿ), ಲಿಂಗಾಯಿತರನ್ನೂ 18 ಜಾತಿಗಳ ಪೈಕಿ ಒಂದೆಂದು ಹೆಸರಿಸಲಾಗಿದೆ.

ವರ್ಣಗಳ ಆಧಾರದ ಮೇಲೆ ಸಮಾಜದ ವಿಭಜನೆಯು ಬಹುಶಃ ಕರ್ನಾಟಕದಲ್ಲಿ ಕ್ರಿ.ಪೂ.೬೦೦ದಲ್ಲಿ ಪರಿಚಯಿಸಲ್ಪಟ್ಟಿದ್ದರೂ, ಜಾತೀಯ ಭೇದವು ಕೇವಲ ವರ್ಣ ಪದ್ಧತಿಯ ಬಳುವಳಿ ಮಾತ್ರವಲ್ಲವೆಂದು ತೋರುತ್ತದೆ. ವರ್ಣದ ಚಿಂತನೆಯ ಪರಿಚಯ ಇಲ್ಲದ ಕೆಲವು ಸ್ಥಳೀಯ ಕುಲಗಳು ಅಥವಾ ಗುಂಪುಗಳೂ ಸಹ, ಜಾತಿಗಳ ವರ್ಗ ಶ್ರೇಣೀಕರಣದಲ್ಲಿ ತಮ್ಮನ್ನು ತಾವು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿವೆ. ಸಾಮಾಜಿಕ ಭೇದಭಾವಗಳು ಇತ್ತೆನ್ನಲು ಇದುವೇ ಸಾಕ್ಷಿ. ಕರ್ನಾಟಕದ ಬಹುತೇಕ ಜಾತಿಗಳ ಮೂಲ, ಬುಡಕಟ್ಟು ಪಂಗಡಗಳಾಗಿದ್ದು, ವರ್ಣ ಪದ್ಧತಿಯ ವರ್ಗೀಕರಣಕ್ಕೂ, ಅವುಗಳಿಗೂ ಯಾವುದೇ ಸಂಬಂಧವಿಲ್ಲ.

೧೮ ಜಾತಿಗಳ ಪೈಕಿ, ಪೌರೋಹಿತ್ಯ ಹಾಗೂ ವ್ಯಾಸಂಗಿಕ ವಿಷಯಗಳಲ್ಲಿ ತೊಡಗಿಕೊಂಡಿರುವ ಬ್ರಾಹ್ಮಣರನ್ನು ಮೊದಲನೆಯದಾಗಿ ಹೆಸರಿಸಲಾಗಿದೆ.ಪ್ರಾಚೀನ ಕರ್ನಾಟಕದಲ್ಲಿ, ಕ್ಷತ್ರಿಯರ ನಿರ್ದಿಷ್ಟ ಪ್ರತ್ಯೇಕ ಜಾತಿಯು ಇರುವಂತೆ ತೋರುವುದಿಲ್ಲ.ಯಾವುದೇ ಯಶಸ್ವೀ ಸೈನಿಕನನ್ನು ಕ್ಷತ್ರಿಯನೆಂದು ಕರೆಯುತ್ತಿದ್ದರು.

ಮುಂದಿನ ಜಾತಿಯಾದ ವೈಶ್ಯರೂ ಸಹ ಸಡಿಲ ಗುಂಪಾಗಿದ್ದು, ಪ್ರಾಚೀನ ಕರ್ನಾಟಕದಲ್ಲಿ ವ್ಯಾಪಾರವನ್ನು ವೃತ್ತಿಯಾಗಿ ಅನುಸರಿಸುವ ಎಲ್ಲರನ್ನೂ ಇದಕ್ಕೆ ಸೇರಿರುವರೆಂದು ಗಣನೆಗೆ ತೆಗೆದುಕೊಳ್ಳುತ್ತಿದ್ದರು. ಬಣಜಿಗರು, ಬಲಿಜರು ಅಥವಾ ಬಲಂಜುಗಳು ಎಂದು ಕರೆಯಲ್ಪಡುವ ಸಣ್ಣ ಗುಂಪುಗಳೂ ಇದ್ದವು.

೧೧ನೆಯ ಶತಮಾನದ ಸಾಹಿತ್ಯಕ ಕೃತಿಯೊಂದು ಕೃಷಿಕರನ್ನು ಶೂದ್ರರೆಂದು ವಿವರಿಸಿದೆ. ಆದರೆ, ನಂತರದ ಸಾಹಿತ್ಯಕ ಕೃತಿಯೊಂದು ಒಕ್ಕಲಿಗರನ್ನು ಪ್ರತ್ಯೇಕ ಜಾತಿಯಾಗಿ ಪರಿಗಣಿಸಿದೆ. ಸಾಂಪ್ರದಾಯಿಕ ಪಟ್ಟಿಯಲ್ಲಿ ಹೆಸರಿಸಲಾದ ಇತರ ಜಾತಿಗಳ ಪೈಕಿ ಪಾಂಚಾಲರು (ಬಡಗಿಗಳು, ಶಿಲ್ಪಿಗಳು, ಹಾಗೂ ಅಕ್ಕಸಾಲಿಗರು), ಅಗಸರು (ಬಟ್ಟೆ ಒಗೆಯುವವರು), ನಾವಿದ (ಕ್ಷೌರಿಕ), ಜೇಡ ಅಥವಾ ದೇವ (ನೇಯ್ಗೆಯವರು), ಚಿಪ್ಪಿಗ (ಹೊಲಿಯುವವರು), ತೇಲಿಗ (ಎಣ್ಣೆ ವ್ಯಾಪಾರಿ), ಕುಂಬಾರ (ಮಡಿಕೆ ಮಾಡುವವನು), ಮೋಚಿಗ (ಚಪ್ಪಲಿ ಮಾಡುವವನು), ಮೇದ (ಬುಟ್ಟಿ ಹೆಣೆಯುವವರು), ಗೊಲ್ಲ (ಹಸುಗಳನ್ನು ಮೇಯಿಸುವವನು), ತಾಂಬೂಲಿಗ (ವೀಳ್ಯದೆಲೆ ವ್ಯಾಪಾರಿ), ದೊಂಬ (ದೊಂಬರಾಟದವರು) ಹಾಗೂ ಉಪ್ಪಾರರ (ಮನೆ ಕಟ್ಟುವವರು) ಹೆಸರಿದೆ.

ಪ್ರಸ್ತುತದಲ್ಲಿ, ಭೌಗೋಳಿಕ ಸಂಬಂಧ, ವ್ಯತ್ಯಾಸವಿರುವ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನ ಇತ್ಯಾದಿಗಳ ಆಧಾರದ ಮೇಲೆ, ೧೮ ಸಾಂಪ್ರದಾಯಿಕ ಜಾತಿಗಳಲ್ಲಿ ಉಂಟಾದ ಮತ್ತಷ್ಟು ಉಪ-ವಿಂಗಡನೆಯಿಂದ, ೧೮ಕ್ಕೂ ಹೆಚ್ಚು ಜಾತಿಗಳಿವೆ.ಈಗ ಕರ್ನಾಟಕದಲ್ಲಿ, ಮಾನವಶಾಸ್ತ್ರಜ್ಞರು ಗುರುತಿಸದ ಜಾತಿಗಳು ೨೦೦ಕ್ಕೂ ಹೆಚ್ಚಿದೆ.

ಈ ಪ್ರದೇಶದ ಮೂಲ ನಿವಾಸಿಗಳೆಂದು ನಂಬಲಾದ ಆದಿಕರ್ನಾಟಕರ ಸಾಂಪ್ರದಾಯಿಕ ಕಸುಬು ಚರ್ಮದ ಕೆಲಸವಾದರೂ, ಅವರು ಬಹುತೇಕ ಕೃಷಿ ಕೂಲಿ ಕಾರ್ಮಿಕರಾಗಿದ್ದಾರೆ.ಅನೇಕ ಬಾರಿ, ಅವರು ಗ್ರಾಮದ ದೂತರಾಗೂ ಕಾರ್ಯ ನಿರ್ವಹಿಸುತ್ತಾರೆ. ಇವರ ಪೈಕಿ ಅನೇಕ ಸ್ವಗೋತ್ರ ಹಾಗು ಅನ್ಯ ಗೋತ್ರ ಉಪ-ಘಟಕಗಳೂ ಇವೆ.

ಮಡಿವಾಳ, ಸಕಲವಾಡ, ರಾಜಕ ಹಾಗೂ ಧೋಬಿಗಳೆಂಬ ಹಲವಾರು ಹೆಸರುಗಳಿಂದ ಅಗಸರು ತಮ್ಮನ್ನು ಕರೆದುಕೊಳ್ಳುತ್ತಾರೆ. ಅವರ ಕೌಟುಂಬಿಕ ವೃತ್ತಿಯು ಬಟ್ಟೆ ಒಗೆಯುವುದು.ಇದರೊಂದಿಗೆ, ಕೆಲವರು ಕೃಷಿಕರಾಗಿದ್ದಾರೆ.ಇತರ ಸಮುದಾಯಗಳ ಮದುವೆ ಸಮಾರಂಭಗಳ ಸಮಯದಲ್ಲಿ, ಅವರು ಸಾಂಪ್ರದಾಯಿಕವಾಗಿ ಪಂಜು ಹಿಡಿಯುತ್ತಾರೆ. ಅವರಲ್ಲಿ ಶೈವರೂ, ವೈಷ್ಣವರೂ ಇದ್ದಾರೆ.



ಬಿದರಿ ಕಲೆಯಲ್ಲಿ ತೊಡಗಿರುವ ಕುಶಲಕರ್ಮಿಗಳು

ಅವರ ಪ್ರಮುಖ ದೈವ ಮೈಲಾರ. ಅವರಲ್ಲಿ ಪುರೋಹಿತ ವರ್ಗವಿಲ್ಲ. ವೀರಶೈವ ಸಿದ್ಧಾಂತವನ್ನು ಪರಿಪಾಲಿಸುವವರು, ಬಸವೇಶ್ವರನ ಸಮಕಾಲೀನರಾದ ಮಡಿವಾಳ ಮಾಚಯ್ಯನನ್ನು ಪೂಜಿಸುತ್ತಾರೆ. ಧಾರ್ಮಿಕ ಸಮಾರಂಭಗಳನ್ನು ನಡೆಸಿಕೊಡಲು ಇವರು ಬ್ರಾಹ್ಮಣ ಅಥವಾ ಲಿಂಗಾಯಿತ ಪುರೋಹಿತರನ್ನು ಆಮಂತ್ರಿಸುತ್ತಾರೆ. ಸಾಂಪ್ರದಾಯಿಕವಾಗಿ ವಿಧವಾ ವಿವಾಹಕ್ಕೆ ಅನುಮತಿ ಇರಲಿಲ್ಲ. ಸಾಮಾನ್ಯವಾಗಿ, ತಮ್ಮ ಸಮುದಾಯದ ಮೃತರನ್ನು ಸಮಾಧಿ ಮಾಡುತ್ತಾರೆ.

ರಾಜ್ಯದೆಲ್ಲೆಡೆ ಇರುವ ಬಣಜಿಗರು ಮೂಲಭೂತವಾಗಿ ವ್ಯಾಪಾರಸ್ಥರು. ನಾಯಿಡು, ಬಲಿಜ, ಮುಂತಾದ ಹಲವಾರು ಹೆಸರುಗಳಿಂದ ಈ ಜಾತಿಯನ್ನು ಕರೆಯಲಾಗುತ್ತದೆ. ಬಣಜಿಗರು ತೆಲುಗು ಮಾತನಾಡುತ್ತಾರೆ, ಆದರೆ ಕೆಲವು ಭಾಗಗಳಲ್ಲಿ ಕನ್ನಡ ಮಾತನಾಡುತ್ತಾರೆ. ಅವರಲ್ಲಿ ಅನೇಕ ಅಂತರ್ನಿಷೇಚನ ಹಾಗೂ ಬಹಿರ್ನಿಷೇಚನ ವಿಭಾಗಗಳಿವೆ. ಬಣಜಿಗರ ಪೈಕಿ ಪಂಚಮ ಬಣಜಿಗರು, ಜೈನ ಬಣಜಿಗರು ಹಾಗೂ ತೆಲುಗು ಬಣಜಿಗರೆಂಬ ನಿರ್ದಿಷ್ಟ ಗುಂಪುಗಳಿವೆ. ಅವರಲ್ಲಿ ಅಂತರ್ವಿವಾಹಗಳು ನಡೆಯುವುದಿಲ್ಲ. ಪಂಚಮ ಬಣಜಿಗರು ಲಿಂಗಾಯತರು. ತೆಲುಗು ಬಣಜಿಗರು ಶೈವರು ಅಥವಾ ವೈಷ್ಣವರಾಗಿರುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನೆಗೆ ಅಷ್ಟಾಗಿ ಅನುಮತಿ ಇಲ್ಲ. ಮೃತರನ್ನು ಸಾಮಾನ್ಯವಾಗಿ ಸಮಾಧಿ ಮಾಡಲಾಗುತ್ತದೆ.

ರಾಜ್ಯದ ವಿವಿಧ ಪ್ರದೇಶಗಳಲ್ಲಿ ಬೇಡರು ತಮ್ಮನ್ನು ವಿವಿಧ ಹೆಸರುಗಳಿಂದ ಕರೆದುಕೊಳ್ಳುತ್ತಾರೆ, ಅಂದರೆ, ಬ್ಯಾಡಾರ್, ನಾಯಕ ಮಕ್ಕಳು, ವಾಲ್ಮೀಕಿ, ತಲ್ವಾರ್, ಬೇರಡ್, ನಾಯಕ್ ಹಾಗೂ ಪಾಳಯಗಾರ್ ಎಂದು. ಚಿತ್ರದುರ್ಗ, ಶೋರಾಪುರ, ಮೊದಲಾದ ಕಡೆಯ ಪಾಳೇಗಾರರು ಈ ಜಾತಿಗೆ ಸೇರಿದವರು. ಸಾಂಪ್ರದಾಯಿಕವಾಗಿ ಅವರು ಬೇಟೆ ಆಡುವವರು ಹಾಗೂ ಹಕ್ಕಿಹಿಡುಕರಾಗಿದ್ದರು. ಅವರು ಕೃಷಿಯಲ್ಲಿ ಗುತ್ತಿಗೆದಾರರಾಗಿ ಹಾಗೂ ಕೂಲಿಕಾರರಾಗಿ ತೊಡಗಿಸಿ ಕೊಂಡಿದ್ದಾರೆ. ಅವರು ಕನ್ನಡ ಮಾತನಾಡುತ್ತಾರೆ ಹಾಗೂ ಹಿಂದೂ ಧರ್ಮದ ಆಚರಣೆಯನ್ನು ಮಾಡುತ್ತಾರೆ.ಅವರ ಜನಪ್ರಿಯ ದೇವತೆಯು ಹನುಮಂತ ಹಾಗೂ ಇತರ ಸ್ಥಳೀಯ ದೇವತೆಗಳನ್ನೂ ಅವರು ಆರಾಧಿಸುತ್ತಾರೆ. ಅವರಲ್ಲಿ ಶೈವರು, ವೈಷ್ಣವರಿಬ್ಬರೂ ಇದ್ದಾರೆ.ಅವರಲ್ಲಿ ಅಂತರ್ನಿಷೇಚನ ವಿಭಾಗಗಳಾದ ಉರು ಬೇಡರು ಹಾಗೂ ಮ್ಯಾಸ ಬೇಡರು ಇದ್ದಾರೆ. ಹಾಗೂ ಬಹಿರ್ನಿಷೇಚನ ಉಪ–ವಿಭಾಗಗಳಾದ ಬೆಡಗು ಎಂದು ಗುರುತಿಸಲ್ಪಡುತ್ತಾರೆ. ಹೆಣ್ಣುಮಕ್ಕಳನ್ನು ಬಸವಿಗಳಾಗಿ ಮುಡಿಪಾಗಿಡುವ ವಾಡಿಕೆಯು ಅವರಲ್ಲಿ ಹಿಂದೆ ಇತ್ತು. ಸಾಮಾನ್ಯವಾಗಿ ಹೆಣ್ಣುಮಕ್ಕಳನ್ನು ಯಲ್ಲಮ್ಮ ದೇವಿಗೆ ಮುಡಿಪಾಗಿ ಇಡುತ್ತಿದ್ದರು.ಆದರೆ, ಈ ಆಚರಣೆಯನ್ನು ಸರ್ಕಾರವು ನಿಷೇಧಿಸಿದೆ. ಅವರಲ್ಲಿನ ಜಂಗಮರು ಪೌರೋಹಿತ್ಯದ ಹೊಣೆಗಾರಿಕೆಗಳನ್ನು ವಹಿಸಿಕೊಳ್ಳುತ್ತಾರೆ. ಊರು ಮೃತರನ್ನು ಸಮಾಧಿ ಮಾಡಿದರೆ, ಮ್ಯಾಸ ಬೇಡರಲ್ಲಿ ದಹನಕ್ರಿಯೆ ಮಾಡುವ ವಾಡಿಕೆಯಿದೆ.

ರಾಜ್ಯದಲ್ಲಿ ಬೆಸ್ತರನ್ನು ಗಂಗಕುಲ, ಗಂಗಮತ, ಗಂಗೆಮಕ್ಕಳು, ಗಂಗಾಪುತ್ರ, ಗೌರಿಮತ, ಅಂಬಿಗ, ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಅವರ ಸಾಂಪ್ರದಾಯಿಕ ಕುಲಕಸುಬು ಮೀನುಗಾರಿಕೆ. ಅವರಲ್ಲಿ ವಿವಾಹ ವಿಚ್ಛೇದನೆ ಹಾಗೂ ವಿಧವಾ ವಿವಾಹಕ್ಕೆ ಅನುಮತಿ ಇದೆ ಹಾಗೂ ಮೃತರನ್ನು ಸಮಾಧಿ ಮಾಡುತ್ತಾರೆ.

ಬ್ರಾಹ್ಮಣರ ಪೈಕಿ, ಮೂರು ಮುಖ್ಯ ವಿಭಾಗಗಳಿವೆ (೧) ಸ್ಮಾರ್ತರು – ಶ್ರೀ ಶಂಕರರ ಅದ್ವೈತ ಸಿದ್ಧಾಂತದ ಪರಿಪಾಲಕರು, (೨) ವೈಷ್ಣವರು - ಮಧ್ವಾಚಾರ್ಯರ ದ್ವೈತ ಸಿದ್ಧಾಂತದ ಪರಿಪಾಲಕರು ಹಾಗೂ (೩) ಶ್ರೀವೈಷ್ಣವರು - ರಾಮಾನುಜರ ಅನುಯಾಯಿಗಳು.ಪ್ರತಿ ವಿಭಾಗದಲ್ಲೂ ಅನೇಕ ಉಪ–ವಿಭಾಗಗಳಿವೆ.ಸ್ಮಾರ್ತರಲ್ಲಿ ಕೋಟರು (ಅದೇ ಹೆಸರನ್ನು ಹೊತ್ತ ದಕ್ಷಿಣ ಕನ್ನಡದ ಒಂದು ಸ್ಥಳದಿಂದ ಬಂದವರು ಹಾಗೂ ಕನ್ನಡ ಮಾತನಾಡುವವರು), ಐಯ್ಯರ್‌ಗಳು (ಬಹುತೇಕವಾಗಿ



ಸಂಪ್ರದಾಯಿಕ ಆಚರಣೆಗಳು ಸ್ಥಳೀಯ ಸಂಸ್ಕೃತಿಯ ಜೀವಾಳ

ಕನ್ನಡ ಮಾತನಾಡುವವರು), ಮುಲುಕನಾಡು (ತೆಲುಗು ಮಾತನಾಡುವವರು), ಬಡಗನಾಡು, ಸಿರಿನಾಡು, ಬಬ್ಬೂರಕಮ್ಮೆ ಹಾಗೂ ಉಲುಚುಕಮ್ಮೆ (ಎಲ್ಲರೂ ಕನ್ನಡ ಮಾತನಾಡುವವರು), ಸಂಕೇತಿಗಳು (ಕೆಲವು ದ್ರಾವಿಡ ಭಾಷೆಗಳ ಮಿಶ್ರಣವಾದ ತಮ್ಮದೇ ಆದ ಭಾಷೆಯನ್ನು ಮಾತನಾಡುವವರು), ಹವ್ಯಕರು (ಉತ್ತರ ಕನ್ನಡದವರು – ಶಿವಮೊಗ್ಗ ಹವ್ಯೆಯ ಪ್ರದೇಶದವರು; ಕನ್ನಡ ಮಾತನಾಡುವವರು), ಚಿತ್ಪಾವನರು ಹಾಗೂ ಕರ್ಹಾಡರು (ಮರಾಠಿ ಮಾತನಾಡುವವರು) ಎಂದು ಇದ್ದಾರೆ.ಶ್ರೀವೈಷ್ಣವರ ಪೈಕಿ ಅತ್ಯಂತ ಪ್ರಮುಖವಾದವರು, ಬಹುಪಾಲು ತಮಿಳು ಹಾಗೂ ಸ್ವಲ್ಪ ತೆಲುಗನ್ನು ಮಾತನಾಡುವ ಅಯ್ಯಂಗಾರರು.ಮಾಧ್ವರ ಪೈಕಿ, ತುಳು ಮಾತನಾಡುವ ಶಿವಳ್ಳಿ (ಉಡುಪಿ) ಬ್ರಾಹ್ಮಣರು, (ಅವರಲ್ಲಿ ಬಹುಪಾಲು) ಕೊಂಕಣಿ ಮಾತನಾಡುವ ಗೌಡ ಸಾರಸ್ವತರು, ಮರಾಠಿ ಮಾತನಾಡುವ ದೇಶಸ್ಥರು ಹಾಗೂ ಗಣನೀಯ ಸಂಖ್ಯೆಯ ಕನ್ನಡ ಮಾತನಾಡುವ ಮಾಧ್ವರು ಪ್ರಮುಖರಾಗಿದ್ದಾರೆ.ಈ ಪ್ರತಿಯೊಂದು ವಿಭಾಗಗಳಲ್ಲೂ, ವೈದಿಕರು ಹಾಗೂ ಲೌಕಿಕರು ಇದ್ದಾರೆ. ವೈದಿಕರು ಪೌರೋಹಿತ್ಯವನ್ನು ಪರಿಪಾಲಿಸುವವರು. ಲೌಕಿಕರಲ್ಲಿ ವ್ಯಾಪಾರಸ್ಥರು, ಗುತ್ತಿಗೆದಾರರು, ಸರ್ಕಾರಿ ನೌಕರರು ಹಾಗೂ ಖಾಸಗಿ ನೌಕರರು ಇದ್ದಾರೆ. ಇತ್ತೀಚಿನ ವರ್ಷಗಳಲ್ಲಿ, ವೈದಿಕರು ಹಲವಾರು ವೃತ್ತಿ ಹಾಗೂ ಉದ್ಯೋಗಗಳನ್ನು ಮಾಡಲು ಪ್ರಾರಂಭಿಸಿದ್ದಾರೆ.ಹವ್ಯಕರು ಹಾಗೂ ಚಿತ್ಪಾವನರಂತಹ ಕೆಲವು ಬ್ರಾಹ್ಮಣರು ಅಡಿಕೆ ತೋಟಗಳನ್ನು ನೋಡಿಕೊಳ್ಳುತ್ತಾರೆ ಹಾಗೂ ಸಂಕೇತಿಗಳು ಕೃಷಿಯಲ್ಲಿ ತೊಡಗಲು ಪ್ರಾರಂಭಿಸಿದ್ದಾರೆ, ಅಲ್ಲದೆ ಈ ಮೊದಲು ಭೂಮಾಲೀಕರಾದ ಬ್ರಾಹ್ಮಣರು ಬಿಳಿ ಕಾಲರ್‌ನ ವೃತ್ತಿಗಳು (ಕಛೇರಿಯಲ್ಲಿ ಕುಳಿತು ಮಾಡುವ ಕೆಲಸಗಳು) ಹಾಗೂ ವ್ಯಾಪಾರದಲ್ಲಿ (ಹೋಟೇಲ್ ವ್ಯಾಪಾರ) ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ತೊಡಗಿದ್ದಾರೆ.ಮೃತರಿಗೆ ಗೌರವ ಸೂಚಕವಾಗಿ ಅವರು ವಾರ್ಷಿಕ ಶ್ರಾದ್ಧವನ್ನು ಆಚರಿಸುತ್ತಾರೆ. ಮದುವೆಯಾದ ಮಹಿಳೆಯರು ತುಳಸಿ ಗಿಡವನ್ನು ಪೂಜಿಸುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನೆಗೆ ಸಾಂಪ್ರದಾಯಿಕವಾಗಿ ಅನುಮತಿ ನೀಡುವುದಿಲ್ಲ ಮೃತರ ದಹನಕ್ರಿಯೆಯನ್ನು ಮಾಡುತ್ತಾರೆ.

ಬಂಟರು/ಬಂಟ್ಸ್ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಕೃಷಿಕ ಪ್ರಮುಖ ಜಾತಿಯಾಗಿದ್ದಾರೆ, ಆದರೆ ಅವರು ಹೆಚ್ಚಾಗಿ ಇರುವುದು ದಕ್ಷಿಣ ಕನ್ನಡದಲ್ಲಿ. ಅವರು ಹಿಂದೆ ಯೋಧರಾಗಿದ್ದರು. ಅವರು ಮಾತನಾಡುವ ಭಾಷೆಯ ಆಧಾರದ ಮೇಲೆ, ಅವರನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು – ಕನ್ನಡ ಮಾತನಾಡುವ ಹಾಗೂ ಉತ್ತರ ಪ್ರಾಂತಗಳಲ್ಲಿ ಇರುವ ನಾಡವರು ಹಾಗೂ ದಕ್ಷಿಣ ಭಾಗದಲ್ಲಿರುವ ತುಳು ಭಾಷೆಯನ್ನು ಮಾತನಾಡುವವರು.ಅವರ ಪೈಕಿ ಮೂರು ಪ್ರಮುಖ ಉಪವಿಭಾಗಗಳಿವೆ; (1) ಮಸಡಿಕ ಬಂಟರು, (2) ನಾಡವ ಬಂಟರು, ಹಾಗೂ (3) ಪರಿವಾರ ಬಂಟರು.ಈ ಮೊದಲು, ಅವರಲ್ಲಿ ಅನೇಕರು ಅಳಿಯ ಸಂತಾನವನ್ನು ಪರಿಪಾಲಿಸುವವರಾಗಿದ್ದರು (ಸ್ತ್ರೀ ಸಂತತಿಯ ಮೂಲಕ ಆಸ್ತಿಯ ಹಕ್ಕು ಪಡೆಯುವವರು). ಇತ್ತೀಚೆಗೆ ಬಂಟರು ಮೈಸೂರು ಪ್ರದೇಶದ ಒಕ್ಕಲಿಗರಿಗೆ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿ ಕೊಡುತ್ತಿದ್ದಾರೆ. ಬಂಟರ ಪೈಕಿ, ಅನೇಕ ಬಳಿಗಳು ಅಥವಾ ಒಳಪಂಗಡಗಳು  ಇವೆ. ಮೃತರ ದಹನಕ್ರಿಯೆಯನ್ನು ಅವರು ಮಾಡುತ್ತಾರೆ.

ದೇವಾಂಗರು ಒಂದು ಜನಾಂಗವಾಗಿ ನೇಯ್ಗೆಯ ಕಸುಬಿನಲ್ಲಿ ತೊಡಗಿದ್ದಾರೆ, ಆದರೆ ಸಾಮಾನ್ಯವಾಗಿ, ಕೃಷಿಯನ್ನೂ ಮಾಡುತ್ತಾರೆ.ಕೆಲವರು ವ್ಯಾಪಾರ, ಬಡಗಿ ಕೆಲಸ, ಕಲ್ಲು ಕೆಲಸ ಹಾಗೂ ಇತರ ಕಸುಬುಗಳನ್ನು ಮಾಡುತ್ತಿದ್ದಾರೆ.ಅವರಲ್ಲಿ ಹಲವಾರು ಸ್ವಗೋತ್ರ ಗುಂಪುಗಳಿವೆ.



*The first teacher*

ಅವರು ಶೈವರಾಗಿದ್ದು, ಗ್ರಾಮ್ಯ ದೇವಾನುದೇವತೆ, ಮಾರಿಯಮ್ಮ, ಮಾರಮ್ಮ, ಮುನೀಶ್ವರರನ್ನೂ ಆರಾಧಿಸುತ್ತಾರೆ. ಅವರ ಬುಡಕಟ್ಟಿನ ದೇವತೆಯು ಬನಶಂಕರಿ (ಈ ದೇವತೆಯ ಮುಖ್ಯ ದೇವಾಲಯವು ಬಾದಾಮಿಯ ಬಳಿ ಇದೆ). ಕೆಲವರು ವಿಷ್ಣು ಹಾಗೂ ಶಿವ ಇಬ್ಬರನ್ನೂ ಆರಾಧಿಸುತ್ತಾರೆ.

ಗಾಣಿಗರು, ಗಾಂಡ್ಲ ಹಾಗೂ ಸಜ್ಜನ ಗಾಣಿಗರು ಸಾಂಪ್ರದಾಯಿಕವಾಗಿ ಎಣ್ಣೆ ಗಾಣ ಹಾಗೂ ಎಣ್ಣೆ ವ್ಯಾಪಾರದಲ್ಲಿ ತೊಡಗಿರುತ್ತಾರೆ. ಚಾರಿತ್ರಿಕ ಕಾಲದಲ್ಲಿ, ಗಾಣಿಗರು ಅತ್ಯಂತ ಸಂಮೃದ್ಧಿಯನ್ನು ಪಡೆದ ಸಮುದಾಯವಾಗಿದ್ದರು, ಏಕೆಂದರೆ ದೀಪ ಹಚ್ಚಲು ಬಳಸುತ್ತಿದ್ದ ಏಕೈಕ ಇಂಧನವೆಂದರೆ ಎಣ್ಣೆ. ಪ್ರಸ್ತುತದಲ್ಲಿ, ಅವರು ಕೃಷಿ ಕಾರ್ಮಿಕರು ಹಾಗೂ ಇತರ ಕೂಲಿಯಾಳುಗಳಾಗಿ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ, ಮುಖ್ಯವಾಗಿ ಗಾಣಿಗರ ನಾಲ್ಕು ಉಪ–ಪಂಗಡಗಳಿವೆ, ಅವುಗಳೆಂದರೆ, ಜ್ಯೋತಿಪಣ, ಜ್ಯೋತಿನಾಗರೇವ, ದೇವಗಾಣಿಗ ಹಾಗೂ ಸಜ್ಜನ ಗಾಣಿಗ.ಮೊದಲ ಮೂರು ವಿಭಾಗಗಳಿಗೆ ಸೇರಿದ ಜನರು ಮೈಸೂರು ಪ್ರದೇಶದಲ್ಲಿ ಇರುತ್ತಾರೆ. ಸಜ್ಜನ ಗಾಣಿಗರು ಮುಖ್ಯವಾಗಿ ಬೆಳಗಾವಿ ಪ್ರದೇಶದಲ್ಲಿ ಇರುತ್ತಾರೆ. ಅವರು ಶೈವ ಹಾಗೂ ವೈಷ್ಣವ ದೇವರುಗಳನ್ನೂ ಆರಾಧಿಸುತ್ತಾರೆ. ಸಜ್ಜನ ಗಾಣಿಗರು ವೀರಶೈವ ತತ್ವವನ್ನು ಅಳವಡಿಸಿಕೊಂಡಿದ್ದಾರೆ. ವಿವಾಹ ವಿಚ್ಛೇದನೆ ಹಾಗೂ ವಿಧವಾ ವಿವಾಹಗಳು ಅವರಲ್ಲಿ ವಾಡಿಕೆಯಲ್ಲಿದೆ ಹಾಗೂ ಮೃತರನ್ನು ಸಮಾಧಿ ಮಾಡುತ್ತಾರೆ.

ಹಾಲಕ್ಕಿ ಒಕ್ಕಲಿಗರು ಕೃಷಿಕ ಜಾತಿಗೆ ಸೇರಿದವರಾಗಿದ್ದು, ಬಹುತೇಕವಾಗಿ ಬೇಸಾಯ ಹಾಗೂ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ.ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಲ್ಲಿ ಅವರು ಹೆಚ್ಚಾಗಿ ಕೇಂದ್ರೀಕೃತವಾಗಿದ್ದು ಸಣ್ಣ ಸಣ್ಣ ಗುಡಿಸಿಲುಗಳಲ್ಲಿ ವಾಸಿಸುತ್ತಾರೆ. ಅವರಲ್ಲಿ ಬಲವಾದ ಜಾತಿ ವ್ಯವಸ್ಥೆಯಿದೆ. ಕನ್ನಡದ ಒಂದು ಆಡುಭಾಷೆಯಾದ ಹಾಲಕ್ಕಿ ಕನ್ನಡವನ್ನು ಅವರು ಮಾತನಾಡುತ್ತಾರೆ. ಸಮುದಾಯದ ಒಬ್ಬ ಮುಖಂಡನು ಪುರೋಹಿತನ ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತಾನೆ. ಅದು ಕುಲದೇವರ ವಿಗ್ರಹ ಹಾಗೂ ಲಾಂಛನವನ್ನು ಪೂಜಿಸುವ ಸಮುದಾಯವಾಗಿದ್ದು, ಅವರ ಕುಲದೇವತಾಕಂಬಗಳನ್ನು ಬಳಿ ಅಥವಾ ಬೆಡಗು ಎಂದು ಕರೆಯುತ್ತಾರೆ. ಪುರಾತನ ಕಾಲದಿಂದಲೂ, ಬಳಿಯ ಸದಸ್ಯರು, ಅದು ಮರವಾಗಿದ್ದರೆ, ಅವರು ಸೇರಿದ ಕುಲದೇವತಾ ಕಂಬವನ್ನು ಕಡಿಯುವುದಾಗಲಿ, ಅಥವಾ ಅದು ಮೀನು ಅಥವಾ ಪ್ರಾಣಿಯಾಗಿದ್ದರೆ, ಅದನ್ನು ತಿನ್ನುವುದಾಗಲೀ ಮಾಡುವುದಿಲ್ಲ.ಅವರ ಸುಗ್ಗಿಯ ಕುಣಿತವು ಕರೀದೇವರಿಗೆ ಗೌರವಸೂಚಕವಾಗಿ ಮಾಡಲಾಗುತ್ತದೆ. ವಿವಾಹ ವಿಚ್ಛೇದನ ಹಾಗೂ ವಿಧವಾ ವಿವಾಹಕ್ಕೆ ಅವರಲ್ಲಿ ಅನುಮತಿ ಇದೆ. ಮೃತರಿಗೆ ಅವರು ದಹನಕ್ರಿಯೆ ಮಾಡುತ್ತಾರೆ.

ಹಳೇಪೈಕ, ದೇವರಮಕ್ಕಳು, ಬಿಲ್ಲವ, ನಾಮಧಾರಿಗಳೆಂದು, ರಾಜ್ಯದ ವಿವಿಧ ಭಾಗಗಳಲ್ಲಿ ಈಡಿಗರು ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ. ಹಳೇಪೈಕರು ಎಂಬ ಪದವು ಹಳೆಯ ಪದಾತಿ ಸೈನಿಕರು ಅಥವಾ ಪದಾತಿ/ಕಾಲ್ನಡಿಗೆಯ ಸೈನಿಕರು ಎಂಬುದನ್ನು ಸೂಚಿಸುತ್ತದೆ, ಏಕೆಂದರೆ ಕೆಲವರು ಸೇನೆಗಳಲ್ಲಿ ದಾಖಲಾಗಿದ್ದರು. ಹಳೇಪೈಕರಲ್ಲಿ ಅನೇಕರು ಕೃಷಿ ಹಾಗೂ ವ್ಯಾಪಾರದಲ್ಲಿ ಈಗ ತೊಡಗಿದ್ದಾರೆ. ಬಹುಪಾಲು ಅವರೆಲ್ಲರೂ ವೈಷ್ಣವರು. ಅವರ ಸಾಂಪ್ರದಾಯಿಕ ಕಸುಬಾಗಿದೆ. ಅನ್ಯಗೋತ್ರೀಯ ಬಳಿ ಎಂಬ ಅನೇಕ ಕುಲದೇವರ ಲಾಂಛನಕ್ಕೆ ಸಂಬಂಧಿಸಿದ ವಿಂಗಡನೆಗಳು ಅವರಲ್ಲಿ ಇದೆ. ಬಿಲ್ಲವ (ದಕ್ಷಿಣ ಕನ್ನಡದಲ್ಲಿ ಇದ್ದಂತೆ) ಎಂದರೆ ಬಿಲ್ಲುಗಾರ ಎಂದರ್ಥ. ದಕ್ಷಿಣ ಕನ್ನಡ ಬಿಲ್ಲವರು ಊರ ದೇವತೆ ಮಾರಿಯಮ್ಮನ ದೇವಾಲಯಗಳಲ್ಲಿ ಪುರೋಹಿತರಾಗಿ ಕಾರ್ಯ ನಿರ್ವಹಿಸುತ್ತಾರೆ, ಹಾಗಾಗಿ ಅವರನ್ನು ಪೂಜಾರಿಗಳೆಂದು ಕರೆಯುತ್ತಾರೆ. ತುಳುವಿನಲ್ಲಿ, ಬಿರುವರು, ಅಂದರೆ ಬಿಲ್ಲುಗಾರರೆಂದು ಕರೆಯುತ್ತಾರೆ. ಅವರಿಗೆ ತುಳುವಿನ ಇನ್ನೊಂದು ಹೆಸರು ಬೈದ್ಯ ಎಂದು. ತುಳು ಮಾತನಾಡುವ ಬಿಲ್ಲವರು ಅಳಿಯ ಸಂತಾನವನ್ನು ಪರಿಪಾಲಿಸುತ್ತಾರೆ (ಹೆಣ್ಣು ಸಂತತಿಯ ಮೂಲಕ ಆಸ್ತಿ ಪಡೆಯುವಿಕೆ).

ಸಾಂಪ್ರದಾಯಿಕವಾಗಿ ಕುರುಬರು ಕುರಿ ಕಾಯುವವರು ಹಾಗೂ ಕಂಬಳಿ ನೇಯುವವರಾಗಿದ್ದಾರೆ. ಅನೇಕರು ಕೃಷಿಯಲ್ಲೂ ತೊಡಗಿದ್ದಾರೆ. ಅವರನ್ನು ಮೂರು ಅಂತರ್ನಿಷೇಚನ ವಿಭಾಗಗಳಾಗಿ ೧.ಹಾಲು ಕುರುಬರು, ೨. ಹಂಡೆಕುರುಬರು ಹಾಗೂ ೩. ಕಂಬಳಿ ಕುರುಬರು ಎಂದು ವಿಂಗಡಿಸಲಾಗಿದೆ. ಈ ಪ್ರತಿಯೊಂದು ವಿಭಾಗಗಳನ್ನೂ ಮತ್ತಷ್ಟು ವಿಭಜಿಸಿ, ಕುಲದೇವತಾ ಲಾಂಛನದ ಸ್ವರೂಪವಿರುವ ಸಸ್ಯ, ಮರ, ಪ್ರಾಣಿ ಇತ್ಯಾದಿಗಳ ಹೆಸರನ್ನು ಹೊತ್ತ ಅನೇಕ ಅನ್ಯಗೋತ್ರ ಒಳಪಂಗಡಗಳಾಗಿ (ಬೆಡಗು/ಬಳಿ) ವಿಭಜಿಸಲಾಗಿದೆ. ಶೈವ ಸಿದ್ಧಾಂತವನ್ನು ಅನುಸರಿಸುವವರು ಅನೇಕರು, ಆದರೆ ಅವರ ಸಾಮಾನ್ಯ ದೇವತೆಯು ಬೀರದೇವರು.ಈ ಜಾತಿಯು ಸುವ್ಯವಸ್ಥಿತವಾಗಿದ್ದು, ಅದನ್ನು ಪ್ರಾದೇಶಿಕ ಆಧಾರದ ವಿಭಜನೆ ಮಾಡಲಾಗಿದೆ; ಈ ವಿಭಾಗದ ಪ್ರತಿಯೊಬ್ಬ ಮುಖಂಡನನ್ನೂ ಗೌಡನೆಂದು ಕರೆಯುತ್ತಾರೆ. ಅವರ ಪೈಕಿ, ವಿವಾಹ ವಿಚ್ಛೇದನಾ ಹಾಗೂ ವಿಧವಾ ವಿವಾಹಕ್ಕೆ ಅನುಮತಿ ಇದೆ. ಸಾಮಾನ್ಯವಾಗಿ ಮೃತರನ್ನು ಸಮಾಧಿ ಮಾಡಲಾಗುತ್ತದೆ. ಬೆಳಗಾವಿ ಪ್ರದೇಶದಲ್ಲಿ, ಮರಾಠಿ ಮಾತನಾಡುವ ವಿಭಾಗವನ್ನು ಧನಾಗರ ಎಂದು ಕರೆಯಲಾಗುತ್ತದೆ ಹಾಗೂ ಅವರು ಖಂಡೋಬನನ್ನು (ಮೈಲಾರ ಮಾರ್ತಾಂಡ) ಆರಾಧಿಸುತ್ತಾರೆ."ಹಾಲುಮತ" ಕುರುಬರಿಗೆ ಇರುವ ಇನ್ನೊಂದು ಹೆಸರು.

ಲಿಂಗಾಯಿತ ಎಂದರೆ ಧಾರ್ಮಿಕ ಸಂಪ್ರದಾಯದ ಒಂದು ವಿಧಾನ.ವಿಗ್ರಹ ಆರಾಧನೆ ಇಲ್ಲದ ಮತವಾಗಿ, ವೈದಿಕ ಧರ್ಮದ ವಿಧಿ–ವಿಧಾನಗಳಿಗೆ ವಿರೋಧಿಯಾದ ಈ ಮತವು, ಅನೇಕ ಜಾತಿಗಳಿಂದ ಅನುಯಾಯಿಗಳನ್ನು ಸೆಳೆಯಿತು.ಲಿಂಗಾಯಿತರು ರಾಜ್ಯದ ಎಲ್ಲ ಭಾಗಗಳಲ್ಲೂ ಇದ್ದಾರೆ.ಲಿಂಗಾಯಿತರ ಈ ವಿವಿಧ ವಿಭಾಗಗಳು ತಮ್ಮತಮ್ಮ ಗುರುತನ್ನು ಉಳಿಸಿಕೊಂಡಿವೆ. ಅಂತರ–ವಿವಾಹಗಳತ್ತ ಹೆಚ್ಚಿನ ಒಲವನ್ನು ಈ ಮೊದಲು ತೋರದಿದ್ದರೂ, ಒಂದು ವಿಭಾಗ ಹಾಗೂ ಮತ್ತೊಂದರ ನಡುವಣ ಎಲ್ಲೆಗಳು ಈಗ ಅನೇಕ ಬಾರಿ ಅಂತರವಿವಾಹಗಳಿಂದಾಗಿ ಮರೆಯಾಗುತ್ತಿದೆ.ಕೃಷಿ, ವ್ಯಾಪಾರ ಹಾಗೂ ವಾಣಿಜ್ಯದಲ್ಲಿ ಲಿಂಗಾಯತರು ತೊಡಗಿದ್ದಾರೆ.ಅವರಲ್ಲಿ ಕೆಲವು ಮುಖ್ಯ ವಿಭಾಗಗಳೆಂದರೆ: (೧) ಜಂಗಮರು – ಪೌರೋಹಿತ್ಯವನ್ನು ಮಾಡುವವರು ಹಾಗೂ ಇತರರಿಗಿಂತ ಮೇಲೆಂದು ಪರಿಗಣಿಸಲ್ಪಡುವವರು; (೨) ಪಂಚಮ ಅಥವಾ ಪಂಚಾಚಾರ್ಯರು; (೩) ಬಣಜಿಗರು, (ಸಾಂಪ್ರದಾಯಿಕ ವ್ಯಾಪಾರಿಗಳು) ಹಾಗೂ (೪) ಸಾದರು (ಸಾಂಪ್ರದಾಯಿಕವಾಗಿ ಕೃಷಿಯಲ್ಲಿ ತೊಡಗಿರುವವರು). ಗೌಡರು ಹಾಗೂ ನೊಣಬರು ಕೃಷಿ ಹಾಗೂ ಕೂಲಿಕಾರ್ಮಿಕರಾಗಿದ್ದು, ಅವರಲ್ಲಿ ನೊಣಬರು ಬಹುತೇಕವಾಗಿ ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ದೊರೆಯುತ್ತಾರೆ. ಇತರ ಪ್ರಮುಖ ಕಸುಬುಗಳು ಹಾಗೂ ವೃತ್ತಿ ಸೇವಾ ಜಾತಿಗಳಲ್ಲಿ ಕೆಲವು ಲಿಂಗಾಯಿತ ವಿಭಾಗಗಳು ಇರುತ್ತವೆ. ಅವರಿಗೆ ಮಾಂಸ ಹಾಗೂ ಹೆಂಡವು ನಿಷಿದ್ಧ.

ವಹ್ನಿ ಕುಲದವರು, ಶಂಭು ಕುಲ ಕ್ಷತ್ರಿಯರು ಹಾಗೂ ಅಗ್ನಿಕುಲ ಕ್ಷತ್ರಿಯರೆಂಬ ವಿವಿಧ ಹೆಸರುಗಳಿಂದ ತಿಗಳರು ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ. ಅವರು ಅಗ್ನಿ ಬನ್ನಿರಾಯನ ವಂಶಸ್ಥರು.ಮುಖ್ಯವಾಗಿ, ಅವರು ರಾಜ್ಯದ ಮೈಸೂರು ಹಾಗೂ ಮಂಗಳೂರು ಪ್ರದೇಶ ಹಾಗೂ ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇರುತ್ತಾರೆ. ಅವರ ಪಾರಂಪರಿಕ ಕಸುಬು ಅಡುಗೆಮನೆಯ ಉತ್ಪನ್ನಗಳ ತಯಾರಿಕೆ ಹಾಗೂ ಪುಷ್ಪಕೃಷಿಯಾಗಿದೆ. ಅವರಲ್ಲಿ ಅನೇಕರು ಈಗ ಕೃಷಿ ಹಾಗೂ ಇನ್ನಿತರ ಕಸುಬುಗಳಲ್ಲಿ ತೊಡಗಿದ್ದಾರೆ. ಅವರು ಕನ್ನಡ ಅಥವಾ ತಮಿಳನ್ನು ಮಾತನಾಡುತ್ತಾರೆ. ಅವರು ಧರ್ಮರಾಯನ ಭಕ್ತರೂ ಹೌದು. ಅವರು ಶೈವ ಹಾಗೂ ವೈಷ್ಣವ ಪಂಥಗಳೆರಡನ್ನೂ ಪರಿಪಾಲಿಸುತ್ತಾರೆ. ಮಾರಮ್ಮ, ಕೊಲ್ಲಾಪುರದಮ್ಮ, ಎಲ್ಲಮ್ಮ ಹಾಗೂ ಸಿದ್ದೇದೇವರನ್ನು ಆರಾಧಿಸುತ್ತಾರೆ. ಅವರಲ್ಲಿ ಎರಡು ಪ್ರಮುಖ ಸ್ವಗೋತ್ರ ವಿಂಗಡನೆಗಳಿವೆ. ಜಾತಿಯನ್ನು ಅನೇಕ ಬಹಿರ್ನಿಷೇಚನ ವಿಂಗಡನೆಗಳಲ್ಲಿ ವಿಭಜಿಸಲಾಗಿದ್ದು, ಅವುಗಳಲ್ಲಿ ಪ್ರತಿಯೊಂದಕ್ಕೂ, ಅವರವರ ನಿರ್ದಿಷ್ಟ ಮಾರ್ಗದರ್ಶಕ ದೇವತೆಯ ಹೆಸರು ಇದೆ. ಕರಗ ಉತ್ಸವವು ಅವರ ವಿಶೇಷ ಹಬ್ಬ. ವಿವಾಹ ವಿಚ್ಛೇದನಾ ಹಾಗೂ ವಿಧವಾ ವಿವಾಹಕ್ಕೆ ಸಮ್ಮತಿ ಇದೆ. ಮೃತರನ್ನು ಸಮಾಧಿ ಮಾಡುತ್ತಾರೆ.

ವಿಶ್ವಕರ್ಮರು ಕುಶಲಕರ್ಮಿಗಳ ಜಾತಿಯಾಗಿದ್ದು ಸಾಂಪ್ರದಾಯಿಕ ಕೌಶಲ್ಯಗಳಿಗಾಗಿ ಹೆಸರುವಾಸಿ ಆಗಿದ್ದಾರೆ. ಐದು ಕುಶಲಕರ್ಮಿಗಳ ಗುಂಪುಗಳಿಗೆ ಸಂಯುಕ್ತ ಹೆಸರು ಪಾಂಚಾಲ ಎಂದು.ಅವರ ಪೈಕಿ, ವಿವಿಧ ವಿಭಾಗಗಳಾದ ಅಕ್ಕಸಾಲೆ, ಆಚಾರಿ, ಸೋನಾರ್, ಪತ್ತರ್, ಸುತರ್ ಹಾಗೂ ಕಮ್ಮಾರರನ್ನು ಒಳಗೊಂಡಿದೆ. ಸಾಮಾನ್ಯವಾಗಿ, ಅವರು ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ ಹಾಗೂ ಕಂಚಿನೊಂದಿಗೆ ಕೆಲಸ ಮಾಡುತ್ತಾರೆ. ಬಡಗಿ ಕೆಲಸ ಹಾಗೂ ಶಿಲ್ಪಕಲೆಯಲ್ಲೂ ತೊಡಗಿದ್ದು, ಕೆಲವರು ಕೃಷಿ ಹಾಗೂ ಅದಕ್ಕೆ ಸಂಬಂಧಪಟ್ಟ ಕಸುಬುಗಳನ್ನು ಅನುಸರಿಸುತ್ತಾರೆ.ಅವರಲ್ಲಿ ಐದು ಗೋತ್ರಗಳಿದ್ದು, ಈ ಗೋತ್ರಗಳಲ್ಲಿ ಅನೇಕ ಉಪ–ವಿಭಾಗಗಳಿವೆ.ಕೆಲವು ಪಾಂಚಾಲರು ಅವರದೇ ಆದ ಪುರೋಹಿತರನ್ನು ಹೊಂದಿರುತ್ತಾರೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳು ಅವರಲ್ಲಿ ಪ್ರಚಲಿತವಾಗಿಲ್ಲ.ಮೃತರಿಗೆ ದಹನಕ್ರಿಯೆ (?) ಮಾಡುತ್ತಾರೆ.

ವಡ್ಡರನ್ನು ಬೋವಿಗಳೆಂದೂ ಕರೆಯುತ್ತಾರೆ. ಅವರಲ್ಲಿ ಮೂರು ಮುಖ್ಯ ವಿಭಾಗಗಳಿವೆ: ಕಲ್ಲು ಒಡ್ಡರು, ಮಣ್ಣು ಒಡ್ಡರು ಹಾಗೂ ಉಪ್ಪು ಒಡ್ಡರು. ಪ್ರತೀ ವಿಭಾಗದಲ್ಲೂ, ಅನೇಕ ಬಹಿರ್ನಿಷೇಚನ ಉಪ–ವಿಭಾಗಗಳಿವೆ. ಮೂಲದಲ್ಲಿ, ಅವರು ತೆಲುಗು ಮಾತನಾಡುವ ಪ್ರದೇಶಕ್ಕೆ ಸೇರಿದವರೆಂದು ತೋರುತ್ತದೆ. ಇವರು ರಾಜ್ಯದ ಎಲ್ಲ ಭಾಗಗಳಲ್ಲೂ ಇದ್ದಾರೆ.

ಸಾಮಾನ್ಯವಾಗಿ, ಕಲ್ಲು ಗಣಿಗಾರಿಕೆ ಹಾಗೂ ಕಲ್ಲು ಕೆಲಸವು ಅವರ ಸಾಂಪ್ರದಾಯಿಕ ಕಸುಬಾಗಿದೆ.ಈ ಹಿಂದೆ, ಕೆರೆ, ಕೋಟೆ ಹಾಗೂ ಅರಮನೆಗಳನ್ನು ನಿರ್ಮಾಣ ಮಾಡಲು, ಅವರನ್ನು ರಾಜರು ನೇಮಕ ಮಾಡಿಕೊಳ್ಳುತ್ತಿದ್ದರು.ಬಾವಿ ತೋಡುವುದು, ರಸ್ತೆ ಹಾಗೂ ಕೆರೆಗಳ ನಿರ್ಮಾಣದಲ್ಲಿ ಅವರನ್ನು ಬಳಸಿಕೊಳ್ಳುತ್ತಾರೆ.ಕೆಲವರು ಕೃಷಿ ಹಾಗೂ ವ್ಯಾಪಾರದಲ್ಲಿ ತೊಡಗಿದ್ದಾರೆ.ಅವರ ಕುಟುಂಬ ದೇವತೆಗಳು ಮಾರುತಿ, ದುರ್ಗವ್ವ, ದ್ಯಾಮವ್ವ ಹಾಗೂ ಎಲ್ಲವ್ವ.ಅವರು ವಿಶೇಷವಾಗಿ ತಿರುಪತಿ ವೆಂಕಟರಮಣನನ್ನು ಆರಾಧಿಸುತ್ತಾರೆ.ಅವರ ಮಾರ್ಗದರ್ಶಕ ದೇವತೆಯು ಗೋರಪ್ಪ. ಅವರು ಭೂತ–ಪ್ರೇತಗಳಲ್ಲೂ ನಂಬಿಕೆ ಉಳ್ಳವರಾಗಿದ್ದಾರೆ.ಅವರ ಪೈಕಿ ಇರುವ ಕೆಲವು

ವೈಯಕ್ತಿಕ ಹೆಸರುಗಳು, ತಾವು ಪೂಜಿಸುವ ಅನೇಕ ದೇವರುಗಳ ಹೆಸರುಗಳನ್ನು ಪ್ರತಿನಿಧಿಸುತ್ತದೆ; ಉದಾಹರಣೆಗೆ ಗಿಡ್ಡ, ಹನುಮ, ನಾಗ, ದ್ಯಾಮ ಮುಂತಾದ ಪುರುಷರಿಗೂ, ಹಾಗೂ ಹಲಗವ್ವ, ನಾಗವ್ವ, ದುರ್ಗವ್ವ ಮುಂತಾದ ಹೆಸರುಗಳು ಮಹಿಳೆಯರಿಗೂ ಇರುತ್ತದೆ. ಅವರ ಮದುವೆ ಹಾಗೂ ಇತರ ಮುಖ್ಯ ಸಮಾರಂಭಗಳಲ್ಲಿ, ಕಟ್ಟಿನ್ಮಾನಿ ಎಂದು ಕರೆಯಲ್ಪಡುವ ಮುಖ್ಯಸ್ಥನ ಪಾತ್ರವನ್ನು ಗುರುತಿಸಲಾಗಿದೆ. ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಕ್ಕೆ ಅವರಲ್ಲಿ ಅನುಮತಿ ಇದ್ದು ಮೃತರನ್ನು ಸಮಾಧಿ ಮಾಡುತ್ತಾರೆ.

ಹಳ್ಳಿಕಾರ, ಕುಂಚಟಿಗ, ರೆಡ್ಡಿ, ಕಾಪು, ಕಮ್ಮ ಹಾಗೂ ಮೊರಮ್ ಒಕ್ಕಲಿಗರು, ಮೊದಲಾದ ವಿಭಾಗಗಳು ಒಕ್ಕಲಿಗರಲ್ಲಿವೆ. 'ಒಕ್ಕಲಿಗ' ಎಂಬ ಪದಕ್ಕೆ ಕನ್ನಡದಲ್ಲಿ ಕೃಷಿಕ/ಉಳುಮೆ ಮಾಡುವವನು ಎಂದರ್ಥ, ಅವರನ್ನು ಗೌಡರೆಂದೂ ಕರೆಯುತ್ತಾರೆ.ಕೃಷಿಯೊಂದಿಗೆ, ಇತರ ಕಸುಬುಗಳಲ್ಲೂ ಒಕ್ಕಲಿಗರು ತೊಡಗಿದ್ದಾರೆ.ಶಿವಮೊಗ್ಗ ಜಿಲ್ಲೆಯಲ್ಲಿ, ಒಕ್ಕಲಿಗರಿಗೆ ನಾಯಕ್ ಹಾಗೂ ಹೆಗ್ಗಡೆ ಎಂಬ ಉಪನಾಮಗಳು ಇರುತ್ತವೆ.ಅವರಲ್ಲಿ ಅನೇಕರು ಕನ್ನಡವನ್ನು ಮಾತನಾಡಿದರೆ ಕಾಪುಗಳು ಹಾಗೂ ರೆಡ್ಡಿಗಳು ತೆಲುಗನ್ನು ಮಾತನಾಡುತ್ತಾರೆ.

ಒಕ್ಕಲಿಗ ಜಾತಿಯು ಏಕಜಾತೀಯ ಗುಂಪಲ್ಲ.ಅವರಲ್ಲಿ ಅನೇಕ ವಿಭಾಗಗಳಿದ್ದು, ಕೆಲವರು ಶೈವರು ಹಾಗೂ ಕೆಲವರು ವೈಷ್ಣವರೂ ಆಗಿದ್ದಾರೆ.ಗಂಗಡಿಕಾರರಲ್ಲಿ (ಚಾರಿತ್ರಿಕ ಕಾಲದಲ್ಲಿ ಗಂಗವಾಡಿ ಪ್ರದೇಶದಲ್ಲಿ ವಾಸವಾದವರು) ಎರಡು ಮುಖ್ಯ ಉಪ-ವಿಭಾಗಗಳಿವೆ: ಸ್ವಗೋತ್ರ ಗುಂಪಾದ ಪೆಟ್ಟಿಗೆಯವರು ಹಾಗೂ ಬುಜ್ಜಣಿಗೆಯವರು. ಗಂಗಡಿಕಾರರ ಕುಟುಂಬ ದೇವತೆಯು ಮಂಡ್ಯ ಜಿಲ್ಲೆಯ ಚುಂಚನಗಿರಿಯಲ್ಲಿರುವ ಭೈರವ ದೇವರು. ಅವರು ಆದಿಚುಂಚನಗಿರಿಯ ಮಠದ ಅನುಯಾಯಿಗಳಾಗಿದ್ದಾರೆ.ಒಕ್ಕಲಿಗರು ಪುರೋಹಿತರಾಗಿ ಕಾರ್ಯ ನಿರ್ವಹಿಸಲು ಬ್ರಾಹ್ಮಣರನ್ನು ಆಮಂತ್ರಿಸುತ್ತಾರೆ.ವಿವಾಹ ವಿಚ್ಛೇದನಾ ಹಾಗೂ ವಿಧವಾ ವಿವಾಹಗಳು ಅವರಲ್ಲಿ ವಿರಳ, ಹಾಗೂ ಮೃತರನ್ನು ಸಾಮಾನ್ಯವಾಗಿ ದಹನ ಮಾಡುತ್ತಾರೆ.

ಇತರ ಜಾತಿಯ ಗುಂಪುಗಳ ಪೈಕಿ ಅಂಬಲವಾಸಿ (ದೇವಾಲಯ ನಿರ್ವಹಣೆಯಲ್ಲಿ ತೊಡಗಿರುವವರು), ಅರಸು (ಭೂಮಾಲೀಕರು ಹಾಗೂ ಉಳುಮೆ ಮಾಡುವವರು; ಮೈಸೂರಿನ ಈ ಹಿಂದಿನ ಆಳುವ ಕುಲದವರು), ಬನಿಯಾ (ವ್ಯಾಪಾರಿಗಳು), ಬುಂಡೆ ಬೆಸ್ತ (ಮೀನುಗಾರರು), ಚಪ್ಪೇಗಾರ್ (ಕೊಂಕಣಿ ಬಡಗಿಗಳು), ಗಾಬಿಟ್ (ಸಮುದ್ರ ಸಂಚಾರಿಗಳು, ಮೀನುಗಾರರು), ಗೌರಿಗ (ಬಿದಿರಿನ ಕೆಲಸಗಾರರು), ಗೋಸಾವಿ (ಧಾರ್ಮಿಕ ಭಿಕ್ಷುಕರು ), ಗುರವ್ (ದೇವಾಲಯದ ಆಳುಗಳು; ಸಂಗೀತಗಾರರು), ಕಣಿಯರ್‌ಗಳು (ಶಾಸ್ತ್ರ ಹೇಳುವವರು, ಆಯುರ್ವೇದದ ಪಂಡಿತರು), ಕಸರ್ (ತಾಮ್ರ, ಹಿತ್ತಾಳೆ ಪಾತ್ರೆಗಳ ತಯಾರಕರು), ಲಾಡರ್ (ಯೇಳೇಗಾರ, ರಾವುತ/ಅಶ್ವಪಡೆಯ ಸೈನಿಕರು , ಕುದುರೆ ವ್ಯಾಪಾರ ಮಾಡುವವರು), ಮುಡಲಿ (ವ್ಯಾಪಾರಿಗಳು), ನಗರ್ತ (ಕೃಷಿಕರು ಹಾಗೂ ವ್ಯಾಪಾರಿಗಳು), ನಟುವ (ವೃತ್ತಿಪರ ನರ್ತಕರು), ಪರಿವಾರ (ಕೃಷಿ ಕಾರ್ಮಿಕರು), ಪಟ್ವೇಕಾರಿ (ಪಟ್ವೇಕಾರರು, ರೇಶ್ಮೆ {ಹೆಣಿಗೆಯ ಪಟ್ಟಿ } ನೂಲನ್ನು ನೇಯುವವರು; ವ್ಯಾಪಾರಿಗಳು), ಶುದ್ಧ ಶೈವ ಶಿವಾರ್ಚಕ ತಮ್ಮಾಡಿ (ಶಿವ ದೇವಾಲಯದ ಅರ್ಚಕರು), ಸೋಮ ವಂಶರು, ಆರ್ಯ ಕ್ಷತ್ರಿಯರು (ಚಿತ್ರಗಾರ, ಬಡಗಿಗಳು, ವರ್ಣ ಚಿತ್ರ ಬಿಡಿಸುವವರು, ಸಣ್ಣ ವ್ಯಾಪಾರಿಗಳು), ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯರು (ರೇಶ್ಮೆ ನೇಯ್ಗೆ ಮಾಡುವವರು, ಸಣ್ಣ ವ್ಯಾಪಾರಿಗಳು), ಇತ್ಯಾದಿ.

**ಮುಸಲ್ಮಾನರು**

ಮುಸಲ್ಮಾನರ ಪೈಕಿಯೂ, ಅನೇಕ ವಿಂಗಡನೆಗಳಿದ್ದರೂ, ಜಾತಿ ಪದ್ಧತಿ ಅವರಲ್ಲಿ. ಅವರಲ್ಲಿ ಅನೇಕರು ಅನ್ಯಗೋತ್ರ ಗುಂಪಿನವರಾಗಿದ್ದಾರೆ.ಮುಸಲ್ಮಾನರಲ್ಲಿ ನಗರ ಪ್ರದೇಶಗಳಲ್ಲಿ ಕೇಂದ್ರೀಕೃತವಾಗುವ ಸ್ಪಷ್ಟ ಒಲವು ಇರುವಂತೆ ತೋರುತ್ತದೆ.ಮಲಯಾಳಿಯ ಆಡುಭಾಷೆಯನ್ನು ಮಾತನಾಡುವ ಮಾಪಿಲ್ಲಾಸ್ (ಮೊಪ್ಲಾಸ್), ಕೊಂಕಣಿ ಮಾತನಾಡುವ ನವಾಯತರು ಹಾಗೂ ತಮಿಳು ಮಾತನಾಡುವ ಕಡಿಮೆ ಸಂಖ್ಯೆಯ ಲಬ್ಬೆಗಳನ್ನು ಹೊರತುಪಡಿಸಿ, ಅವರಲ್ಲಿ ಅನೇಕರು ಉರ್ದು ಮಾತನಾಡುತ್ತಾರೆ. ಮುಸಲ್ಮಾನರಲ್ಲಿ ಸುನ್ನಿ ಹಾಗೂ ಶಿಯಾಗಳೆಂಬ ಎರಡು ಮುಖ್ಯ ವಿಭಾಗಗಳಿದ್ದರೂ, ಸೈಯದ್, ಶೇಖ್, ಇತ್ಯಾದಿ ಬಿರುದುಗಳನ್ನು ಹೊತ್ತ ಅನೇಕ ವರ್ಗಗಳು ಆ ಎರಡೂ ವಿಭಾಗಗಳಲ್ಲೂ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಸಲ್ಮಾನರ ನಿರ್ದಿಷ್ಟ ವಿಭಾಗವೊಂದು, ಅದರಲ್ಲೂ ವಿಶೇಷವಾಗಿ ಭಟ್ಕಳದ ಸುತ್ತಲೂ ಕಾಣುವ ಮುಸಲ್ಮಾನರನ್ನು ನವಾಯತರೆಂದು ಕರೆಯಲಾಗುತ್ತದೆ.ಅವರು



ಪ್ರಾರ್ಥನಾ ಮಂದಿರ




ಕೊಂಕಣಿ ಭಾಷೆಯನ್ನು ಮಾತನಾಡುತ್ತಾರೆ.ನವಾಯತರು ಹಾಗೂ ಮಾಪಿಲ್ಲಾಗಳು ಶಫ಼ಿಗಳಾದರೆ, ಉರ್ದು ಮಾತನಾಡುವ ಮುಸಲ್ಮಾನರು ಹನಫ಼ಿಗಳು.ಮುಸಲ್ಮಾನರಲ್ಲಿ ವಿವಾಹ ವಿಚ್ಛೇದನ ಹಾಗೂ ವಿಧವಾ ವಿವಾಹಕ್ಕೆ ಸಮ್ಮತಿ ಇದೆ. ಅವರು ವೈಯಕ್ತಿಕವಾಗಿ ಮೊಹಮ್ಮದೀಯ ಕಾನೂನನ್ನು ಪರಿಪಾಲಿಸುತ್ತಾರೆ. ಮೃತರನ್ನು ಸಮಾಧಿ ಮಾಡುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ಧಿ ಮುಸಲ್ಮಾನರೆಂಬ ಪ್ರತ್ಯೇಕ ಧಾರ್ಮಿಕ ಗುಂಪೊಂದು ಇದೆ.

## ಕ್ರಿಶ್ಚಿಯನ್ನರು

ಕ್ರಿಶ್ಚಿಯನ್ನರ ಪೈಕಿ, ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟೆಂಟ್ ಪಂಥದವರಿಬ್ಬರೂ ಇದ್ದಾರೆ. ಧರ್ಮ ಪ್ರಚಾರಕರ ಪ್ರಾರಂಭಿಕ ಪ್ರಭಾವವನ್ನು ಅನುಭವಿಸಿದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರಿಶ್ಚಿಯನ್ನರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಅವರು ಗೋವಾದಿಂದ ವಲಸೆ ಬಂದ ಕೊಂಕಣಿ ಮಾತನಾಡುವ ಕ್ಯಾಥೋಲಿಕ್‌ರಾಗಿದ್ದು, ಕೃಷಿ ಹಾಗೂ ಉದ್ಯಮದಲ್ಲಿ ಸಕ್ರಿಯರಾಗಿದ್ದಾರೆ. ಪೋರ್ಚುಗೀಸ್ ಮೂಲದ ಡಿಸೋಜ, ಫ಼ರ್ನಾಂಡಿಸ್, ಲೋಬೋ ಅಥವಾ ಪೇಸ್ ಎಂಬ ಉಪನಾಮಗಳನ್ನು ಹೊಂದಿರುತ್ತಾರೆ.ವಿವಾಹ ವಿಚ್ಛೇದನ ವಿರಳ ಹಾಗೂ ವಿಧವಾ ವಿವಾಹವು ಕ್ರಿಶ್ಚಿಯನ್ನರಲ್ಲಿ ಪ್ರಚಲಿತವಾಗಿದೆ. ಮೃತರನ್ನು ಸಮಾಧಿ ಮಾಡುತ್ತಾರೆ. ಉತ್ತರ ಕನ್ನಡದಲ್ಲಿ ಸಿದ್ಧಿ ಕ್ರಿಶ್ಚಿಯನ್ನರೆಂಬ ಪ್ರತ್ಯೇಕ ಧಾರ್ಮಿಕ ಗುಂಪು ಇದೆ (ಸಿದ್ಧಿ ಶೀರ್ಷಿಕೆಯ ಕೆಳಗೂ ನೋಡಿ). ದಕ್ಷಿಣ ಕನ್ನಡದ ಪ್ರಾಟೆಸ್ಟೆಂಟರು ತುಳು ಮಾತನಾಡುತ್ತಾರೆ. ರಾಜ್ಯದ ಇತರ ಭಾಗಗಳಲ್ಲಿ ಇರುವ ಕ್ರಿಶ್ಚಿಯನ್ನರು, ಪ್ರಾಟೆಸ್ಟೆಂಟ್ ಹಾಗೂ ಕ್ಯಾಥೋಲಿಕ್ಕರಿಬ್ಬರೂ ಸೇರಿದಂತೆ, ಕನ್ನಡ ಹಾಗೂ ತಮಿಳು ಮಾತನಾಡುತ್ತಾರೆ.

## ಆಂಗ್ಲೊ-ಇಂಡಿಯನ್ನರು

ಆಂಗ್ಲೋ-ಇಂಡಿಯನ್ನರು ಕ್ರೈಸ್ತ ಮತದ ಅನುಯಾಯಿಗಳಾದರೂ, ಅವರನ್ನು ಕ್ರಿಶ್ಚಿಯನ್ನರಿಂದ ವಿಭಿನ್ನವಾಗಿ ಪರಿಗಣಿಸಬೇಕು.ಅವರಲ್ಲಿ ಬಹುಪಾಲು ಜನರು ಬೆಂಗಳೂರು ನಗರ, ಮೈಸೂರು, ಹುಬ್ಬಳ್ಳಿ ಹಾಗೂ ಕೋಲಾರ ಚಿನ್ನದ ಗಣಿಗಳಲ್ಲಿ ವಾಸಿಸಿದ್ದಾರೆ. ಪಾಶ್ಚಿಮಾತ್ಯ ಶೈಲಿಯ ಜೀವನಕ್ರಮವನ್ನು ಅಳವಡಿಸಿಕೊಂಡ ಅವರು, ಆಂಗ್ಲ ಭಾಷೆಯನ್ನು ಮಾತನಾಡುತ್ತಾರೆ.

### ಜೈನರು

ಜೈನರು ಅತ್ಯಲ್ಪ ಸಂಖ್ಯೆಯಲ್ಲಿ ಅಂದರೆ ರಾಜ್ಯದ ಒಟ್ಟಾರೆ ಜನಸಂಖ್ಯೆಯ 0.75ರಷ್ಟು ಇದ್ದಾರೆ. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲೂ ಜೈನರು ವಾಸ ಮಾಡುತ್ತಾರೆ. ಬೆಳಗಾವಿ ಜಿಲ್ಲೆಯಲ್ಲಿ ಅತ್ಯಧಿಕ ಸಂಖ್ಯೆಯ ಜೈನರನ್ನು ಕಾಣಬಹುದು. ದಕ್ಷಿಣ ಕನ್ನಡದಲ್ಲಿ ಅವರು ಪ್ರಭಾವಿ ಜನಾಂಗವಾಗಿದ್ದು, ಅಲ್ಲಿ ತುಳು ಮಾತನಾಡುತ್ತಾರೆ. ಅವರಲ್ಲಿ ಅನೇಕರು ಅಳಿಯ ಸಂತಾನವನ್ನು ಪರಿಪಾಲಿಸುತ್ತಾರೆ. ಇತರ ಪ್ರದೇಶಗಳಲ್ಲಿ ಅವರು ಕನ್ನಡ ಮಾತನಾಡುತ್ತಾರೆ. ಜೈನರಲ್ಲಿ ಎರಡು ಪ್ರಮುಖ ಪಂಗಡಗಳಿವೆ – ದಿಗಂಬರ ಹಾಗೂ ಶ್ವೇತಾಂಬರ.ನಗರ ಹಾಗೂ ಪಟ್ಟಣಗಳಲ್ಲಿ, ಹೆಚ್ಚಾಗಿ ಗುಜರಾತ ಹಾಗೂ ರಾಜಸ್ಥಾನದಿಂದ ಬಂದ ಶ್ವೇತಾಂಬರ ಜೈನರಿದ್ದಾರೆ. ಅವರಿಗೆ ತಮ್ಮದೇ ಆದ ಪುರೋಹಿತ ವರ್ಗವಿದ್ದು, ಮೃತರ ದಹನ ಕ್ರಿಯೆಯನ್ನು ಮಾಡುತ್ತಾರೆ. ವಿವಾಹ ವಿಚ್ಛೇದನೆ ಹಾಗೂ ವಿಧವಾ ವಿವಾಹವು ಅವರಲ್ಲಿ ಸಾಮಾನ್ಯವಾಗಿ ಆಚರಣೆಯಲ್ಲಿಲ್ಲ.

### ಬೌದ್ಧರು

ರಾಜ್ಯದಲ್ಲಿ ಬೌದ್ಧರು ಅಷ್ಟಾಗಿ ಇಲ್ಲ.2001ರ ಗಣತಿಯಂತೆ ರಾಜ್ಯದಲ್ಲಿ 3,93,300 ಜನ ಬೌದ್ಧರು ಇದ್ದರು. ಅವರಲ್ಲಿ ಅನೇಕರು, ಬೆಳಗಾವಿ ಹಾಗೂ ಗುಲ್ಬರ್ಗಾ ಪ್ರದೇಶಗಳಲ್ಲಿ ದೊರೆಯುವ ನವೀನ–ಬೌದ್ಧರು (ಹರಿಜನರಿಂದ ಮತಾಂತರಗೊಂಡವರು). ಉತ್ತರ ಕನ್ನಡದ ಮುಂಡಗೋಡ್ ಹಾಗೂ ಮೈಸೂರು ಜಿಲ್ಲೆಯ ಹುಣಸೂರಿನ ಬಳಿಯ ಬೈಲಕೊಪ್ಪದ ಎರಡು ಪುನರ್ವಸತಿ ಆಶ್ರಯ ತಾಣ/ಕ್ಯಾಂಪ್‌ಗಳಲ್ಲಿ ಇರುವ ಟಿಬೆಟ್ಟಿನ ಶರಣಾಗತರು ಬೌದ್ಧ ಧರ್ಮದ ಅನುಯಾಯಿಗಳಾಗಿದ್ದಾರೆ. ಅವರಿಗೆ ತಮ್ಮದೇ ಆದ, ಲಾಮಾಗಳೆಂದು ಕರೆಯುವ ಟಿಬೆಟ್ಟಿಯನ್ ಭಿಕ್ಷುಗಳು ನಡೆಸುವ ಪ್ರತ್ಯೇಕ ಸನ್ಯಾಸಿ ಮಂದಿರಗಳು ಇವೆ.

### ಸಿಕ್ಖರು

ಇವರು ಹೆಚ್ಚಾಗಿ ಬೆಂಗಳೂರು ಜಿಲ್ಲೆಯಲ್ಲಿ ಕೇಂದ್ರೀಕೃತವಾಗಿದ್ದಾರೆ. ಅಲ್ಲದೆ ನಾಗಮಂಗಲ, ಕೃಷ್ಣರಾಜಪೇಟೆ ಹಾಗೂ ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲೂ ಸಿಕ್ಖರು ಇದ್ದಾರೆ. ಪಂಜಾಬ್ ಮೂಲದವರಾದ ಅವರು, ಹೈದರ್ ಹಾಗೂ ಟಿಪ್ಪು ಕಾಲದಲ್ಲಿ ಇಲ್ಲಿ ಬಂದು ನೆಲೆಸಿದರು.ಅವರು ಕನ್ನಡ ಮಾತನಾಡುತ್ತಾರೆ. ಅವರಲ್ಲಿ ವಿವಾಹ ವಿಚ್ಛೇದನಾ ಹಾಗೂ ವಿಧವಾ ವಿವಾಹಕ್ಕೆ ಅನುಮತಿ ನೀಡಲಾಗುತ್ತದೆ.ಮೃತರ ದಹನ ಕ್ರಿಯೆಯನ್ನು ಮಾಡುತ್ತಾರೆ.

## ವಲಸೆ

ಕರ್ನಾಟಕದ ವರ್ಣಮಯ ವೈವಿಧ್ಯತೆಗೆ, ವಲಸೆಯ ಪ್ರಕರಣಗಳು ಕೊಡುಗೆ ನೀಡಿವೆ.೨೦೦೧ರ ಜನಗಣತಿಯ ಪ್ರಕಾರ, ಈ ಕೆಳಕಂಡ ಚಿತ್ರಣವು ದೊರೆತಿದೆ:

**ವಲಸೆ ಬಂದವರು:**

೫,೮೨,೭೯ ವಲಸಿಗರು ಆಂಧ್ರ ಪ್ರದೇಶದಿಂದ,
೫,೪೭,೧೫೬ ತಮಿಳುನಾಡಿನಿಂದ,
೩,೮೭,೫೬೭ ಮಹಾರಾಷ್ಟ್ರದಿಂದ,
೨,೮೩,೭೬೪ ಕೇರಳದಿಂದ,
೭೯,೭೩೦ ರಾಜಸ್ಥಾನದಿಂದ,
೩೮,೬೭೯ ಉತ್ತರ ಪ್ರದೇಶದಿಂದ,
೩೧,೦೬೦ ಪಶ್ಚಿಮ ಬಂಗಾಳದಿಂದ,
೨೯,೮೯೮ ಬಿಹಾರದಿಂದ,
೨೫,೩೭೫ ಗುಜರಾತಿನಿಂದ,
೧೬,೮೪೦ ಒರಿಸ್ಸಾದಿಂದ,
೪,೬೬೪ ಪಂಜಾಬ್‌ನಿಂದ,
೪,೬೬೪ ಜಮ್ಮು ಮತ್ತು ಕಾಶ್ಮೀರದಿಂದ,
೧,೦೨,೯೨೫ ಇತರ ರಾಜ್ಯಗಳಿಂದ ಹಾಗೂ
೪೪,೩೦೫ ದೇಶದ ಹೊರಗಿನಿಂದ.

**ಅಂತೆಯೇ, ಕರ್ನಾಟಕದಿಂದ ವಲಸೆ ಹೋದವರು:**

೧೨,೬೭,೪೨೧ ಮಹಾರಾಷ್ಟ್ರಕ್ಕೆ
೨,೮೮,೮೬೨ ಆಂಧ್ರಪ್ರದೇಶಕ್ಕೆ
೧,೩೨,೮೮೨ ಗೋವಾಗೆ,
೧,೧೯,೯೩ ತಮಿಳುನಾಡಿಗೆ,
೫೫,೬೮೫ ಕೇರಳಕ್ಕೆ,
೨೮,೦೯೮ ಗುಜರಾತಿಗೆ,
೧೬,೩೦೯ ದೆಹಲಿಗೆ,
೧೨,೨೬೨ ಉತ್ತರ ಪ್ರದೇಶಕ್ಕೆ,
೧೦,೪೩೨ ಮಧ್ಯ ಪ್ರದೇಶಕ್ಕೆ,
೯,೦೭೭ ಬಿಹಾರ್‌ಗೆ,
೮,೨೯೪ ರಾಜಸ್ಥಾನಕ್ಕೆ,
೫,೩೨೭ ಪಶ್ಚಿಮ ಬಂಗಾಳಕ್ಕೆ,
೪,೦೪೨ ಪಂಜಾಬ್‌ಗೆ,
೩,೨೯೩ ಹರಿಯಾಣಕ್ಕೆ,
೨,೬೯೭ ಉತ್ತರಾಂಚಲಕ್ಕೆ,
೨,೬೩೫ ಛತ್ತೀಸ್‌ಘಡಕ್ಕೆ,

೨,೨೭೪ ಝಾರ್ಖಂಡ್‌ಗೆ,
೨,೦೨೩ ಪುದುಚ್ಚೇರಿಗೆ,
೧,೮೩೦ ಚಂಡೀಘಡಕ್ಕೆ,
೧,೮೨೨ ಒರಿಸ್ಸಾಗೆ,
೧,೪೫೨ ಜಮ್ಮು ಹಾಗೂ ಕಾಶ್ಮೀರಕ್ಕೆ,
೧,೪೩೮ ಅಸ್ಸಾಂಗೆ ಹಾಗೂ
೪೦,೬೭೧ ದೇಶದ ಇತರ ಭಾಗಗಳಿಗೆ ವಲಸೆ ಹೋಗಿದ್ದಾರೆ.

## ಅಲೆಮಾರಿ ಜನಸಂಖ್ಯೆ

ಕರ್ನಾಟಕದ ಸ್ವಾರಸ್ಯಕರ ಅಂಶವೆಂದರೆ, ವಿಶ್ವದೆಲ್ಲೆಡೆಯಿಂದ ಬರುವ ಅಸ್ಥಿರ/ಅಲೆಮಾರಿ ಜನಸಂಖ್ಯೆಯ ಅವಿರತ ಹರಿವು. ಇವರ ಪೈಕಿ, ವಾರಾನುಗಟ್ಟಲೆಯಿಂದ ತಿಂಗಳಾನುಗಟ್ಟಲೆ ಇರುವ ಕರ್ನಾಟಕದ ವ್ಯಾಪಾರ ಹಾಗೂ ಉದ್ದಿಮೆಗಳೊಂದಿಗೆ ಸಂಬಂಧಿಸಿದ ಗಣನೀಯ ಸಂಖ್ಯೆಯ ವೃತ್ತಿಪರರು, ಹಾಗೂ ಸಂಖ್ಯಾ ದೃಷ್ಟಿಯಿಂದ ಬೃಹತ್ ಆದ ಹಾಗೂ ಬೇರೆಡೆ ಇರುವ ಅದೇ ರೀತಿಯ ಸಂಸ್ಥೆಗಳಿಗಿಂತ ಉತ್ತಮ ಗುಣಮಟ್ಟದ ವಿವಿಧ ವೃತ್ತಿಪರ ಕಾಲೇಜುಗಳಲ್ಲಿ ನೋಂದಣಿಯಾಗಿ, ಕೆಲವು ವರ್ಷಗಳು ಇಲ್ಲೇ ತಂಗುವ ಬೃಹತ್ ಸಂಖ್ಯೆಯ ವಿಧ್ಯಾರ್ಥಿಗಳೂ ಸೇರಿದ್ದಾರೆ.ಯಾತ್ರಿಕರೂ ಸಹ ಅಲೆಮಾರಿ ಜನಸಂಖ್ಯೆಯ ಭಾಗವಾಗಿದ್ದಾರೆ.

ಕರ್ನಾಟಕದ ಸಾಮಾಜಿಕ ವೈವಿಧ್ಯತೆಯು, ವೈವಿಧ್ಯಪೂರ್ಣ ಹಾಗೂ ಅತ್ಯಂತ ಸಂಕೀರ್ಣವಾಗಿದ್ದು, ಅದರ ಸೂಕ್ಷ್ಮತೆಗಳನ್ನು ಅರಿತುಕೊಳ್ಳಲು ಸಮಯ ಬೇಕಾಗುತ್ತದೆ.ವೈವಿಧ್ಯತೆ ಹಾಗೂ ಸಂಕೀರ್ಣತೆ ಇದ್ದರೂ, ಸಹಿಷ್ಣುತೆಯ ಹಾಗೂ ಶಾಂತಿಯುತ ಸಹಬಾಳ್ವೆಯ ಸಾಮಾನ್ಯ ಸ್ವಭಾವವು ಗಮನಿಸಬೇಕಾದ ಅಂಶ.ವಿವಿಧ ಜಾತಿ ಹಾಗೂ ಗುಂಪುಗಳ ಜನರನ್ನು ಅನೇಕ ಸಾಮಾಜಿಕ ಹಾಗೂ ಧಾರ್ಮಿಕ ಜಾತ್ರೆ ಹಾಗೂ ಸಮಾರಂಭಗಳು ಒಗ್ಗೂಡಿಸುತ್ತವೆ.